SAPTHAGIRI (KANNADA)
SPIRITUAL ILLUSTRATED MONTHLY
Volume:04, Issue: 8 Pages:56
March - 2025, Price Rs. 20/-

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಮಾರ್ಚ್ 2025
ಬೆಲೆ ರೂ. 20/-



ತಿರುಮಲೆ
ಸ್ವಾಮಿಯವರ ಯುಗಾದಿ ಆಸ್ಥಾನ
30-03-2025



04-02-2025 ರಂದು ರಥಸಪ್ತಮಿ ಸಂದರ್ಭದಲ್ಲಿ
ನಡೆದ ಸಪ್ತವಾಹನಗಳ ದೃಶ್ಯಮಾಲಿಕೆ







ಉತ್ತರ ಪ್ರದೇಶ ರಾಜ್ಯದಲ್ಲಿರುವ ಪ್ರಯಾಗ ರಾಜ್‌ನಲ್ಲಿ ನಡೆದ ಮಹಾಕುಂಭಮೇಳಾ ಸಂದರ್ಭವಾಗಿ ತಿ.ತಿ.ದೇ., ನಮೂನೆ ಆಲಯವನ್ನು ನಿರ್ಮಿಸಿದರು. ಅಲ್ಲಿರುವ ಉತ್ಸವ ಮೂರ್ತಿಗಳಿಗೆ ನಡೆದ ಕೈಂಕರ್ಯಗಳ ದೃಶ್ಯಮಾಲಿಕೆ. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಿ.ಆರ್. ನಾಯ್ಡು ದಂಪತಿಗಳು ಮತ್ತು ಇತರ ಅಧಿಕಾರಿಗಳು ಪಾಲ್ಗೊಂಡರು.

# ಭಗವದ್ಗೀತೆ



**ಅವ್ಯಕ್ತೋಽಯಮಚಿಂತ್ಯೋಽಯಂ ಅವಿಕಾರ್ಯೋಽಯಮುಚ್ಯತೇ ॥**
**ತಸ್ಮಾದೇವಂ ವಿದಿತ್ವೈನಂ ನಾನುಶೋಚಿತುಮರ್ಹಸಿ ॥**

**ಜೀವನೂ ಭಗವಂತನಂತೆಯೆ ಇಂದ್ರಿಯಗಳಿಗೆ ಕಾಣಸಿಗದವನು, ಊಹೆಗೆ ನಿಲುಕದವನು ಬದಲಾವಣೆಗೊಳ್ಳದವನು, ಆದ್ದರಿಂದ ಜೀವನ ನಿಜಸ್ಥಿತಿಯನ್ನು ಅರಿತು ನೀನು ವ್ಯಥೆ ಪಡಬಾರದು.**

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -25)



**ಬಾರಯ್ಯ ಶ್ರೀನಿವಾಸ ಭಕ್ತರ ಬಳಿಗೆ ॥ಪ॥**

**ತೋರಯ್ಯ ನಿನ್ನ ದಯ ತೋಯಜಾಂಬಕನೆ ॥ಅ.ಪ.॥**

**ದುರುಳರ ತರಿವಂಥ ವರಚಕ್ರಧಾರಿ।**
**ಪರಮಾತ್ಮ ಪರಬೊಮ್ಮ ಪರರಿಗುಪಕಾರಿ॥**

**ಅರಣ್ಯದಿ ಮೊರೆಯಿಟ್ಟ ಕರಿರಾಜಗೊಲಿದಿ ।**
**ತರಳಪ್ರಹ್ಲಾದನ್ನ ವೈರಿಯ ಮುರಿದಿ॥**

**ವರಶೇಷಗಿರಿಯಲ್ಲಿ ನಿರುತ ನೀನಿರುವಿ ।**
**ಹರಿದಾಸರು ಕರೆದರೆ ಎಲ್ಲಿದ್ದರೂ ಬರುವಿ॥**

**ಅನಂತನಾಮನೆ ನಿನ್ನ ಅನಂತಸದ್ಗುಣವ ।**
**ನೆನವರಿಗೊಲಿವಂಥ ಪವಮಾನನೀಶಾ॥**

**ಅಜಭವಾಧಿಪ ನೀನು ವಿಜಯಸಾರಥಿಯೆ।**
**ತ್ರಿಜಗವಂದಿತ ಈಶ ವಿಜಯವಿಠಲನೆ॥**

**- ವಿಜಯವಿಟ್ಠಲ**

(ಹತ್ತನೆಯ ದಶಕ)

# ದಯಾ ಶತಕಮ್



**ನಾತಃ ಪರಂ ಕಿಮಪಿ ಮೇ ತ್ವಯಿ ನಾಥನೀಯಂ ಮಾತರ್ದಯೇ ಮಯಿ ಕುರುಷ್ವ ತಥಾ  ಪ್ರಸಾದಮ್।**

**ಬದ್ಧಾದರೋ ವೃಷಗಿರಿಪ್ರಣಯೀ ಯಥಾಽಸೌ ಮುಕ್ತಾನುಭೂತಿಮಿಹ ದಾಸ್ಯತಿ ಮೇ ಮುಕುಂದಃ ॥100॥**

ಈ ದಶಕದ  ಪ್ರಾರಂಭದಿಂದಲೂ ಆಚಾರ್ಯರು ದಯಾದೇವಿಯನ್ನು ತನ್ನಲ್ಲಿ ವಿಶೇಷವಾದ ಅನುಗ್ರಹವಿಟ್ಟು  ಉದ್ಧಾರಮಾಡಬೇಕೆಂದು ವಿಧವಿಧವಾಗಿ ಪ್ರಾರ್ಥಿಸುತ್ತಿದ್ದಾರಷ್ಟೆ.  ಅಸಂಬಂಧವಾಗಿ, ಹಿಂದಿನ  ಪದ್ಯದಲ್ಲಿ ಅವರು ತಾನು ದಯಾದೇವಿಯ ವಿಶೇಷವಾದ ಕೃಪೆಗೆ ಬಹಳ ಮಟ್ಟಿಗೆ ಯೋಗ್ಯನಾದ  ಪಾತ್ರನೆಂಬುದನ್ನು ವಿವರಿಸಿ ಭಗವಂತನಿಂದ ದೂರನಾಗುತ್ತಿರುವ ತನ್ನನ್ನು ಅನುಗ್ರಹವೆಂಬ ಸರಪಣಿಯಿಂದ  ಬಂಧಿಸಿ ತನ್ನ ಉದ್ಧಾರ ಮಾಡಬೇಕೆಂದು ಪ್ರಾರ್ಥಿಸಿದರು.  ಈ ಪದ್ಯದಲ್ಲಿ ಕೊನೆಯದಾಗಿ ತಮ್ಮ ಅಪೇಕ್ಷೆಯನ್ನು ದಯಾದೇವಿಯ ಮುಂದಿಡುತ್ತಾರೆ.

ಮಕ್ಕಳು ತಮ್ಮ ಇಷ್ಟಾರ್ಥವು ತಪ್ಪದೇ ನೆರವೇರಬೇಕೆನ್ನುವಾಗ ತಮ್ಮ ಬೇಡಿಕೆಯನ್ನು ತಾಯಿಯ ಮುಂದಿಟ್ಟು ಆಕೆಯ ಮೂಲಕ ತಂದೆಗೆ ಹೇಳಿಸಿ ತಮ್ಮ ಕಾರ್ಯಸಿದ್ಧಿಗೆ ಪ್ರಯತ್ನಿಸುತ್ತಾರೆ ಮತ್ತು  ಈ ರೀತಿಯ ಪ್ರಯತ್ನದಲ್ಲಿ  ಬಹುಮಟ್ಟಿಗೆ  ಕೃತ ಕಾರ್ಯರಾಗುತ್ತಾರೆ.  ಇದನ್ನು  ನಾವು ನಮ್ಮ ನಿತ್ಯಜೀವನದಲ್ಲಿ ಗಮನಿಸುತ್ತೇವೆ. ತಾಯಿಯಾದವಳು ಸ್ವಾಭಾವಿಕವಾಗಿಯೇ ಕರುಣಾ ಮಯಿ, ಮಕ್ಕಳ ಕಷ್ಟಗಳನ್ನು  ನೋಡಿಸಹಿಸಲಾರಳು.  ಆದ್ದರಿಂದ  ತನ್ನ ಪ್ರಭಾವವನ್ನು  ಸಮಯೋಚಿತವಾಗಿ  ಬೀರಿ ಮಕ್ಕಳ ಇಷ್ಟಾರ್ಥಗಳನ್ನು ತನ್ನ ಪತಿಯು ನೆರವೇರಿಸಿಕೊಡುವಂತೆ ಮಾಡುತ್ತಾಳೆ.   ಇದೇ  ತತ್ತ್ವವನ್ನನುಸರಿಸಿ  ಆಚಾರ್ಯರು ತಮ್ಮ ಇಷ್ಟಾರ್ಥ  ಸಿದ್ಧಿಗೋಸ್ಕರ ದಯಾದೇವಿಯ ಮೊರೆಹೊಕ್ಕು ಆಕೆಯ ಮೂಲಕ ಭಗವಂತನಲ್ಲಿ ತಮ್ಮ ಪ್ರಾರ್ಥನೆಯನ್ನು  ಸಲ್ಲಿಸಿದ್ದಾರೆ. ಆಕೆಯು ಸಕಲ ಲೋಕಕ್ಕೂ ಮಾತೆಯೂ ಸ್ವತಃ ದಯೆಯೇ ಆಗಿರುವವಳೂ ಆದ್ದರಿಂದ ತನ್ನ ಪ್ರಾರ್ಥನೆ  ಅಂಗೀಕೃತವಾಗಿಯೇ ತೀರುವುದೆಂಬ  ನಂಬಿಕೆಯನ್ನು  ಇಲ್ಲಿ ವ್ಯಕ್ತಪಡಿಸಿದ್ದಾರೆ.  ಆದ್ದರಿಂದಲೇ ಅವರು ತನಗೆ ಮುಕ್ತಿಸಿಗುವುದಂತೂ  ಸರಿಯೆ. ಆದರೆ ಮುಕ್ತಿಯ ನಂತರ ಅಂದರೆ ಪರಲೋಕದಲ್ಲಿ  ದೊರಕಬಹುದಾದ  ಸಂಪತ್ತು.  ದೈವೀಸಂಪತ್ತು - ಇಲ್ಲಿಯೇ  ದೊರಕುವಂತೆ ಅನುಗ್ರಹಿಸಬೇಕೆಂದು ಪ್ರಾರ್ಥಿಸಿದ್ದಾರೆ.  ತಾಯಿಯೆಂದು ಸಂಬೋಧಿಸಿರುವುದರಿಂದ ಆಕೆ  ತನ್ನಲ್ಲಿ ವಿಶೇಷವಾಗಿ ಕರುಣೆತೋರಿಸುವಳೆಂದೂ ಹೀಗೆ ಲೋಕಮಾತೆಯ ಮೂಲಕ ಹೋಗುವುದರಿಂದ ಲೋಕವಿಹಿತನಾದ  ಭಗವಂತನಲ್ಲಿ ತನ್ನ ಪ್ರಾರ್ಥನೆ  ತಿರಸ್ಕೃತವಾಗುವುದೇ  ಇಲ್ಲವೆಂಬುದು ದೃಢಪಟ್ಟಂತಾಯ್ತು.  ಅಲ್ಲದೆ ಸ್ವತಃ ಭಗವಂತನೂ  ಕೂಡ ಅಂತಹ ಇನ್ನೂ ಅನೇಕ ಉದಾರವಾದ ಗುಣಗಳುಳ್ಳವನೆಂಬುದಾಗಿ ಸ್ತುತಿಸಲ್ಪಡುವನಲ್ಲವೆ ಅಶ್ರಿತವತ್ಸಲನೆಂದು ಹೊಗಳಿಸಿಕೊಳ್ಳಲ್ಪಡುವನಲ್ಲವೆ?  ಸ್ವತಃ ಈ ಗುಣವುಳ್ಳ ಜಗದ್ರಕ್ಷಕನಾದ ಭಗವಂತನು ಲೋಕ ಮಾತೆಯಿಂದ ಪ್ರೇರಿತನಾದ ಮೇಲಂತೂ  ಭಕ್ತರ ಪ್ರಪನ್ನರ, ಉದ್ಧಾರವನ್ನು ಮಾಡಿಯೇ  ತೀರುವನೆಂಬುದನ್ನು  ಇನ್ನೂ ಹೆಚ್ಚಾಗಿ  ಒತ್ತಿ ಹೇಳುವ ಅವಶ್ಯಕತೆಯೇ ಇಲ್ಲ. “ಯದ್ಭ್ರೂಭಂಗಾಃ  ಪ್ರಮಾಣಂ ಸ್ಥಿರಚರ ರಚನಾ ತಾರತಮ್ಯೇ ಮೂಲಾರೇಃ” ಎಂದು ಶ್ರೀ ಪರಾಶರಭಟ್ಟರು ಸ್ತುತಿಸಿದ್ದಾರಲ್ಲವೆ ? ಭಗವಂತನ ಈ ಆಶ್ರಿತವತ್ಸಲತ್ವವನ್ನು ಆಚಾರ್ಯರು ‘ಬದ್ಧಾದರಃ’ ‘ವೃಷಗಿರಿ ಪ್ರಣಯೀ’ ಎಂಬ ವಿಶೇಷಣಗಳಿಂದ ವಿಶದಪಡಿಸಿದ್ದಾರೆ. ಭಗವಂತನು ಬದ್ಧಾದರನು. ಅಂದರೆ ಚತೇನರ  ವಿಷಯದಲ್ಲಿ ಅವರು ಅಪರಾಧಿಗಳೇ ಆಗಿದ್ದರೂ  ಕೂಡ, ವಾತ್ಸಲ್ಯವುಳ್ಳವನು, ನಿರ್ವ್ಯಾಜಪ್ರೇಮವನ್ನು ತೋರಿಸಿ ಚೇತನರ ಉದ್ಧಾರಮಾಡುವನೆಂಬುದು ಪ್ರಸಿದ್ಧವಾದ ವಿಷಯ.  ಅದಕ್ಕೋಸ್ಕರವೇ ಅವನು ವೃಷಗಿರಿ ಪ್ರಣಯಿಯಾಗಿರುವನು.  ವೃಷಶೈಲ (ತಿರುಮಲೆ) ದಲ್ಲಿ ಬಂದು ನೆಲಸಿ,  ಅಲ್ಲಿರುವ  ಸಮಸ್ತ ಜೀವರಾಶಿಗಳಲ್ಲಿ  ಅವುಗಳ ಉದ್ಧಾರದಲ್ಲಿ, ಆಸಕ್ತಿ ವಹಿಸಿರುವನು.  ಈ ವೃಷಶೈಲದಲ್ಲಿ  ಬಂದು ಎಲ್ಲರಿಗೂ ಉಪದ್ರವ ಕೊಡುತ್ತಿದ್ದ  ಸಿಂಹಾದನೆಂಬ ಅಸುರನನ್ನು ವಧೆ ಮಾಡುವುದಕ್ಕಾಗಿ ತನ್ನ ಸಮಸ್ತ ಶಕ್ತಿಗಳನ್ನೂ - ಪಂಚಾಯುಧಗಳನ್ನು  ತನ್ನ  ಭಕ್ತನಾದ ಚಕ್ರವರ್ತಿಗೆ  ಕೊಟ್ಟು ಆ ಅಸುರನ  ಬಾಧೆಯಿಂದ ಎಲ್ಲರನ್ನೂ  ರಕ್ಷಿಸಲಿಲ್ಲವೇ?   ಹೀಗೆ  ಭಗವಂತನ ಆಶ್ರಿತವತ್ಸಲತ್ವವನ್ನು ವಿಶದೀಕರಿಸುವುದೇ  ಆಚಾರ್ಯರು ಈ ಎರಡು  ವಿಶೇಷಣಗಳನ್ನು ಉಪಯೋಗಿಸಿರುವುದರ ಪ್ರಯೋಜನವೆಂಬುದು ಸ್ಪಷ್ಟವಾಯ್ತು.

ತಿರುಮಲ ತಿರುಪತಿ ದೇವಸ್ಥಾನಗಳು ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

# ಸಪ್ತಗಿರಿ

ಶ್ರೀ ಕ್ರೋಧಿ - ಶ್ರೀವಿಶ್ವಾವಸು ನಾಮ ಸಂವತ್ಸರ ಫಾಲ್ಗುಣ - ಚೈತ್ರಮಾಸ ಸಂಚಿಕೆ

ಸಂಪುಟ : 04 ಮಾರ್ಚ್ - 2025 ಸಂಚಿಕೆ : 08



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಶ್ರೀ ಜೆ. ಶ್ಯಾಮಲ ರಾವ್, ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ., ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ ಕೆ. ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.,
ಪಿ.ಜಿ. ಡಿಪ್ಲೊಮಾದಲ್ಲಿ ಎಫಿಗ್ರಫಿ, ಡಿಪ್ಲೊಮಾ ಇನ್ ಯೋಗ

**ಸಂಪಾದಕರು**
ಡಾ॥ ವಿ. ಜಿ. ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.,

**ಮುದ್ರಣ**
ಶ್ರೀ . ಪಿ. ರಾಮರಾಜು , ಎಮ್.ಎ.,
ವಿಶೇಷಾಧಿಕಾರಿ, ತಿ.ತಿ.ದೇ., ಮುದ್ರಣಾಲಯ, ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ ತಿ.ತಿ.ದೇ. ತಿರುಪತಿ.

**ಛಾಯಗ್ರಹಣ**
ಶ್ರೀ ಪಿ. ಎನ್. ಶೇಖರ್, ಪ್ರಧಾನ ಛಾಯಗ್ರಹಣ, ತಿ.ತಿ.ದೇ.
ಶ್ರೀ ಬಿ. ವೆಂಕಟರಮಣ, ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ,
ತಿ.ತಿ.ದೇ., ಪ್ರೆಸ್, 2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507

ಕಾರ್ಯಾಲಯ: 0877 - 2264543
: 0877 - 2264359
ಸಂಪಾದಕರು : 0877 - 2264360

ಬಿಡಿ ಪ್ರತಿ ರೂ. 20/-
ವಾರ್ಷಿಕ ಚಂದಾ ರೂ. 240/-
ಆಜೀವ ಚಂದಾ ರೂ. 2400/- (12 ವರ್ಷಗಳು)
ವಿದೇಶಿ ವಾರ್ಷಿಕ ಚಂದಾ ರೂ. 1030/-

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
**1800-425-4141**
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
**www.tirumala.org**
ಮೂಲಕ ಓದಬಹುದು.

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 06 |
| ಜೀವನ ಚೈತ್ರದ ಸಂಭ್ರಮ ಯುಗಾದಿ | - ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 07 |
| ಭಾವಿ ಸಮೀರ ಶ್ರೀವಾದಿರಾಜರ ಕಂಡಂತೆ ಉಡುಪಿ ಶ್ರೀ ಕೃಷ್ಣ | -ಶ್ರೀಧರ ರಾಯಸಂ | 10 |
| ಕ್ಷೇತ್ರ ದರ್ಶನ | - ವಿ. ನಾಗೇಂದ್ರ ಪ್ರಸಾದ್ | 14 |
| ವರಾಂಗಿ | -ಡಾ॥ ವಾಣಿಶ್ರೀ ಬಿ.ಎಂ. | 18 |
| ಪಂಚಯಜ್ಞ | - ಡಾ॥ ವಿಷ್ಣುದತ್ತ ಪ್ರಭುಜಿ | 20 |
| ಪಾಂಡವರ ಮಾತೆ ಕುಂತೀದೇವಿ | - ಹನುಮಂತ ಮ. ದೇಶಕುಲಕರ್ಣಿ | 23 |
| ಶ್ರೀ ವೇಂಕಟೇಶ್ವರ ಸ್ವಾಮಿಯವರ ಆಲಯ | - ದಿ॥ ಬಿ.ಎನ್. ಶ್ರೀನಿವಾಸನ್ | 25 |
| ಶ್ರೀ ಶ್ರೀ ವಾದೀಂದ್ರ ತೀರ್ಥ "ಗುರುಗುಣ ಸ್ತವನಂ" | - ಎ.ಆರ್. ವಿಠಲಮೂರ್ತಿ | 31 |
| ಶ್ರೀವೆಂಕಟಾಚಲ ಮಹಾತ್ಮ್ಯೆ | - ಶ್ರೀಮತಿ ಎನ್. ಪಾರ್ವತಿ | 34 |
| ದೇವಲಾಪುರ ಲಕ್ಷ್ಮೀಕಾಂತ ದೇವಾಲಯ ಮತ್ತು ಲಕ್ಷ್ಮೀನರಸಿಂಹ ದೇವಾಲಯ | - ಕೆಂಗೇರಿ ಚಕ್ರಪಾಣಿ | 36 |
| ಗೋವಿಂದ ಒಡೆಯರ್ | - ಡಾ॥ ಎನ್.ಕೆ. ರಾಮಶೇಷನ್ | 38 |
| ಪಯೋವ್ರತ | - ಶ್ರೀಮತಿ ಮಾಧುರಿ ದೇಶಪಾಂಡೆ | 39 |
| ತಿರುಮಲೆ ಕಾಲಮಾನಾಚರಣೆಗಳು | - ಶ್ರೀಮತಿ | 40 |
| ಹೋಲಿ ವರ್ಣಮಯ ಉತ್ಸವ ಸರಣಿ | - ಶ್ರೀಮತಿ ಕೆ.ವಿ. ಪದ್ಮಾವತಿ | 42 |
| ತಿರುಚ್ಚೆಂಪೋನ್ ಶೆಯ್ ಕೋಯಿಲ್ | - ಶ್ರೀಮತಿ ಸೂರ್ಯವಂಶಿ | 44 |
| ರಾಶಿಫಲಗಳು | -ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ - ಅಮ್ಮನ ಮಾತಿಗೆ ಮೊದಲು ಗೌರವ | - ಎ.ಆರ್.ರಘುರಾಮ | 48 |
| ಚಿತ್ರಕಥೆ- ಅದಿವೋ... ಅಲ್ಲದಿವೋ... | - ಡಿ. ಶ್ರೀನಿವಾಸ ದೀಕ್ಷಿತರು | 52 |


**ಮುಖಚಿತ್ರ - ಉಭಯದೇವಿಯರೊಂದಿಗೆ ಶ್ರೀಮಲೆಯಪ್ಪಸ್ವಾಮಿ, ತಿರುಮಲೆ**

**ಹಿಂಬದಿಚಿತ್ರ - ಶ್ರೀ ಪದ್ಮಾವತಿ ಅಮ್ಮನವರು, ತಿರುಚಾನೂರು**

# ಸಂಪಾದಕೀಯ....................................

## ಶ್ರೀಮಹಾಲಕ್ಷ್ಮೀ ದೇವಿ ಅವತರಿಸಿದ ಫಾಲ್ಗುಣ ಮಾಸದ ವಿಶಿಷ್ಟತೆ

ಭಾರತೀಯ ಕಾಲಗಮನದಲ್ಲಿ ಬರುವ ಎಲ್ಲಾ ಮಾಸಗಳೂ ಮುಗಿದ ಮೇಲೆ ಬರುವ ಕೊನೆಯ ಮಾಸ "ಫಾಲ್ಗುಣ" ಮಾಸ ವಿಜ್ಞಾನ ಪರವಾಗಿ ಗಮನಿಸಿದರೆ ಋತುಗಳಲ್ಲಿ ಕೊನೆಯದಾದ ಶಿಶಿರಋತು ಬರುವಂತಹಾ ಕೊನೆಯ ತಿಂಗಳು ಇದು. ಈ ತಿಂಗಳಿನಲ್ಲಿ ಮರಗಳಿಂದ ಎಲೆಗಳು ಉದುರುವುದು ಕಂಡುಬರುತ್ತದೆ. ಮುಂಬರಲಿರುವ ನವ ವಸಂತ ಋತುವಿನ ಆಗಮನವನ್ನು ನಿರೀಕ್ಷಿಸುತ್ತಾ ಹೊಸ ಚಿಗುರನ್ನು ಚಿಗುರಿಸುವುದಕ್ಕೆ ಸಿದ್ಧವಾಗಿದ್ದೇವೆಂದು ಮರಗಳು ಸಂಕೇತವನ್ನು ನೀಡುತ್ತವೆ. ಈ ಮಾಸವು ಆಧ್ಯಾತ್ಮಿಕವಾಗಿ ಸ್ಥಿತಿಕರ್ತನಾದ ಶ್ರೀಮಹಾವಿಷ್ಣುವಿಗೆ ಅತ್ಯಂತ ಪ್ರೀತಿಕರವಾದುದು.

ಈ ಮಾಸದಲ್ಲಿ ಅನೇಕ ವ್ರತಗಳು,ಪೂಜೆಗಳನ್ನು ಮಾಡಬೇಕೆಂದು ಶಾಸ್ತ್ರವಿಧಿಗಳು ತಿಳಿಸುತ್ತಿವೆ. ಮತ್ಸ್ಯಪುರಾಣದಲ್ಲಿ ಈ ಮಾಸದಲ್ಲಿ ಪ್ರಾರಂಭಿಸುವ ಕೆಲಸಗಳಲ್ಲಿ ಮುಖ್ಯವಾಗಿ ಗೃಹನಿರ್ಮಾಣಾದಿ ಕಾರ್ಯಗಳನ್ನು ಪ್ರಾರಂಭಿಸಿದರೆ ಸಂತಾನಪ್ರಾಪ್ತಿ, ಸುವರ್ಣ ಲಾಭವುವುಂಟಾಗುತ್ತದೆಂದು ತಿಳಿಸುತ್ತಿದೆ. ಭಾರತೀಯ ವೈಜ್ಞಾನಿಕ, ಆಧ್ಯಾತ್ಮಿಕ ದೃಕ್ಪಥದಲ್ಲಿ ಇರುವ ಔನ್ನತ್ಯವನ್ನು ಪ್ರಕಟಿಸುತ್ತಿದೆ.

ಮುಖ್ಯವಾಗಿ ಉತ್ತರಫಲ್ಗುಣಿ ನಕ್ಷತ್ರದೊಂದಿಗೆ ಕೂಡಿದ ಹುಣ್ಣಿಮೆ ಬರುತ್ತದೆ. ಆದ್ದರಿಂದ ಈ ಮಾಸಕ್ಕೆ ಫಾಲ್ಗುಣ ಮಾಸ ಎಂದು ಹೆಸರು. ಇದೇ ದಿನ ಶ್ರೀಮಹಾಲಕ್ಷ್ಮೀಯು ಅವತರಿಸಿದಳೆಂದು ಪುರಾಣಗಳು ತಿಳಿಸುತ್ತಿವೆ. ಈ ದಿನ ಲಕ್ಷ್ಮೀದೇವಿಯನ್ನು ವಿಶೇಷವಾಗಿ ಅರ್ಚಿಸಿ, ಕನಕಧಾರಾಸ್ತೋತ್ರವನ್ನು ಪಾರಾಯಣ ಮಾಡಬೇಕು. ಈ ಹುಣ್ಣಿಮೆಯ ದಿನದಂದೇ ರಾಕ್ಷಸರ ಪೀಡೆಯನ್ನು ತೊಲಗಿಸುವುದಕ್ಕೆ "ಹೋಲಿಹುಣ್ಣಿಮೆ"ಯನ್ನು ನಿರ್ವಹಿಸುತ್ತಾರೆ. ಇದು ಹೋಲಿ ಹಬ್ಬವೆಂದು ಲೋಕ ಪ್ರಸಿದ್ಧಿಯನ್ನು ಪಡೆದಿದೆ.

ಇನ್ನೂ ಈ ಮಾಸದಲ್ಲಿ ಶ್ರೀಹರಿಯ ನಂದಕಾಂಶ ಸಂಭೂತರಾದ ಅನ್ನಮಯ್ಯನವರು ಭೂಲೋಕದಲ್ಲಿ ಅವತರಿಸಿ ಶ್ರೀ ಶ್ರೀನಿವಾಸನ ಮೇಲೆ 32,000 ಸಾವಿರ ಕೀರ್ತನೆಗಳನ್ನು ಬರೆದು ಬಹುಳ ದ್ವಾದಶಿಯಂದು ಶ್ರೀವೇಂಕಟೇಶ್ವರನಲ್ಲಿ ಲೀನರಾದ ದಿನ. ಆ ದಿನ ಅವರ ವರ್ಧಂತಿಯನ್ನು ಆಚರಿಸುವುದು ವಾಡಿಕೆ.

ಇನ್ನು ತಿರುಮಲೆಯಲ್ಲಿ ಶ್ರೀನಿವಾಸನಿಗೆ ಪ್ರತಿ ವರ್ಷವೂ 5 ದಿನಗಳ ಕಾಲ ತೆಪ್ಪೋತ್ಸವವು ನಡೆಯುತ್ತವೆ. ಇದರ ವೈಭವವನ್ನು ವರ್ಣಿಸುವುದಕ್ಕೆ ಮಾತುಗಳೇ ಸಾರುವುದಿಲ್ಲ. ಮೊದಲ ಎರಡು ದಿನಗಳು ತ್ರೇತಾ-ದ್ವಾಪರಯುಗದಲ್ಲಿ ಅವತರಿಸಿದ ಶ್ರೀರಾಮ-ಶ್ರೀಕೃಷ್ಣರಾಗಿ ಶ್ರೀವೇಂಕಟೇಶ್ವರ ಸ್ವಾಮಿಯು ತೆಪ್ಪದ ಮೇಲೆ ದರ್ಶನವನ್ನು ನೀಡುತ್ತಾರೆ. ಉಳಿದ ಮೂರು ದಿನಗಳು ಕಲಿಯುಗದ ಪ್ರತ್ಯಕ್ಷದೈವವಾದ ಶ್ರೀನಿವಾಸನು ಸುಮನೋಹರ ರೂಪದಲ್ಲಿ ಝಗಝಗಿಸುತ್ತಾ ತೆಪ್ಪದ ಮೇಲೆ ವಿರಾಜಮಾನನಾಗಿ ವಿಹರಿಸುತ್ತಾ ಭಕ್ತರನ್ನು ಅನುಗ್ರಹಿಸುತ್ತಾನೆ.ಹಾಗೆ ತಿರುಮಲೆಯಲ್ಲಿ ಹೆಸರುವಾಸಿಯಾಗಿರುವ ಕುಮಾರಧಾರಾ ತೀರ್ಥಮುಕ್ಕೋಟಿ ವಿಶೇಷವಾಗಿ ನಡೆಯುತ್ತದೆ.

ಇನ್ನು ತಿಂಗಳ ಕೊನೆಯಲ್ಲಿ ಫಾಲ್ಗುಣ ಮಾಸದ ಅಮಾವಾಸ್ಯೆಯ ನಂತರ ಶ್ರೀನಿವಾಸನ ಸನ್ನಿಧಿಯಲ್ಲಿ ಚೈತ್ರ ಶುದ್ಧ ಪಾಡ್ಯಮಿಯಂದು ವರ್ಷದ ಮೊದಲ ಹಬ್ಬವಾದ ವಿಶ್ವಾವಸು ನಾಮ ಸಂವತ್ಸರದ ಯುಗಾದಿ ಆಸ್ಥಾನ ಅತ್ಯಂತ ವೈಭವದಿಂದ ನಡೆಯುತ್ತದೆ. ಈ ಸಂವತ್ಸರವೆಲ್ಲಾ ಶ್ರೀವೇಂಕಟೇಶ್ವರನ ಆಶೀರ್ವಾದದೊಂದಿಗೆ ಸಮಸ್ತ ಜೀವರಾಶಿಯೂ ಆಯುರಾರೋಗ್ಯ ಐಶ್ವರ್ಯದಿಂದ ಅಭಿವೃದ್ಧಿ ಹೊಂದಬೇಕೆಂದು ಕೇಳಿಕೊಳ್ಳೋಣ.

**ಓಂ ನಮೋ ವೇಂಕಟೇಶಾಯ**

# ಜೀವನ ಚೈತ್ರದ ಸಂಭ್ರಮ ಯುಗಾದಿ

- ಡಾ।। ಗುರುರಾಜ ಪೋಶೆಟ್ಟಿಹಳ್ಳಿ
97393 69621

ಹೌದು ಮತ್ತೆ ಯುಗಾದಿ ಬಂದಿದೆ ಚೈತ್ರ ಶುಕ್ಲ ಪಕ್ಷ, ಪಾಡ್ಯ ನೂತನ ಸಂವತ್ಸರದ ಮೊದಲ ದಿನ ಯುಗಾದಿ. ಪ್ರತಿ ವರುಷ ಚೈತ್ರಮಾಸ, ಶುಕ್ಲಪಕ್ಷದ ಪಾಡ್ಯದ ತಿಥಿಯಂದು ಈ ಹಬ್ಬವನ್ನು ಆಚರಿಸಲಾಗುತ್ತದೆ. ವಸಂತ ಋತು ಆರಂಭವಾಗುವುದು ಇದೇ ದಿನ. ಹಿಂದೂ ಹಬ್ಬಗಳಲ್ಲಿ ಬಹು ಮುಖ್ಯವಾದವುಗಳಲ್ಲಿ ಯುಗಾದಿಯೂ ಒಂದು. ಏಕೆಂದರೆ ಆ ದಿನ ಹಿಂದೂಗಳಿಗೆ ಹೊಸ ವರ್ಷದ ಆರಂಭದ ದಿನವಾಗಿದೆ. ಯುಗಾದಿಯು ಕೃತಯುಗದ ಚೈತ್ರ ಶುದ್ಧ ಪಾಡ್ಯ ದಂದು ಪ್ರಾರಂಭವಾಯಿತು.


ಬ್ರಹ್ಮದೇವನು ಆ ದಿನದಿಂದಲೇ ಸೃಷ್ಟಿಯ ಕಾರ್ಯ ಆರಂಭಿಸಿದನೆಂಬ ಪ್ರತೀತಿ ಇದೆ ಹಾಗೂ ವರ್ಷ ಋತುಗಳು ಮಾಸಗಳು, ಗ್ರಹಗಳು,ನಕ್ಷತ್ರಗಳನ್ನು ಸೃಷ್ಟಿಸಿದನೆಂದು ನಂಬಿಕೆಯೂ ಸಹ ಇದೆ. ಯುಗಾದಿ ಎಂಬ ಪದ ಸಂಸ್ಕೃತ ಯುಗ ಮತ್ತು ಆದಿ ಎಂಬ ಎರಡು ಪದಗಳಿಂದ ಕೂಡಿದೆ. ಯುಗಾದಿಯಲ್ಲಿ ಎರಡು ವಿಧ.

**1. ಚಾಂದ್ರಮಾನ ಯುಗಾದಿ :** ಅಂದರೆ ಹುಣ್ಣಿಮೆಯ ದಿನ ಚಂದ್ರನು ಯಾವ ನಕ್ಷತ್ರದಲ್ಲಿ ಇರುವನೋ ಆ ನಕ್ಷತ್ರದ ಹೆಸರಿನಿಂದ ಮಾಸ ಆರಂಭವಾಗುತ್ತದೆ. ಉದಾಹರಣೆಗೆ ಚಿತ್ತಾನಕ್ಷತ್ರ, ಚೈತ್ರಮಾಸ, ವಿಶಾಖ ನಕ್ಷತ್ರಗಳ ಹೆಸರಿನಿಂದ ಕರೆಯುತ್ತಾರೆ. ಎಲ್ಲವೂ ಚಂದ್ರಗ್ರಹದಿಂದ ನಿರ್ಧಾರ ಮಾಡು ವುದರಿಂದ ಇದಕ್ಕೆ ಚಾಂದ್ರಮಾನ ಯುಗಾದಿ ಎನ್ನುತ್ತಾರೆ ಹಾಗೂ ಚಾಂದ್ರಮಾನ ಅನುಸಾರವಾಗಿ ಪಂಚಾಂಗವನ್ನು ಮಾಡುತ್ತಾರೆ. ಈ ಚಾಂದ್ರಮಾನ ಯುಗಾದಿ ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಹೆಚ್ಚು ಬಳಕೆಯಲ್ಲಿದೆ.

**2. ಸೌರಮಾನ ಯುಗಾದಿ :** ಅಂದರೆ ಸೌರಮಾನ ಯುಗಾದಿ ಎಂದರೆ ರವಿಗ್ರಹವು ಒಂದು ಕ್ರಾಂತಿಯಿಂದ ಮತ್ತೊಂದು ರಾಶಿಯ ಕ್ರಾಂತಿಯವರೆಗೆ ಭ್ರಮಣ ಮಾಡಲು ಹತ್ತುವ ಕಾಲಕ್ಕೆ ಒಂದು ಮಾನ ಎನ್ನುವರು. ಅಂದರೆ ರವಿಯು ಅಮಾವಾಸ್ಯೆ ದಿನ ಮೇಷರಾಶಿಯಲ್ಲಿದ್ದರೆ ಆ ಮಾಸವನ್ನು ಚೈತ್ರಮಾಸ ಎನ್ನುವರು. ಹೀಗೆ 12 ಮಾಸಗಳು ಬರುತ್ತವೆ. ಎಲ್ಲವೂ ರವಿಗ್ರಹದಿಂದ ಲೆಕ್ಕಾಚಾರ ಮಾಡುವುದು. ಚಾಂದ್ರ ಮಾನ ಯುಗಾದಿಗೂ, ಸೌರಮಾನ ಯುಗಾದಿಗೂ ಸುಮಾರು 15 ದಿನಗಳ ಅಂತರ ಇರುತ್ತದೆ. ಈ ಸೌರಮಾನ ಯುಗಾದಿಯು ಹೆಚ್ಚಾಗಿ ಚೆನ್ನೈ ಮತ್ತು ಕಲ್ಕತ್ತದಲ್ಲಿ ಬಳಕೆ ಯಲ್ಲಿದೆ.

ಈ ಯುಗಾದಿ ಹಬ್ಬದಲ್ಲಿ ಒಂದು ವಿಶೇಷತೆ ಇದೆ. ಸಿಹಿ ಯಾದ ಬೆಲ್ಲ ಮತ್ತು ಕಹಿಯಾದ ಬೇವು. ಇವುಗಳ ಮಿಶ್ರಣ ವನ್ನು ಆ ದಿನ ಸೇವಿಸುತ್ತೇವೆ. ಇದರಲ್ಲಿ ಸಿಹಿಯನ್ನು ಅಪೇಕ್ಷಿ ಸುವವರು ಕಹಿಯನ್ನು ಅಪೇಕ್ಷಿಸುವುದು ಕಡಿಮೆ. ಅಂದರೆ ನಮ್ಮ ಜೀವನದಲ್ಲಿ ಯಾವಾಗಲೂ ಸುಖ ಇರಲಿ, ಎಂದೂ ದುಃಖವು ಬರದಿರಲಿ ಎಂಬ ಆಶಯ.

ಆದರೂ ಯುಗಾದಿ ದಿನ ಬೇವು, ಬೆಲ್ಲದ ಮಿಶ್ರಣ ವನ್ನು ಸೇವಿಸುವ ಪದ್ಧತಿ ಹಿಂದಿನಿಂದಲೂ ಬಂದಿದೆ. ಪ್ರಪಂಚವೂ ಸಹ ಆನಂದ ಎಂಬ ಸಿಹಿಯಿಂದಲೂ, ದುಃಖ ಎಂಬ ಕಹಿ ಯಿಂದಲೂ ಕೂಡಿರುತ್ತದೆ. ಈ ಸುಖ-ದುಃಖಕರವಾದ ಪ್ರಪಂಚವೂ ಆಸ್ತಿ,ಭ್ರಾಂತಿ, ಪ್ರಿಯ ನಾಮರೂಪಿ ಎಂಬ 5 ಅಂಶಗಳಿಂದ ಕೂಡಿದೆ. ಇದರಲ್ಲಿ ಅಸ್ತಿ, ಭ್ರಾಂತಿ ಮತ್ತು ಪ್ರಿಯ ಪರಮಾತ್ಮನ ಅಂಶವಾಗಿದೆ. ಉಳಿದ ಎರಡು ನಾಮ ಮತ್ತು ರೂಪಗಳು ಮಾಯೆಯ ಅಂಶವಾಗಿದೆ. ಅಂದರೆ ಈ ಪ್ರಪಂಚವೂ ಮಾಯೆ ಮತ್ತು ರೂಪಗಳಿಂದ ಕೂಡಿದೆ ಎಂದು ಆಯಿತು. ನಾಮರೂಪಿಗಳು ಅನಿತ್ಯ ಎಂದು ಹೇಳಬಹುದು. ಈ ಪರಮಾತ್ಮನು ಸತ್ಯನು, ನಿತ್ಯನೂ ಆಗಿರುವನು.



ಅಸತ್ಯಗಳಾದ ನಾಮ ರೂಪಗಳೇ ದುಃಖಕರವಾಗಿದೆ. ಸುಖ-ದುಃಖಗಳಿಂದ ಕೂಡಿದೆ ಅಂದರೆ ಸಿಹಿ ಮತ್ತು ಕಹಿ ಮಿಶ್ರಣದಿಂದ ಈ ಪ್ರಪಂಚ ಆಗಿದೆ. ನಾವು ಬೇವು ಬೆಲ್ಲವನ್ನು ಒಟ್ಟಿಗೆ ಸೇವಿಸುವಾಗ ಬೆಲ್ಲದ ಸಿಹಿಯ ಕಡೆಗೆ ಗಮನವನ್ನು ಕೊಟ್ಟರೆ ಆಗ ಬೇವಿನ ಕಹಿಯು ನಮಗೆ ಗೊತ್ತಾಗುವುದಿಲ್ಲ. ಆಗ ನಮಗೆ ಸಿಹಿಯೊಂದೇ ತೋರುವುದು. ಅದೇ ರೀತಿ ಬೇವಿನ ಕಡೆಗೆ ಸಿಹಿಯ ಅಂಶವು ಮರೆಯಾಗಿ ಬರೀ ಸುಖವನ್ನು ಅನುಭವಿಸಬೇಕು. ಕಷ್ಟವು ಬೇಡವೆಂದು ಹೇಳಿದರೆ ಅದು ಆಗುವುದಿಲ್ಲ. ಎರಡನ್ನೂ ಸಮವಾಗಿ ಸ್ವೀಕರಿಸಬೇಕು. ಒಂದು ಸಮಯದಲ್ಲಿ ಸುಖ ಬಂದಾಗ ಇನ್ನೊಂದು ಸಮಯದಲ್ಲಿ ದುಃಖ ಬರುವುದು ಆದ್ದರಿಂದ ಈ ಸುಖ ಮತ್ತು ದುಃಖ ಒಂದೇ ನಾಣ್ಯದ ಎರಡು ಮುಖ ಇದ್ದ ಹಾಗೆ.

ಬ್ರಹ್ಮಸೃಷ್ಟಿ ದಿನವಿದು ಪುರಾಣಗಳು ಪ್ರತಿಪಾದಿಸುವಂತೆ ಮಹಾ ಜಲಪ್ರಳಯದ ನಂತರ ಬ್ರಹ್ಮದೇವ ಯುಗಾದಿಯಂದೇ ಲೋಕದ ಸೃಷ್ಟಿಕಾರ್ಯ ಮೊದಲ ಕಿರಣವನ್ನು ಭೂಮಿಗೆ ಹರಿಸಿದ ಎಂಬ ಮಾತೂ ಇದೆ. ಹಿಂದೆ ತ್ರೇತಾಯುಗದಲ್ಲಿ ಶ್ರೀರಾಮ, ರಾವಣನನ್ನು ಸೋಲಿಸಿ, ಅಯೋಧ್ಯೆಗೆ ಮರಳಿ, ಯುಗಾದಿಯ ದಿನದಂದೇ ಪುನಃ ರಾಜ್ಯಭಾರ ಆರಂಭಿಸಿದ ಎಂಬ ಹೇಳಿಕೆಯೂ ಇದೆ. ಅದೇ ರೀತಿ ಮಹಾವಿಷ್ಣು ಮತ್ಸ್ಯಾವತಾರ ತಾಳಿದ್ದು ಇದೇ ದಿನ. ಶಾಲಿವಾಹನ ವಿಕ್ರಮಾದಿತ್ಯನನ್ನು ಜಯಿಸಿ, ಶಾಲಿವಾಹನ ಶಕೆಯನ್ನು ಇಂದೇ ಆರಂಭಿಸಿದ ಎನ್ನುತ್ತವೆ ಚರಿತ್ರೆ.

**ಪಂಚಾಂಗಶ್ರವಣ, ರಾಶಿಫಲದ ಹೊರಣ :** ಹಬ್ಬದ ದಿನ ಮನೆಯನ್ನು ಸ್ವಚ್ಛಗೊಳಿಸಿ ತಳಿರುತೋರಣ ಕಟ್ಟಿ ಮನೆಯ ಮಂದಿನ ಅಂಗಳದಲ್ಲಿ ರಂಗೋಲಿ ಹಾಕಲಾಗುತ್ತದೆ. ಮುಂಜಾನೆಯೇ ಅಭ್ಯಂಜನಸ್ನಾನ ಮಾಡಿ, ಪುಣ್ಯಾಹ, ಮಂತ್ರಗಳನ್ನು ಉಚ್ಚರಿಸಿ, ಮಾವಿನ ಎಲೆಯಿಂದ ಕಳಸದ ನೀರನ್ನು ಎಲ್ಲಾ ಕಡೆ ಸಿಂಪಡಿಸಲಾಗುತ್ತದೆ. ದೇವ ಸ್ಥಾನಗಳಲ್ಲಿ ಈ ದಿನ ದೇವರಿಗೆ ವಿಶೇಷಪೂಜೆ ನಡೆಯುತ್ತದೆ. ಸೂರ್ಯ ನಮಸ್ಕಾರ, ನೂತನ ಪಂಚಾಂಗ ಶ್ರವಣ, ಬೇವು-ಬೆಲ್ಲ ಹಂಚುವುದು. ಹಬ್ಬದ ಸಂಪ್ರದಾಯಕ ಆಚರಣೆಗಳಲ್ಲಿ ಪ್ರಮುಖ ದೇವಸ್ಥಾನಗಳಲ್ಲಿ, ಮನೆಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ನೂತನ ಪಂಚಾಂಗ ಶ್ರವಣ, ಹಬ್ಬದ ಆಚರಣೆಯ ಆಕರ್ಷಣೆ. ಯುಗಾದಿ ಹಬ್ಬದ ದಿನ ಕೆಳಗಿನ ಶ್ಲೋಕವನ್ನು ಹೇಳಿಕೊಂಡು ಬೇವು-ಬೆಲ್ಲವನ್ನು ಸ್ವೀಕರಿಸಬೇಕು.

**ಶತಾಯುರ್ವಜ್ರದೇಹಾಯ ಸರ್ವಸಂಪತ್ಕರಾಯ ಚ ।**
**ಸರ್ವಾರಿಷ್ಟವಿನಾಶಾಯ ನಿಂಬಕಂ ದಳಭಕ್ಷಣಂ ॥**



ನೂರು ವರ್ಷ ಪೂರ್ತಿ ಆಯುಸ್ಸು, ಸಮೃದ್ಧಿ, ಆರೋಗ್ಯ ಸಕಲ ಸಂಪತ್ತುಗಳು ಪ್ರಾಪ್ತಿಗಾಗಿಯೂ ಸಕಲಾರಿಷ್ಟ ನಿವಾರಣೆಗಾಗಿಯೂ ಬೇವು-ಬೆಲ್ಲ ಸೇವನೆ ಮಾಡುತ್ತೇವೆ.

## ಬೇವು - ಬೆಲ್ಲದ ಸಮ್ಮಿಲನ

ಕಷ್ಟ - ಸುಖಗಳನ್ನು ಸಮನಾಗಿ ಸ್ವೀಕರಿಸುತ್ತೇವೆಂದು ವಾಗ್ದಾನ ಮಾಡುವುದೇ ಹಬ್ಬದ ವಿಶೇಷ. ನೂರು ವರ್ಷಗಳ ಕಾಲ ಆಯುಷ್ಯ, ಸದೃಢ ಆರೋಗ್ಯ, ಸಂಪತ್ತು ಪ್ರಾಪ್ತಿ. ಸಂಕಷ್ಟಗಳ ನಿವಾರಣೆಗಾಗಿಯೂ ಬೇವು-ಬೆಲ್ಲ ಸವಿಯುವ ಸುದಿನ.

ನಿಜವಾಗಿಯೂ ಬೇವಿನಲ್ಲಿರುವ ಶಕ್ತಿ ಬೆಲ್ಲದಲ್ಲಿಲ್ಲ. ಬೆಲ್ಲವನ್ನು ತಿಂದ ಮೇಲೆ ಹೊಟ್ಟೆಯೊಳಗೆ ಉರಿ, ಶಾಖ ವನ್ನುಂಟು ಮಾಡುತ್ತದೆ.

ಆದರೆ ಬೇವು ಉರಿಯ ಶಮನಕಾರಿ. ಯುಗಾದಿಗೆ ಹೋಳಿಗೆ (ಒಬ್ಬಟ್ಟು)ಯೇ ಪ್ರಮುಖ ಭಕ್ಷ. 'ಹಣ ಇದ್ದರೆ ಯುಗಾದಿ, ಇಲ್ಲದಿದ್ದರೆ ತಗಾದಿ' ಉಳ್ಳವರ ಮತ್ತು ಇಲ್ಲದವರ ಅಂತರ ಹೇಳುವಂಥ ಗಾದೆ. ಸಂಭ್ರಮ ವನ್ನು ಹಣದಲ್ಲೂ ಅಳೆಯುವ ರೀತಿಗೆ ಈ ಗಾದೆ ಸಾಕ್ಷಿ.

ಯುಗಾದಿಗೂ ಪ್ರಕೃತಿಗೂ ಅವಿನಾಭಾವ ಸಂಬಂಧ. ಪ್ರಕೃತಿಯಲ್ಲಿ ಯುಗಾದಿ ಕಾಲಕ್ಕೆ ಅಪೂರ್ವ ಬದಲಾವಣೆ ಕಾಣುತ್ತದೆ. ಹಣ್ಣೆಲೆ ಉದುರಿ ಹಸಿರೆಲೆ ಚಿಗುರೊಡೆದು ನಳ ನಳಿಸುತ್ತವೆ. ವಿಶಿಷ್ಟ ಆಕರ್ಷಣೆಯ ಬಣ್ಣಗಳಿಗೆ ತಿರುಗಿ ಹೊಸ ವರ್ಷಕ್ಕೆ ಸ್ವಾಗತಿಸುವ ಪ್ರಕೃತಿ ತನ್ನ ಅಂತರಾಳವನ್ನು ತೆರೆದಿಡುವ ಸಂಗಮ ಕಾಲ.

ಸೌರಮಾನ ಪಂಚಾಂಗ ಸೂರ್ಯನ ಚಲನೆಯಾಧಾರಿತ. ಎಲ್ಲಾ ವಿರೋಧಿಗಳನ್ನು ಮೆಟ್ಟಿನಿಂತು ಹೊಸವರುಷಕೆ ನವ ಚೈತನ್ಯ ತುಂಬುವ, ಹೊಸ ಸಂವತ್ಸರ ಸ್ವಾಗತಿಸುವ ಬಿಸುಪರ್ವ ಇಂದು.

ಕರ್ನಾಟಕದ ಬಯಲುಸೀಮೆ, ಮೈಸೂರು, ಬೆಂಗಳೂರು, ಆಂಧ್ರಪ್ರದೇಶ ಮಹಾರಾಷ್ಟ್ರದವರು ಚಾಂದ್ರ ಮಾನ ಪರಿಪಾಲಕರಾದರೆ ಕರ್ನಾಟಕದ ದಕ್ಷಿಣ ಕರಾವಳಿ, ಕೇರಳ, ಪಂಜಾಬ್, ಹರಿಯಾಣ, ಪಶ್ಚಿಮಬಂಗಾಲ, ಅಸ್ಸಾಂ, ಹಿಮಾಚಲಪ್ರದೇಶ, ಶ್ರೀಲಂಕಾ ಹಾಗೂ ನೇಪಾಳಿಗರು ಸೌರಮಾನ ಪರಿಪಾಲಕರು.

ಈ ಪಂಚಾಂಗದ ಅನುಕರಣೆ ಪ್ರಾಯಶಃ ನಮ್ಮಲ್ಲಿದ್ದು ರಾಜ್ಯ ವಿಂಗಡಣೆ ಕಾರಣವಾಗಿರಬಹುದೋ ಏನೋ?










**ತಿರುಮಲೆಯ ಯಾತ್ರಿಕರಿಗೆ,**
**ಶ್ರೀ ವೆಂಕಟೇಶ್ವರಸ್ವಾಮಿಯ ಭಕ್ತರಿಗೆ,**
**ಸಪ್ತಗಿರಿ ಮಾಸಪತ್ರಿಕೆಯ**
**ಓದುಗರಿಗೆ,ಚಂದಾದಾರರಿಗೆ, ಏಜೆಂಟರಿಗೆ**

**"ಶ್ರೀ ಕ್ರೋಧಿ-ವಿಶ್ವಾವಸು ನಾಮ ಸಂವತ್ಸರ"**
**ಶುಭಪ್ರದವಾಗಿರಲಿ**
**ಶ್ರೀ ವೆಂಕಟೇಶ್ವರಸ್ವಾಮಿಯು ಅನುಗ್ರಹ**
**ಪೂರ್ಣವಾಗಿ ಎಲ್ಲರನ್ನೂ ಕಾಪಾಡಲಿ ಎಂದು**
**'ಸಪ್ತಗಿರಿ'ಯ ಹೃತ್ಪೂರ್ವಕ ಹಾರ್ಯೆಕೆಗಳು**

**- ಪ್ರಧಾನ ಸಂಪಾದಕರು**



# ಭಾವಿ ಸಮೀರ ಶ್ರೀ ವಾದಿರಾಜರು ಕಂಡಂತೆ ಉಡುಪಿ ಶ್ರೀ ಕೃಷ್ಣ




– ಶ್ರೀಧರ ರಾಯಸಂ


ಭಾವಿ ಸಮೀರ ಶ್ರೀವಾದಿರಾಜ ಗುರುಸಾರ್ವಭೌಮರು, ಮಾನವೀಯ ಮೌಲ್ಯಗಳಿಗೆ ಸ್ಪಂದಿಸಿ ಕಾವ್ಯಗಳನ್ನು ಕರತಲಾಮಲಕ ಮಾಡಿಕೊಂಡು, ವ್ಯಾಸಸಾಹಿತ್ಯ ದಾಸಸಾಹಿತ್ಯದ ಸೊಬಗನ್ನು ಇಮ್ಮಡಿಗೊಳಿಸಿ ಶ್ರೀಮಧ್ವರ ಸಿದ್ಧಾಂತವನ್ನು ಆಸೇತು ಹಿಮಾಚಲ ಪ್ರಚಾರ ಮಾಡಿದ ಮಹಾತಪಸ್ವಿಗಳು, ಯೋಗಿಗಳು ಋಜುಗಳು ಅಪರೋಕ್ಷ ಜ್ಞಾನಿಗಳು. 112 ವರ್ಷ ಸರ್ವಜ್ಞಪೀಠ ಅಲಂಕರಿಸಿ, ವೇದಾಂತ ಸಾಮ್ರಾಜ್ಯ ಆಳಿದ ಮಹಾತಪಸ್ವಿ! ಭಾರತ ದೇಶದಲ್ಲಿ ಮೊತ್ತ ಮೊದಲ ಸಶರೀರ ಬೃಂದಾವನಸ್ಥರಾದ ಯತಿಗಳು. ರಾಗ, ದ್ವೇಷ, ಅಸೂಯೆ, ಅಧರ್ಮ, ಅನೀತಿಗಳ ವಿರುದ್ಧ ಹೋರಾಡಿ, ವಿಶಾಲವಾದ ಮನೋಭಾವದಿಂದ ಸಕಲರನ್ನೂ ಹೃದಯ ವೈಶಾಲ್ಯದ, ಭಾವೈಕ್ಯತೆಯ ಸಾಮರಸ್ಯ ಮೂಡಿಸಿದ ಮಹಾನ್‌ಯತಿಗಳು. ಕನ್ನಡ ಭಾಷೆಗೆ ಶ್ರೀವಾದಿರಾಜರ ಕೀರ್ತನೆಗಳು ಅಪೂರ್ವ ಕೊಡುಗೆಯಾಗಿ, ಅದರಲ್ಲಿ ಬರುವ ಭಕ್ತಿ ಚಮತ್ಕಾರಿಕ ಪದಗಳು,ಅಲಂಕಾರ, ಪ್ರಾಸ, ಯುಕ್ತಿ, ವರ್ಣನೆ, ಭಗವಂತನಲ್ಲಿ ಶರಣು ಅಮೋಘವಾಗಿದೆ. ಬಡವ ಬಲ್ಲಿದರ ನಡುವೆ ಪ್ರೀತಿ ಸುಧೆ ಹಂಚಿ, ಕ್ರಾಂತಿಕಾರಿ ಮನೋಭಾವ ಲಹರಿ ಹರಿಸಿದ ಗುರುಸಾರ್ವಭೌಮರು.

ಶ್ರೀಮಧ್ವಾಚಾರ್ಯರ ಸೋದರರಾದ ಶ್ರೀವಿಷ್ಣುತೀರ್ಥರ ಪರಂಪರೆಯ ಶ್ರೀವಾದಿರಾಜರು, ಉಡುಪಿ ಜಿಲ್ಲೆಯ ಕುಂಭಾಸಿ ಹತ್ತಿರ, ಹೂವಿನ ಕೆರೆಯಲ್ಲಿ ತಾ 29-1-1481 ರಂದು ಶಾರ್ವರೀ ಸಂವತ್ಸರ, ಸ್ವಾತಿ ನಕ್ಷತ್ರ, ಬುಧವಾರ ಮಾಘ ಶುದ್ಧ, ದ್ವಾದಶಿ ಅವತಾರ ಮಾಡಿದ ಮಹಾನ್ ಗುರುಗಳು. ಇವರ ಸಹೋದರ ಶ್ರೀಸುರೋತ್ತಮ ತೀರ್ಥರು ತದನಂತರ, ಭಂಡಾರಕೇರಿಮಠದ ಯತಿಗಳಾದ ವಿರಕ್ತಿಗಳು. ಶ್ರೀವಾದಿರಾಜರು, ಶ್ರೀವಾಗೀಶತೀರ್ಥರಿಂದ ಸನ್ಯಾಸಾಶ್ರಮದ ದೀಕ್ಷೆ ಪಡೆದು ಬದರಿಯಾತ್ರೆ ಮಾಡಿ ಅನೇಕ ಪ್ರೌಢ ಗ್ರಂಥಗಳನ್ನು, ಕೀರ್ತನೆಗಳನ್ನು ರಚಿಸಿ ತಮ್ಮ ಅದ್ಭುತ ಅಪಾರ ಮಹಿಮೆಗಳನ್ನು ತೋರಿಸಿದ ಗುರುಸಾರ್ವಭೌಮರು .

ಶ್ರೀವಾದಿರಾಜರು ತೀರ್ಥಕ್ಷೇತ್ರದ ಮಹಿಮೆಗಳನ್ನು ತಿಳಿಸಿ ಭಕ್ತರಿಗೆ "ತೀರ್ಥಪ್ರಬಂಧ" ಎಂಬ ದಿವ್ಯಗ್ರಂಥ ರಚಿಸಿ ಮಹದುಪಕಾರ ಮಾಡಿದ ಮಹಾನುಭಾವರು. ತೀರ್ಥ ಪ್ರಬಂಧದಲ್ಲಿ ಶ್ರೀವಾದಿರಾಜರು ಉಡುಪಿಯ ವರ್ಣನೆ ಶ್ರೀಮಧ್ವರಿಂದ ಪ್ರತಿಷ್ಠಾಪಿತಗೊಂಡ ಕಡೆಗೋಲು ಶ್ರೀಕೃಷ್ಣನನ್ನು ಭಕ್ತಿಯಿಂದ ವರ್ಣನೆ ಮಾಡಿದ್ದಾರೆ. ಉಗ್ರವಾದ ಸಂಸಾರ ಸಮುದ್ರವನ್ನು ಮಥಿಸಿ, ನನ್ನ ಭಕ್ತರ ಮನೋಭೀಷ್ಟಗಳನ್ನು ಈಡೇರಿಸುವೆ ಎಂಬಂತೆ ಕರ ಪಲ್ಲವ ಮುದ್ರೆಗಳಿಂದ ಶೋಭಿತನಾಗಿ ಬಲಗೈಯಲ್ಲಿ ಹೊಳೆಯುವ ಕಡೆಗೋಲು ಮತ್ತೊಂದು ಕೈಯಲ್ಲಿ ಹಗ್ಗ ವನ್ನು ಹಿಡಿದುಕೊಂಡು ಭಕ್ತರ ಪಾಪಗಳನ್ನು ಮಥಿಸಿ, ಅನುಗ್ರಹಿಸಲು ನಿಂತಿರುವೆ ಎಂದು ಶ್ರೀವಾದಿರಾಜರು ವರ್ಣನೆಯನ್ನು ಮಾಡಿದ್ದಾರೆ.

ಶ್ರೀಕೃಷ್ಣನು ಸರ್ವ ಸಂಪತ್ತುಭರಿತವಾದ ದ್ವಾರಕೆಯಲ್ಲಿ ಅನೇಕ ಸುಂದರಿಯರಾದ ಗೋಪಿಯರು ಪೂಜೆ ಮಾಡುತ್ತಿದ್ದರೂ, ಆ ತಾಣವನ್ನೂ ಬಿಟ್ಟು ತನ್ನ ಪತ್ನಿ ಲಕ್ಷ್ಮಿಯ ತವರು ಮನೆಯಾದ ಸಮುದ್ರದಲ್ಲಿಯೂ ಇರಲೊಲ್ಲದೆ ಅದನ್ನು ದಾಟಿ ಬಂದು ಶ್ರೀಮಧ್ವಾಚಾರ್ಯರ ಭಕ್ತಿಗೊಳಿದು ಉಡುಪಿಯಲ್ಲಿ ಬಂದು ನೆಲಸಿದ್ದಾನೆ ಎಂದು ತೀರ್ಥ ಪ್ರಬಂಧದ ನಾಲ್ಕನೇ ಅಧ್ಯಾಯ ರಜತಪೀಠಪುರಂ (ಉಡುಪಿ) 9 ನೇ ಶ್ಲೋಕದಲ್ಲಿ ವರ್ಣಿಸಿದ ಗುರುಗಳು. ಸಾಲಿಗ್ರಾಮ ಶಿಲಾಮೂರ್ತಿಯಾದ ಉಡುಪಿ ಶ್ರೀಕೃಷ್ಣ ಶಿವ ಬೆಳ್ಳಿಗ್ರಾಮಕ್ಕೆ ಅಲಂಕಾರನಾಗಿದ್ದಾನೆ. ಬೆಳ್ಳಿಯಂತೆ ಬಿಳುಪಾದ ಈಶ್ವರನ ಅಂಗ ಕಾಂತಿ ಹೊಳೆದು ಅದರೊಳಗೆ ಅಂತರ್ಯಾಮಿಯಾದ ಇಂದ್ರನೀಲ ವರ್ಣನಾದ ಶ್ರೀಕೃಷ್ಣನಿರುವುದರಿಂದ ಈಶ್ವರ ಲಿಂಗವೂ ನೀಲವಾಗಿ ಸಹ ಕಂಗೊಳಿಸುವ ಮೂರ್ತಿ ಎಂದು ಶ್ರೀವಾದಿರಾಜರು ವರ್ಣಿಸಿದ್ದಾರೆ.

ಶ್ರೀಕೃಷ್ಣನನ್ನು ಅನನ್ಯ ಭಾವದಿಂದ ಸ್ತೋತ್ರ ಮಾಡುತ್ತಾ, ಹೇ ಕೃಷ್ಣನೇ ನೀನು ಐಶ್ವರ್ಯದಲ್ಲಿ ಇಂದ್ರ, ವಾಕ್ಚಾತುರ್ಯದಲ್ಲಿ ಶೇಷ ಸೌಂದರ್ಯದಲ್ಲಿ ಮನ್ಮಥ, ಧನದಲ್ಲಿ ಕುಬೇರ ,ವಿದ್ಯೆಯಲ್ಲಿ ಈಶ್ವರ, ವೇದದಲ್ಲಿ ಬ್ರಹ್ಮ ಎಂದು ಕೊಂಡಾಡುತ್ತಾರೆ ಶ್ರೀವಾದಿರಾಜರು. ರಜತಪೀಠದಲ್ಲಿ ಸನ್ನಿಹಿತನಾದ 'ಎಲೈ ಶ್ರೀಕೃಷ್ಣ ನಿನ್ನ ಕೃಪೆಯಿಂದ ಮುಕ್ತಿಗೆ ಯೋಗ್ಯರಾದ ಅನೇಕ ಜೀವರು ಸ್ವಸ್ವರೂಪಾನಂದಾವಿರ್ಭಾವವನ್ನು ಹೊಂದಿ ವೈಕುಂಠಾದಿ ಸ್ಥಾನಗಳಲ್ಲಿ ಆನಂದವನ್ನು ಅನುಭವಿಸುತ್ತಾರೆ. ಅಂತಹ ಮುಕ್ತಿ ಮಾರ್ಗಕ್ಕೆ ನೀನೆಯೇ ಸ್ವಾಮಿ' ಎಂದು ಹೇಳಿ, ಸಂಸಾರದಲ್ಲಿಯೂ ನಮಗೆ ಆಶ್ರಯದಾತನಾಗಿ ಕಾಪಾಡಬೇಕೆಂದು ಪ್ರಾರ್ಥಿಸಿರಿ ಎಂದು ವಾದಿರಾಜರು ತಿಳಿಸಿದ್ದಾರೆ.




ಉಡುಪಿ ಶ್ರೀಕೃಷ್ಣನ ಗುಣಗಾನ ಮಾಡುತ್ತಾ ಶ್ರೀವಾದಿರಾಜರು ತಮ್ಮ ಒಂದು ಕೀರ್ತನೆಯಲ್ಲಿ ಅಳುವುದೇದಕೊ ರಂಗ ಎಂದು ಬರೆದು ಅದರಲ್ಲಿ ಯಶೋದೆಯು ಬಿಕ್ಕಿ ಬಿಕ್ಕಿ ಅಳುತ್ತಾ ಬಂದ ಗೋಪಿಯ ಕಂದನ ಉಕ್ಕಿ ಹರಿವ ಕಣ್ಣೀರ ಹನಿಯನ್ನು ಒರೆಸಿ, ಅಕ್ಕರೆಯಿಂದ ಬಾಲಕೃಷ್ಣನನ್ನು ಮುದ್ದಾಡಿ ಮನೆಯೊಳಗೆ ಆಡುವ ಮಾಣಿಕ್ಯ ಎಂದು ಯಶೋದೆ ಹೇಳುವ ಸಂದರ್ಭ ವರ್ಣಿಸಲಸದಳ!

ಶ್ರೀಕೃಷ್ಣ ತಾಯಿಗೆ ಹೇಳುತ್ತಾ ಹಳ್ಳಿಯ ಮಕ್ಕಳು ಬೈದರಮ್ಮ ಕಳ್ಳ ನಾನೆಂದು ಆಡಲೊಲ್ಲರು ಅಲ್ಲಿಂದ ಅಳುತ್ತಾ ಬಂದೆನಮ್ಮ ಎಂದು ಹೇಳಿದ. ಗೋಪ, ಗೋಪಿಯರೆಲ್ಲಾ ಹಗಲುಗಳ್ಳ ಬೆಣ್ಣೆ ಚೋರನೆಂದು ಹೇಳಿದರಮ್ಮ ಎಂದು ಹೇಳಿದ ಶ್ರೀಕೃಷ್ಣನ ಮಾತುಗಳು ಅವರ್ಣನೀಯ! ಕಡೆಗೋಲು ಶ್ರೀಕೃಷ್ಣನ ವರ್ಣನೆ ಮಾಡುತ್ತಾ, ಬೆಣ್ಣೆ ಕಡೆಯಲು ನಿಂತಂತೆ ನೀನಿದ್ದರೂ, ಭಕ್ತರ ಸಂಸಾರ ದುಃಖವನ್ನು ಮಥಿಸಿ ಅವರ ಹೃದಯವನ್ನು ಕಡೆಗೋಲು ಮೂಲಕ ಮಥಿಸಿ, ತತ್ವದ ಬೆಣ್ಣೆ ತರಲು ಉಡುಪಿಯಲ್ಲಿ ಬಂದು ನಿಂತೆ ಹೇ ಕೃಷ್ಣಾ ಎಂದು ಶ್ರೀವಾದಿರಾಜರು, ಸ್ತುತಿಸಿದ ಮಹನೀಯರು ದುಷ್ಟರಿಗೆ ಯಮ ಸದೃಶ ಸಂಹಾರಕ ಹೇ ರಮಾಕಾಂತ, ತೌಳವ ದೇಶಕೆ ಬಂದು ನಿಂತ ಹೇ ಕೃಷ್ಣ ನಿನ್ನ ನಿಂತ ಭಂಗಿ ವರ್ಣನೆಗೆ ಸಿಗದು, ಚೆಲುವಾದ ಹಗ್ಗ ಪಿಡಿದು ನಡುಪಟ್ಟಿಗೆ ಬಿಗಿದ ವರಮಣಿಯಿಂದ ಶೋಭಿತನಾಭಿ, ಕಮಲದ ಮೊಗ್ಗು ತರಹ ಶೋಭಿಸುವ ಎದೆಯ ಭಾಗ ಕಿರಿದಾದ ಹೊಟ್ಟೆ, ನೇರ ನಿಂತ ಭಂಗಿ, ಸುಂದರವಾದ ತೊಡೆಗಳ ಜೋಡಿ, ಅತಿ ಸುಂದರ ಶ್ರೀಮಧ್ವಮುನಿಯ ಮನೆದೈವ ನೀನಾಗಿ, ನಿನ್ನ ಹೊಟ್ಟೆಯಲ್ಲಿ ಮೂಡುವ ಮೂರು ಗೆರೆಗಳು, ಕಡಗ, ಅಂದುಗೆ ಕಿರುಗಂಟೆಯಿಂದ ಝಣ್ಣೆಂದು ಶಬ್ದ ಮಾಡುವ ಉಡುದಾರ ಮುದ್ರಾಂಕಿತ ಉಂಗುರ, ತೋಳು ಬಳೆ, ವಂಕಿ ಹಣೆಯ ಮೇಲೆ ಹಚ್ಚಿದ ಊರ್ಧ್ವ ಪುಂಡ್ರ, ನಾಸಿಕದ ಮಣಿ ಉಡುಪಿಯ ಅಂದವನು ಹೆಚ್ಚಿಸಿದ ತಾಣ ಎಂದು ರಾಜರು ಬಹುವಿಧದಿಂದ ವರ್ಣಿಸಿದ್ದಾರೆ. ಕಡೆಗೋಲು ಹಿಡಿದು ನಮ್ಮ ಉಡುಪಿಯಲಿ ನೆಲಸಿದ ರಘುಕುಲದಲಿ ಜನಿಸಿದ ರಾಮನೇ ಯದುವಂಶದಲ್ಲಿ ಜನಿಸಿದ ಕೃಷ್ಣನೇ ಬಡ ನಡುವಿನ ಸುಂದರಿಯರೊಡನಾಡುವ ಹಿರಣ್ಮಯ ಮೂರ್ತಿ ಈರೇಳು ಲೋಕದೊಳಗಿವನಿಗೆ ಯಾರು ಸಮ ವಾದಿರಾಜರಿಗೆ ಒಲಿದ ಉಡುಪಿ ಶ್ರೀಕೃಷ್ಣ ಎಂದು ಬಹು ಭಕ್ತಿಯಿಂದ ಪ್ರಾರ್ಥಿಸಿದ ಗುರುಸಾರ್ವಭೌಮರು. ಹೇ ಕೃಷ್ಣ ನೀನು ಸಕಲಜಗದೀಶ ಮಧ್ವಹೃದಯವಾಸ, ಸುಕುಮಾರರೂಪ ಮೋಹನ ರಮಾರಮಣ, ಸೃಷ್ಟಿ ಆದಿಯಲ್ಲಿ ಚತುರ್ಮುಖನ ತಂದೆಯಾಗಿ ಪ್ರಕಟಗೊಂಡವನು. ವೇದಾಭಿಮಾನಿಯಾದ ಶ್ರೀಲಕ್ಷ್ಮೀ, ಮತ್ತು ಸರಸ್ವತೀ, ಭಾರತೀ ದೇವಿಯರು ಬಿಡದೆ ನಿನ್ನ ಸೇವೆ ಮಾಡಿ ಬಣ್ಣಿಸುವರು. ಸಂಸಾರವೆಂಬ ಕಾಡಿಗೆ ಕಾಳ್ಗಿಚ್ಚಿನಂತವನೆ ನಮ್ಮನ್ನು ನಿನ್ನ ಭಕ್ತರನ್ನಾಗಿ ಸ್ವೀಕರಿಸೋ ಜಗದ್ರಕ್ಷಕ ಎಂದು ಹೇಳಿದ ಗುರು ಸಾರ್ವಭೌಮರು. ಉಡುಪಿ ಕೃಷ್ಣನನ್ನು ನರಸಿಂಹದೇವರೆಂದು ನಮಸ್ಕರಿಸಿ ಶ್ರೀವಾದಿರಾಜರು ಹೀಗೆ ವರ್ಣಿಸುತ್ತಾ ಕರೆಯದ ಮುನ್ನ ಬಂದು ನಿಂತೆ ಹೇ ದೇವಾ, ಖಳರೆದುರು ನಿಂತು ನಿನ್ನ ಅರಿಯದವರ ಸೀಳಿ ಲೋಕದಲಿ ಅಸಮ ಎನಿಸಿದೆ ಎನಗೆ ನೀನೇ ಬಂಧು ಕರುಣಾಸಿಂಧು ಧನದಾಸೆಯ ಬಿಡಿಸು, ಧರ್ಮಮಾರ್ಗದಿ ನಡೆಸೋ ಹಯವದನನಾಗಿ ಹರಿ ನೀ ದೈತ್ಯರ ಕೊಂದು ನಯದಿ ವೇದವ ತಂದೆ ನಳಿನೋದ್ಭವ ತಂದೆ ಶ್ರೀಕೃಷ್ಣಾ ಎಂದು ಬಹು ಬಗೆಯಿಂದ ಕೊಂಡಾಡಿದ್ದಾರೆ. ಅರುಣೋದಯದಲಿ ನಿನ್ನ ದ್ವಾರಪಾಲಕರು ಬಹು ಬಗೆಯ ಘಂಟಾನಾದ ಮಾಡಿರಲು ವಿವಿಧ ಹರಿದಾಸರು ತಾಳಗಳು, ಮೇಳಗಳಿಂದ ಪರಿಪರಿಯಾಗಿ ಗಾನ ಮಾಡಿರಲು ವಾದ್ಯಗಳು ಭೋರಿಡಲು, ಯತಿಗಳು ಎದ್ದು ಸ್ನಾನ, ಜಪ ಮಾಡಿರಲು ಶಂಖನಾದವಾಗಿರಲು,ನಿನಗೆ ನಿತ್ಯೋತ್ಸವ ಹೇ ಶ್ರೀಕೃಷ್ಣ ಎಂದು ಪ್ರಾರ್ಥಿಸಿದ್ದಾರೆ. ವಾದಿರಾಜರಿಗೊಳಿದು ವಚನಶುದ್ಧೋಕ್ತದಲಿ ಸ್ತೋತ್ರ ಮಾಡುವ ಜನರಿಗೆ ಬರುವ ದುರಿತವ ಕಳೆದು ರಕ್ಷಿಸುವ ಹಯವದನ ಎಂದು ನಮಸ್ಕರಿಸಿದ ಮಹಾನ್ ಗುರುಗಳು. ಹಡಗಿನಲಿ ಬಂದು ಕಡಲ ತಡಿಯಲಿ ನಿಂದು ಬಿಡದೆ ಯತಿಗಳ ಪೂಜೆಗೊಂಬೆ ಓದಿ ವಿನೋದದಲಿ ಪರಿಪ ಜನರಿಗೆ ಆಧಿವ್ಯಾಧಿಗಳ ವಾಸಿ ಮಾಡಿ ಬಹು ಭಾಗ್ಯಗಳ ನೀಡುವ ಹೇ ಉಡುಪಿ ಶ್ರೀಕೃಷ್ಣ ರಕ್ಷಿಸು ಎಂದು ಬೇಡಿದ ಮಹಾನುಭಾವರು. ಶೇಷಶಯನದಲ್ಲಿ ಮಲಗಿ ರುಕ್ಮಿಣಿ, ಸತ್ಯಭಾಮೆಯರನು ಆಲಂಗಿಸಿದ ಅಪ್ರತಿಮ ಗುಣಗಣಾಂಬುಧಿಯೇ, ಕರುಣಾನಿಧಿಯೇ, ಮುದ್ದು ಮುಖವ ತೋರಿಸಯ್ಯ ದೇವಾ ಎಂದು ಹೇಳುತ್ತಾ ರಾಜರು, ಯತಿಗಳು ಅತಿ ಹರ್ಷದಿಂದ ಪುಳಕಿತರಾಗಿ, ಪ್ರತಿಕ್ಷಣ ನಿನ್ನನ್ನು ನೆನೆದು ವ್ರತದಿಂದ ಹೇಳುವ ಶ್ರುತಿ ಪುರಾಣಗಳನ್ನು ಸ್ತುತಿ ಮಾಡುವುದನ್ನು ಆಲಿಸುವ ದೇವಾ ಎಂದು ಸ್ತುತಿ ಮಾಡಿದ ಮಹನೀಯರು. ತಂಪಿನ ನಾಗಭೋಗ ವಿಸ್ತಾರದಲಿ ಕುಳಿತು ವನಜಸಂಭವಸಹಿತ ವಿಬುಧ ಜನರ ಒಡ್ಡೋಲಗದಲಿ ಮುನಿಜನರು ಸಹ ಪೂಜಿಸಲು ಮೆಚ್ಚಿ ಅನುಗ್ರಹಿಸುವೆ ಹೇ ದೇವಾ, ಉಡುಪಿಯಲಿ

ನೆಲೆಸಿದ ಪಾವನ ಪಾದ ಎಂಥಾ ಚೆಲುವು ಜಗದಿ ಕೀಳು ಪಂಥದೊಳಿದ್ದ ಕುರುಪತಿಯ ಉರುಳಿಸಿದ ಪಾವನಪಾದ, ಬಲಿಯ ಪಾದವ ಬೇಡಿ ತ್ರೈಲೋಕ್ಯ ವನಳೆದು ಏಕಾಂಘ್ರಿಯಲಿ ಬೆಳೆದು ಬ್ರಹ್ಮಾಂಡವ ತಾಗಿ ನೀ ಬ್ರಹ್ಮದೇವರಿಂದ ಪೂಜೆಗೊಂಡ ನಿನ್ನ ಪಾವನಪಾದ ಸೌಖ್ಯನೀಡುವ ಪಾವನ ಪಾದ ಎಂದು ಹೇಳುತ್ತಾ, ವಾದಿರಾಜರು ಹೇ ಉಡುಪಿ ಶ್ರೀಕೃಷ್ಣ ಸಂತೋಷದಿಂದ ನಿಶ್ಚಿಂತೆಯಾಗಿ ಲಕ್ಷ್ಮೀ ಭೂಕಾಂತೆಯರೊಡನೆ ಸೇವಿಪ ನಿನ್ನ ಪಾವನಪಾದ ನೆಲೆಸಿದೆ ಉಡುಪಿಯಲಿ ಎನ್ನ ಹೃದಯ ಕಮಲದಲಿ ಎಂದಿದ್ದಾರೆ ವಾದಿರಾಜರು. ಏನು ಪುಣ್ಯ ಮಾಡಿದಳೊ ಯಶೋದೆ ನಿನ್ನ ಕರೆದು ಮುದ್ದಿಸಿದಳು, ವರಾಹಾವತಾರದಲಿ ಭೂಮಿ ಎತ್ತಿದವ, ಗೋವರ್ಧನ ಪರ್ವತ, ಮಂದರಪರ್ವತ ಎತ್ತಿದವ, ವೇದಗಳಿಂದ ಪ್ರತಿಪಾದ್ಯನಾದವ, ದೈತ್ಯರನ್ನು ತಲ್ಲಣ ಗೊಳಿಸಿದವ, ಪಡುಗಡಲ ತಡಿಯಲಿ ದ್ವಾರಕೆಯಿಂದ ಬಂದು ನೆಲೆಸಿದವ, ಹೇ ಕೃಷ್ಣ ನಿನ್ನ ಹೇಗೆ ವರ್ಣಿಸಲಿ ಎಂದು ಭಕ್ತಿಯಿಂದ ಬೇಡಿದ ವಾದಿರಾಜರು ಅಪರೋಕ್ಷೀ ಕೃತ ಗುರು ಸಾರ್ವಭೌಮರು. ಶುದ್ಧ ಸಿದ್ಧಾಂತ ಜಗಕೆ ತೋರಿಸಿದ ಮಧ್ವರಿಗೆ ಒಲಿದು ಬಂದ, ನಾರಿ ನರರೂಪದಿಂದ ವಿಹರಿಸುವ ಉಡುಪಿ ಶ್ರೀಕೃಷ್ಣನ ಪಾದ ಚಾನೂರು ನಾಭಿ ಕಿರಿ ಡೊಳ್ಳುವಕ್ಷ, ತುಂಬುಗಲ್ಲ, ವಕ್ತ್ರ ನೇತ್ರ ಮೌಳಿಯ ನಲ್ಲ, ಕಡುಮುದ್ದು, ಶ್ರೀಕೃಷ್ಣ ಎಂದು ವರ್ಣಿಸಿದ ಗುರುಗಳು! ಶ್ರೀಮಧ್ವರ ಕರಪದ್ಮಪೂಜಿತ ಸುಜನರುದ್ಧರಿಸುವ ಗುಣನಿಧಿ, ಶಂಕೆಯಿಲ್ಲದೆ ಕಾಯುವ ನಮ್ಮನ್ನು ಎಂದು ತಿಳಿಸಿದ್ದಾರೆ. ದುಷ್ಟ ಜನರ ಸಂಹರಿಸಿ, ನಂಬಿದ ದೇವತೆಗಳ ದಿಟ್ಟರನ್ನಾಗಿ ಮಾಡಿದ ಜಗಜಟ್ಟಿ ರಂಗ ಧೀರ ಶ್ರೀಕೃಷ್ಣಾ ನೀ ಭವರೋಗವ ನೀಗಿಸುವ ವೈಕುಂಠಾಧೀಶನು.

ಮಂದಸ್ಮಿತ ಮುಖದಿಂದ ಉಡುಪಿಯಲಿ ನಿಂತ ನಂದನ ಕಂದ ಮುಕುಂದ ವೃಂದಾರಕೇಂದ್ರ, ಗೋವಿಂದಗಾಡಿಕಾರ ಶ್ರೀಕೃಷ್ಣ, ಶುದ್ಧ ಮುನಿಗಣಪ್ರಿಯ ಮುದ್ದು ಹಯವದನಗಾಡಿಕಾರ ಕೃಷ್ಣಾ ನಮ್ಮನ್ನು ಸಲಹೆಂದು ಪ್ರಾರ್ಥಿಸಿದ ಮಹನೀಯರು. ಮಧುಮಾಸದಲಿ ನೀನಿರುವೆ ಚದುರೆ ಗೋಪಿಯರ ಸಮ್ಮೇಳನದಲ್ಲಿ, ಮುದದಿ ಭರದಿಂದ ವನಾಂತ ರವನಾಡುವ ಪದುಮನಾಭ. ಮುದ್ದು ಉಡುಪಿ ಶ್ರೀಕೃಷ್ಣನೇ ಸೋದೆಯಲಿ ಮೆರೆವ ತ್ರಿವಿಕ್ರಮರಾಯ, ವಾದಿರಾಜ ಪ್ರಿಯ ಹಯವದನ ಜಿತಿ ಕದನ, ಜಯ ಮಧ್ವ ಗುರುರಾಯರ ಆರಾಧ್ಯ ದೈವ ಜಯ ಉಡುಪಿಯ ಕೃಷ್ಣ ಎಂದು ಶ್ರೀವಾದಿರಾಜರು ಕೃಷ್ಣನಿಗೆ ಒಂದು ಉಗಾಭೋಗ ರಚಿಸಿದ ಗುರುಸಾರ್ವಭೌಮರು. ನಲಿವ ಬೆಣ್ಣೆಯನ್ನು ಬಯಸುವ ಕೃಷ್ಣ ನಮಗೆ ಒಲಿವ ಖಳರನ್ನು ಸಂಹರಿಸುವ, ಕಡೆವ ಕೋಲನ್ನು ಹಿಡಿದ ಶರಣ ಜನರ ಹಿತರ ಅಭಯದಾತ ಬಾಲ ಸನ್ಯಾಸಿಗಳ ಶ್ರೀಕೃಷ್ಣ ಕಾಲಲಂದುಗೆ ಕಡಗ ಕಂಕಣಲೋಲ ಉಡುಪಿಯ ಶ್ರೀಕೃಷ್ಣ ಜಗಕೆ ಬಾಲಲೀಲೆ ತೋರಿದ ಗೋಪಾಲ ಬಿಡದೆ ಭಕ್ತರ ಪಾಲಿಸುವ ಒಡೆಯ ಕೃಷ್ಣ ನೀನು ಬಾಲ ಸನ್ಯಾಸಿಗಳ ಮೊರೆಯನ್ನು ಬಿಡದೆ ಆಲದೆಲೆಯ ಮೇಲೆ ಮಲಗಿ ಅನುಗ್ರಹಿಸುವ ಗೋಪಾಲ ಉಡುಪಿ ಕೃಷ್ಣ ಸದ್ಗುರು ಮುನಿವಾದಿರಾಜರ ಮುದ್ದು ಉಡುಪಿಕೃಷ್ಣ. ಶ್ರೀಕಷ್ಣನನ್ನು ಸಾಕ್ಷಾತ್ಕರಿಸಿಕೊಂಡ ಶ್ರೀವಾದಿರಾಜರು, ಶ್ರೀರುಕ್ಮಿಣೀಶ ವಿಜಯದಲ್ಲಿ ಕೃಷ್ಣನು ಕೊಳಲನ್ನು ಅತ್ಯಂತ ಸುಂದರವಾಗಿ ವರ್ಣನೆ ಮಾಡುತ್ತಾ, ಕೃಷ್ಣನು ತನ್ನ ಅಧರಾಮೃತದಿಂದ ಕೊಳಲನ್ನು ಊದುತ್ತಾ ಇರಲು, ಗೋಕುಲದಲ್ಲಿ ಮೇಯುತ್ತಿದ್ದ ಹಸುಗಳು ತಮ್ಮ ತಲೆಯೆತ್ತದೇ ಮೇಯುತ್ತಿರಲು ಎಲ್ಲಿ ತಮ್ಮ ಕೊರಳಲ್ಲಿ ಕಟ್ಟಿದ ಗಂಟೆ ಶಬ್ದ ಕೃಷ್ಣನ ಕೊಳಲಿನ ನಾದಕ್ಕೆ ತೊಂದರೆಯಾಗುವುದೇನೋ ಎಂದು ತಲೆಯೆತ್ತದೆ ಹುಲ್ಲನ್ನು ಮೇಯುತ್ತಿದ್ದವು ಎಂದು ಶ್ರೀವಾದಿರಾಜರು ಅತ್ಯಂತ ಅಲಂಕಾರಿಕ ಹೋಲಿಕೆ ಮಾಡಿ ವರ್ಣಿಸಿದ್ದು ಅಮೋಘ.

ದೇವಕೀ ಜಠರೋದಯಾಂಬುಧಿಚಂದ್ರನ ಸುಖಸಾಂದ್ರನ ಘನ ಯಮುನೆ ದಾಟಿ ಬಂದವನ ಮಾವನನ್ನು ಸಂಹರಿಸಿದವನ ಬಾಲ್ಯದಲ್ಲಿ ಗೋಪಿಯರು ಜಲಕ್ರೀಡೆಗಿಳಿದಾಗ, ಅಲ್ಲಿ ನಲಿದು ಲೀಲೆಯಲಿ ಲಲನೆಯರಿಗಿಷ್ಟವ ನೀಡಿ ಸಂತುಷ್ಟ ಪಡಿಸಿದ ಬಲದಿ ತಾಯಿ, ತಂದೆ ಬಂಧನವ ಬಿಡಿಸಿ ಕೀರ್ತಿಪಡೆದ ಶ್ರೀಕೃಷ್ಣ ನೆನೆವೆನು ಅನುದಿನ ಎಂದು ಪ್ರಾರ್ಥಿಸಿದ್ದಾರೆ ಶ್ರೀವಾದಿರಾಜ ಗುರುಸಾರ್ವ ಭೌಮರು. ಅಂಗದೊಳು ಧರಿಸಿದ ದಿವ್ಯಾಭರಣ, ಕಣ್ಣುಗಳಿಗೆ ಒಪ್ಪಿದ ರವಿಕಿರಣ, ಮುನಿಪುಂಗವ ವಂದಿತ ಸದಾ ಕೃಷ್ಣ ಚರಣಕಮಲಗಳ ನೆನೆವರ ಶ್ರೀರಂಗನ ಉತ್ಸವಕೆ ಮಂಗಳಾರತಿ ಸಂಗಡ ಹೊರಡುವ ಕೃಷ್ಣಾ ಭರದಿಂದ ಪಲ್ಲಕ್ಕಿ ಏರಿ, ಮಧ್ವಸರೋವರದೆಡೆಗೆ ಹೋಗಿ ಸುತ್ತು ಮೆರೆವ ದೀಪದಿಂದ ವಿಜೃಂಭಿಸುವ ಜನರಿಗೆ ಜಲಕ್ರೀಡೆ ತೋರಿಸಿದ ಉಡುಪಿಯ ಶ್ರೀಕೃಷ್ಣ ನಿನ್ನ ಪರಿ ಪರಿಯ ವಿನೋದ ವರ್ಣಿಸಲು ಅಸಾಧ್ಯ!! ಶ್ರೀವಾದಿರಾಜರು ಶ್ರೀಕೃಷ್ಣನನ್ನು ಹೇಗೆ ವರ್ಣಿಸಲಿ ಎಂದು ಹೇಳುತ್ತಾ ಹೇ ಉಡುಪಿಕೃಷ್ಣ ನೀನು ಬಹು ವೇಷದ ಲಾವಣ್ಯದ ಕಣಿಯಾಗಿ ಕರುಗುವ ಚಿನ್ನದ ಕಾಂತಿ ಹೊಂದಿ ಗರುಡನ ಗರಿಗಳಿರುವ ಪೀತಾಂಬರ ಎರಡು ಪಾರ್ಶ್ವಗಳಲ್ಲಿ, ಶಿರದಲ್ಲಿ ಕಿರೀಟ, ಕೊರಳಲ್ಲಿ ಜೋಡಿ ಹಾರಗಳು, ಮುತ್ತಿನ ಬಳೆಯ ಕಂಕಣ, ವರ ಸೂರ್ಯನಾರಾಯಣ ಬಾಹುಗಳುಳ್ಳ ಮಕರ ಕುಂಡಲ, ಚಿನ್ನದ ಬಣ್ಣದ ಮುಂಡಾಸು ವಸನವ ಸುತ್ತಿದ ಬಿಗಿಯಾದ ಬಟ್ಟೆ, ನಸುನಗುವ ವಿಪ್ರ ವೇಷದ ಕೃಷ್ಣ ಏನೆಂತು ಬಣ್ಣಿಸಲಿ ಎಂದು ರಾಜರು ಕೇಳುತ್ತಾರೆ.

ಶುಕ್ರವಾರದ ಕೃಷ್ಣನ ಅಲಂಕಾರ ಕುರಿತು ಬುಗುರಿಯಂತಹ ದೃಢವಾದ ಕುಚಗಳು ಬಡನಡು, ಕಡೆಗಣ್ಣು ನೋಟದಿ ಮೋಹಿನಿ ರೂಪದ ಭೂಷಣಗಳು ಹೇಗೆಂದು ಬಣ್ಣಿಸಲಿ ಎಂದು ಪ್ರಶ್ನಿಸುವರು ಶಂಖ, ಚಕ್ರವನ್ನು ಹಿಡಿದು ಸರ್ವಾಲಂಕಾರದಿಂದ ಮೆರೆವ ವೆಂಕಟೇಶನ ರೂಪವೇ ಎಂದು ವರ್ಣಿಸಲೇ ಎಂದು ಶ್ರೀವಾದಿರಾಜರು ಕೇಳುವ ಸಂದರ್ಭ ವರ್ಣನಾತೀತ ! ಆಶ್ರಿತ ಜನರ ಕೋರಿಕೆಗಳಿಗೆ ಒಲಿದು ಅನುಗ್ರಹಿಸುವ ಸದ್ವೈಷ್ಣವರ ದೇವಾ ನೀನೆಂದು ಬಣ್ಣಿಸುವೆ. ಭಕ್ತವತ್ಸಲ ಎಂಬ ಬಿರುದು ಪಡೆದು, ದ್ವಾರಕೆಯಿಂದ ಬಂದು ಸುಖತೀರ್ಥಮುನಿಗೆ ಸುಖಕರನಾಗಿ ಬಂದ ಉಡುಪಿ ಶ್ರೀಕೃಷ್ಣನನ್ನು ಬಿಡದೆ ಭಜಿಸಿರಿ ಎಂದು ಶ್ರೀವಾದಿರಾಜರು ಹೇಳಿ ಭಕ್ತರು ದೃಢ ಭಕ್ತಿಗೆ ಶರಣಾಗಿರಿ ಎಂದು ತಿಳಿಸಿದ ಮಹಾನ್ ಗುರುಗಳು. ಯಶೋದೆಗೆ ಕರುಣಿಸಿ ಆಕೆಯ ಇಷ್ಟಾರ್ಥಗಳನ್ನು ನೀಡಿ ಕಾಯುವ ಶ್ರೀಕೃಷ್ಣ ಧೃತರಾಷ್ಟ್ರನ ಮಗ ಕಟ್ಟಲು ಬಂದಾಗ

ಕಷ್ಟಗಳನ್ನು ನೀಡಿ ಭಕ್ತರ ಅಪರಾಧವ ಕ್ಷಮಿಸುವ ಶ್ರೀಕೃಷ್ಣ ಕಾಲಲ್ಲಿ ನಿನ್ನನ್ನು ಒದ್ದ ಮುನಿಪನನ್ನು ಮೂರು ಲೋಕ ಅಚ್ಚರಿಪಡುವಂತೆ ಮುದ್ದಿಸಿ ಮೆರೆದ ಯತಿಕುಲಪತಿ ಶ್ರೀಮಧ್ವಾಚಾರ್ಯರು ತಾವು ರಚಿಸಿದ ಗ್ರಂಥಗಳಿಂದ ಅಪೂರ್ವ ಶ್ರುತಿ ಸ್ಮೃತಿಗಳನ್ನು ಉದ್ಧರಿಸಿ, ಶ್ರೀಹರಿಯ ಹಿರಿಮೆ ಕೊಂಡಾಡಿ ವೈದಿಕ ಮಾರ್ಗದ ಮೂಲ ಪರಂಪರೆಯನ್ನು ಪುನರುದ್ಧರಿಸಿದ ಗುರುಗಳೆಂದು ಶ್ರೀವಾದಿರಾಜರು ಸ್ಮರಿಸಿದ್ದಾರೆ. ಕಂಕಣ ಕುಂಡಲ ಮಕುಟ ಪಾದುಕಾ ಹಾರ ಕಿಂಕಿಣಿ ಕೌಸ್ತುಭ ನೂಪುರದಿಂದ ಅಲಂಕೃತನಾಗಿ ಭಕ್ತರಿಗೆ ಅಭಯ ನೀಡುವ ಶ್ರೀಕೃಷ್ಣ ಭಯವನ್ನು ತೊರೆಯುವ ಎಂದು ಸಾರಿದ ರಾಜರು, ಹರಿಯನ್ನು ಕೊಂಡಾಡುವೆ ಹರಿಯನ್ನು ನೋಡುವೆ ಹರಿಯನ್ನು ಬೇಡುವೆ ದುರುಳನ್ನು ಕಾಡುವ ದುರಿತವನು ನಾಶಮಾಡುವ ಮತ್ತು ನೀನು ಸುಕೃತವನ್ನು ಕೊಡುವ ಭಕ್ತರಿಗೆ ಭಯ ತಾರದೆ ನಲಿ ದಾಡುವ ಶ್ರೀಕಾಂತನ ಮುಂದೆ ನಿಂತು ಕುಣಿದಾಡುವೆ ಎಂದು ಪರಿ ಪರಿಯಿಂದ ಉಡುಪಿಯ ಶ್ರೀಕೃಷ್ಣನನ್ನು ವರ್ಣಿಸಿ ಹಯವದನನ್ನು ಪೂಜಿಸುವೆ ಭಕ್ತ ರಿಗೆ ಭಯವನ್ನು ಬಾರದಂತೆ ನೀನು ಕಾಪಾಡೆಂದು ಕೇಳಿದ ಮಹಾನು ಭಾವರು.

ಕರ್ಮದಿಂದ ಸೇವಿತ ಉಡುಪಿ ಶ್ರೀಕೃಷ್ಣನಿಗೆ ಮಂಗಳ ಹೇಳುತ್ತಾ, ಕ್ಷೀರಸಾಗರ ಶಯನನಿಗೆ, ಬ್ರಹ್ಮಾದಿವಂದಿತನಿಗೆ ನಿತ್ಯ ಕರ್ಮಂದಿ ಸೇವಿತ ನಿಗೆ, ನಂದನ ಕಂದನಿಗೆ ಮಂದರಗಿರಿಧರನಿಗೆ, ಇಂದಿರಾಕಾಂತನಿಗೆ, ಮಕರಕುಂಡಲಧರಗೆ, ರುಕ್ಮಿಣಿರಮಣನಿಗೆ, ಅಕಳಂಕ ಮಹಿಮನಿಗೆ, ಶುಕವಾಹನಪಿತನಿಗೆ (ಕಾಮನಿಗೆ ) ಅಧಿಕಕೋಟಿ ರವಿತೇಜ ಮಕುಟ ತೋಟ್ಟವನಿಗೆ ಮಂಗಳಂ ಎಂದು ರಾಜರು ನಮಸ್ಕರಿಸಿ ವರ್ಣಿಸಿದ ಮಹ ನೀಯರು. ವರ ಕೌಸ್ತುಭಹಾರ ಧರಿಸಿ, ಭಕ್ತ ಪ್ರಹ್ಲಾದನಿಗೆ ನರಹರಿ ರೂಪ ದರ್ಶಿಸಿ, ಅಭಯ ನೀಡಿದ ಕರುಣದಿ ಗೋಪಿಯರನು ರಕ್ಷಿಸಿದ ಸಿರಿ ಮುದ್ದುಹಯವದನನಿಗೆ ಮಂಗಳಂ ಎಂದು ವಂದಿಸಿದ್ದಾರೆ.

ನಾರದರ ಅವತಾರ ಪುರಂದರದಾಸರ ಮನೆಯಲ್ಲಿ ಪರಿಪರಿಯ ಲೀಲೆಯ ಮಾಡಿ ಅವರ ಸಾಧನೆಗೆ ಸಾರಥಿಯಾದೆ ಕೃಷ್ಣಾ ಎಂದು ಹೇಳುತ್ತಾ, ಶ್ರೀವಾದಿರಾಜರು ಓದಿದಾಕ್ಷಣದಿಂದ ಧನ್ಯನೆಂದೆನು ನಾನು ಸಾಧಿಸಲಾಪೆನೆ ನಿನ್ನ ಸೇವೆಯನ್ನು ಆದಿ ಮೂರುತಿ ಸಿರಿಹಯವದನ ದೇವಾ ನಿನ್ನ ದಾಸರ ಸಂಗದಲ್ಲಿಡು ಎಂದು ಕೇಳಿಕೊಳ್ಳುತ್ತಾರೆ!

ತಂದೆ ನೀನೇ, ತಾಯಿ ನೀನೇ ಎಂದು ವರ್ಣಿಸುತ್ತಾ ರಾಜರು ಮನ್ನಿಸೆನ್ನ ಮಧುಸೂದನ ಮೋಹನಕಾಯನೇ ಉನ್ನತ ಗುಣನಿಲಯ ಉಡುಪಿಯ ಶ್ರೀಕೃಷ್ಣ ಎಂದು ಹೇಳುತ್ತಾರೆ. ಅಚ್ಚಹಾರ ಶೋಭಿತಕಂಠ ಆಶ್ರಿತರಿಗೆ ನೀನು ನಂಟ, ನಂಬಿದ ಪಾರ್ಥನ ಮಿತ್ರನೆನಿಸಿದೆ, ನಿನ್ನ ಅರ್ಚಿ ಸಿದವರನು ಕೃತಾರ್ಥ ಮಾಡಿದೆ ನೀನೇ ಸರ್ವಸಮರ್ಥ ಎನಿಸಿದೆ ಮಧುಸೂದನ ನೀನೇ ಬಂಧು ಬಳಗ ತಂದೆ ತಾಯಿ ಕರುಣದ ಮಾಡುವ ಮುಕುಂದ ಎಂದು ಹೇಳಿದ ಗುರುಗಳು ಇಂದ್ರ ಕೋಪಿಸಿ ಮಳೆ ತರಿಸಲು ನಿನ್ನ ತಂದೆ, ತಾಯಿ, ಬಂಧು ಬಳಗದವರು ಗೋಪಾಲ ವೃಂದದವರು ಕಂಗೆಡಲು, ಗೋವರ್ಧನಗಿರಿ ಎತ್ತಿ ಅವರ ಭಯವನ್ನು ನಿವಾರಿಸಿ ಪಾಲಿ ಸಿದೆ. ಚಂದದಿ ನಿನ್ನ ಸಂಪತ್ತನ್ನು ನಾನು ಬಗೆ ಬಗೆಯಿಂದ ವರ್ಣಿಸುವೆ. ಈಗ ಮಧ್ವಮುನಿ ಗೊಲಿದ ಉಡುಪಿಯ ಶ್ರೀಕೃಷ್ಣ ಸದಾ ಪೂಜಿಸಿ ಕೊಂಡೆ ನಿನ್ನ ಮುಂದೆ ನಂದಾ ದೀಪಗಳನು ಕಂಡೆ ಭಕ್ಷ್ಯ ಭೋಜ್ಯ ಕಂದ ಮೂಲ ಫಲಂಗಳನು ಕಂಡೆ ಶ್ರೀಕೃಷ್ಣಾ ನಿನ್ನ ಮಹಿಮೆ ವರ್ಣಿಸಲು ಯಾರು ಬಲ್ಲರು? ಜ್ಞಾನ ಶೂನ್ಯವಾಗಿ ಸೊಕ್ಕಿನಿಂದ ಮೆರೆದು ತಾನೇ ವಾಸುದೇವ ಎಂದ ಹೀನ ಪೌಂಡ್ರಕನ ಶಿರವ ತರಿದ ಮಹರಾಯ ನೀನು ಲೋಕಭರಿತ ರಂಗನೋ ನೀನೆಂದು ರಾಜರು ಸ್ಮರಿಸಿದ ಗುರುಗಳು. ತನ್ನ ಸೇವಕ ಜನರೊಂದಿಗೆ ಉನ್ನತ ಉಡುಪಿನಲ್ಲಿ ಉಡುಪಿಯಲಿ ನಿಂತು ಘನ್ನ ಮಂದಿರ ಮಾಡಿಕೊಂಡ ಪ್ರಸನ್ನ ಹಯವದನ ಕೃಷ್ಣ ನೀನು ಲೋಕ ಭರಿ ತನೋ ರಂಗಾ ಎಂದು ಶ್ರೀವಾದಿರಾಜ ಗುರುಸಾರ್ವಭೌಮರು ಅತಿ ಭಕ್ತಿಯಿಂದ ವರ್ಣಿಸಿ, ನಮಸ್ಕರಿಸಿದ ಮಹಾನ್ ಗುರುಗಳು! ಶ್ರೀ ವಾದಿ ರಾಜರು ಉಡುಪಿ ಶ್ರೀಕೃಷ್ಣನ ಚತುರ್ದಶ ಪೂಜೆ ಮಾಡಿ ಬಗೆ ಬಗೆಯ ಮಂಗಳಾರತಿ ಬಾರಿ ಬಾರಿಗೆ ಮಾಡಿ ಚಾಮರ ದರ್ಪಣಗಳ ತೋರಿಸಿ ನಗೆ ಮುಖದ ಕೃಷ್ಣನ ಪಾದಕ್ಕೆ ಷೋಡಶ ಪೂಜೆ ಮಾಡಿ, ನೈವೇದ್ಯ ಅರ್ಪಿಸಿ ತರುವಾಯ, ಹನುಮಂತ ದೇವರಿಗೆ ಹಸನಾದ ಭಕ್ಷ್ಯ ಭೋಜ್ಯ ಅನುದಿನ ಅರ್ಪಿಸಿ, ಮುನಿಮಧ್ವರಾಯರಿಗೆ ಮುದದಿಂದ ನೈವೇದ್ಯ ಅರ್ಪಿಸಿದರು.

ಪುಟ್ಟ ಕೃಷ್ಣನಿಗೆ ಹೊನ್ನ ಕವಚವ ತೊಡಿಸಿ ರನ್ನ ಕಿರೀಟವ ದಿಟ್ಟಾದ ಪದಕಗಳನು ದಿವ್ಯ ಮುತ್ತಿನಸರ ಹೂ ಮಾಲೆ ತೊಡಿಸಿ ಶ್ರೇಷ್ಠ ಧೂಪ ದೀಪಗಳನು ಇಟ್ಟು ದೋಸೆ, ಬೆಣ್ಣೆ ಗಟ್ಟುರುಳಿ ನೈವೇದ್ಯವನ್ನು ಮಾಡಿ ಕಟಕಟನೆ ಶುಂಠಿ ಕಷಾಯವನ್ನು ಮಾಡಿ ಬಾಯಿ ತೊಳೆದು ತಟ್ಟನೆ ರಾತ್ರಿ ಪೂಜೆಯ ಗೊಂಡ ಪಲ್ಲಕ್ಕಿಯಲಿ ಬಂದ ಕೃಷ್ಣನನ್ನು ಬಹು ಸಂಭ್ರಮದಿ ಸೇವೆ ಮಾಡುವರು ಶ್ರೀವಾದಿರಾಜರು.

ಸೋದೆಯಲ್ಲಿ ಶ್ರೀವಾದಿರಾಜರ ಮೂಲ ವೃಂದಾವನದ ಬಲ ಪಾರ್ಶ್ವದಲ್ಲಿ ಮಂದಿರದ ಆವರಣದಲ್ಲಿ ಸ್ವಪ್ನ ವೃಂದಾವನದ ಮಹಿಮೆ ಯನ್ನು ಲಕ್ಷ್ಮೀಪತಿಯ ಮೂಲಕ ವೇದನಿಧಿ ತೀರ್ಥರು ಶ್ರೀರಾಮ ಚಂದ್ರಾಚಾರ್ಯರಿಂದ ಬರೆಯಿಸಿ ಸಾರರೂಪದ ಶ್ಲೋಕಗಳ ಸಂಗ್ರಹ "ಅಣುವೃಂದಾವನಾಖ್ಯಾನ" ಶಿಲಾಲೇಖನ ಶ್ರೀವಾದಿರಾಜರ ಶಿಷ್ಯರಾದ ವೇದವೇದ್ಯರ ವೃಂದಾವನದ ಹತ್ತಿರ ಕೆತ್ತಲಾಗಿದೆ. ಶ್ರೀಭೂತರಾಜರ ಗುಡಿ ಶ್ರೀವಾದಿರಾಜರ ವೃಂದಾವನದ ಹೊರ ಭಾಗದಲ್ಲಿ ಸ್ಥಾಪಿಸಲಾ ಗಿದೆ.

ಮೂಜಗದೊಳಗಿಂತ ಗುರುಗಳೆಲ್ಲಿಹರು
ಕಂಜಸುತನ ಪದವೇರುವರು
ರಾಜೇಶ ಹಯಮುಖನ ಕಿಂಕರಾಗ್ರಣಿಗಳು
ರಾಜಿಪ ಶ್ರೀ ಸೋದಾಪುರದಲಿಹರು.

**॥ಶ್ರೀಕೃಷ್ಣಾರ್ಪಣಮಸ್ತು॥**



# ಕ್ಷೇತ್ರ ದರ್ಶನ


ಹಿಮಾಲಯ ಪರ್ವತ ಶ್ರೇಣಿಗಳು ಭೂಮಂಡಲದಲ್ಲಿರುವ ಅತ್ಯಂತ ಶ್ರೇಷ್ಠವಾದ ಪರ್ವತ ಶ್ರೇಣಿಗಳು ಎಂದು ಶಾಸ್ತ್ರಗಳು ಬಣ್ಣಿಸಿವೆ. ಇದಕ್ಕೆ ನಾನಾ ಕಾರಣಗಳಿವೆ. ಒಂದು ಪರಮಾತ್ಮ ಸ್ವಯಂ ಇಲ್ಲಿ ಬಂದು ನೆಲೆಸಿದ್ದಾನೆ ಎಂಬ ಒಂದು ಕಾರಣವಾದರೆ, ಮಹಾನದಿಗಳಾದ ಗಂಗಾ ಹಾಗೂ ಸಿಂಧು ಮೊದಲಾದ ಪವಿತ್ರ ನದಿಗಳ ಉಗಮಸ್ಥಾನ ಎಂಬುದು ಎರಡನೆಯ ಕಾರಣ. ಭಾರತ ಭೂಭಾಗದಲ್ಲಿ ಬದರಿಯಲ್ಲಿ ಬದರಿ ನಾರಾಯಣನಿದ್ದರೆ, ಕೇದಾರದಲ್ಲಿ ರುದ್ರದೇವರು ಸನ್ನಿಹಿತರಾಗಿದ್ದರೆ, ನೇಪಾಳದ ಭೂಭಾಗದಲ್ಲಿ ಮೋಕ್ಷಪ್ರದನಾದ ಮುಕ್ತಿನಾಥನು ಮುಕ್ತಿನಾಥ ಕ್ಷೇತ್ರದಲ್ಲಿದ್ದರೆ, ಕಠ್ಮಂಡುವಿನಲ್ಲಿ ರುದ್ರದೇವರು ಪಶುಪತಿನಾಥ ಎಂಬ ಹೆಸರಿನಲ್ಲಿ ವಿರಾಜಮಾನನಾಗಿದ್ದಾನೆ. ನೇಪಾಳದ ಭೂಭಾಗವನ್ನು ಬೌದ್ಧರು ಬೌದ್ಧ ಕ್ಷೇತ್ರವೆಂದು ಪ್ರತಿಪಾದಿಸಿದರೂ ಅದು ಹಿಂದೂಗಳಿಗೆ ಅತ್ಯಂತ ಪವಿತ್ರವಾದ ಕ್ಷೇತ್ರವೆಂದು ಇಂದಿಗೂ ನೇಪಾಳದಲ್ಲಿ ಸಿಗುವ ಪುರಾವೆಗಳಿಂದ ನೇಪಾಳದ ಭೂ ಭಾಗವನ್ನು ಪವಿತ್ರ ವೈಷ್ಣವ ಕ್ಷೇತ್ರವೆಂದೇ ಪರಿಗಣಿತವಾಗುತ್ತದೆ.

ನೇಪಾಳದ ಭೂಭಾಗವನ್ನು ಇತ್ತೀಚೆಗೆ ಸುಮಾರು ಏಳು ದಿನಗಳ ಕಾಲ ಪಾತ್ರರ ಸಂಗಡ ಯಾತ್ರೆಯ ಮಾಡಿ ಅಲ್ಲಿರುವ ಹಾಗೂ ಪೌರಾಣಿಕ ಕ್ಷೇತ್ರಗಳಿಗೆ ಹಾಗೂ ಪ್ರವಾಸ ತಾಣಗಳನ್ನು ಸಂದರ್ಶಿಸಿ ಬಂದ ಮೇಲೆ ಆ ಸ್ಥಳಗಳ ಬಗ್ಗೆ ಸೂಕ್ತವಾದ ಹಲವು ಪೌರಾಣಿಕ ಮಾಹಿತಿಗಳನ್ನು ಸಂಗ್ರಹಿಸಿ, ಮುಂದೆ ನೇಪಾಳಕ್ಕೆ ಹೋಗುವ ಪ್ರಯಾಣಿಕರಿಗೆ ಇದೊಂದು ಮಾರ್ಗದರ್ಶನವಾಗಲಿ ಎಂಬ ಸದುದ್ದೇಶದಿಂದ ಈ ಲೇಖನವನ್ನು ಬರೆಯುತ್ತಿದ್ದೇನೆ.

**ಜನಕಪುರಿ**

ಇದು ಭಾರತೀಯ ಭೂಭಾಗವಾದ ದರ್ಭಾಂಗದಿಂದ 80 ಕಿ.ಮೀ.ದೂರದಲ್ಲಿದೆ. ಮಾರ್ಗ ಹೆಚ್ಚಿಲ್ಲದಿದ್ದರೂ ಮಾರ್ಗವನ್ನು ಕ್ರಮಿಸಲು ಸುಮಾರು 6 ಗಂಟೆಗಳು ಬೇಕು. ರಸ್ತೆಗಳು ಚೆನ್ನಾಗಿಲ್ಲದಿರುವಿಕೆ ಹಾಗೂ ನೇಪಾಳದ ಗಡಿಭಾಗದಲ್ಲಿ ತಪಾಸಣೆ ಈ ಎಲ್ಲವು ಸೇರಿ 6 ಗಂಟೆಗಳಿಗೂ ಹೆಚ್ಚು ಸಮಯ ಬೇಕು. ಜನಕಪುರಿ ಸೀತೆ ಹುಟ್ಟಿದ ಜಾಗ. ಇಲ್ಲಿ ಸೀತೆ ಬಾಲ್ಯದಿಂದ ಮದುವೆಯಾಗುವ ತನಕ ಈ ಪ್ರದೇಶದಲ್ಲಿ ವಾಸಮಾಡಿದ್ದಾಳೆ. ಜನಕ ಮಹಾರಾಜ ಯಾಗವನ್ನು ಮಾಡುವುದಕ್ಕೆ ನೆಲವನ್ನು ಉತ್ಖನನ ಮಾಡಿದ ಜಾಗ ಮೊದಲಾದವುಗಳನ್ನು ಇಂದಿಗೂ ಜನಕಪುರಿಯಲ್ಲಿ ನೋಡಬಹುದು. ಇಲ್ಲಿ ಪ್ರಮುಖ ಆಕರ್ಷಣೆಯೆಂದರೆ ಜನಕ ಮಹಲ್ ಅಂದರೆ ಸೀತೆಯ ಅರಮನೆ. ದರ್ಭಾಂಗದಲ್ಲಿ ರಾಮಚಂದ್ರ ಶಿವಧನುಸ್ಸನ್ನು ಭಂಗ ಮಾಡಿದ ಜಾಗವಾದರೆ ಜನಕಪುರಿಯಲ್ಲಿ ಅವಳ ಸ್ವಯಂವರ, ಮದುವೆ ಹಾಗೂ ದಂಪತಿಗಳು ಕಳೆದ ಮೊದಲ ರಾತ್ರಿಯ ಘಟನೆಗಳಿಗೆ ಸಾಕ್ಷಿಯಾದ ಜಾಗಗಳು. ಸ್ವಯಂವರ ನಡೆದ ಜಾಗದ ವಿಸ್ತೀರ್ಣ ಬಹಳ ವಿಸ್ತಾರವಾಗಿರುವುದನ್ನು ಕಂಡರೆ ಸ್ವಯಂವರಕ್ಕೆ ಎಷ್ಟು ರಾಜರು ಬಂದಿದ್ದರು ಎಂದು ನಾವು ಊಹಿಸಿಕೊಳ್ಳಬಹುದು.

–ವಿ. ನಾಗೇಂದ್ರ ಪ್ರಸಾದ್
98454 00816







**ಜನಕರಾಜನ ಕುಲದೇವತಾ ಮಂದಿರ :**

ಜನಕರಾಜ ತನ್ನ ಕುಲದೇವತೆಯನ್ನು ಆರಾಧನೆ ಮಾಡಿ ಸೀತೆಯನ್ನು ಪಡೆದ ಎಂಬುದಕ್ಕೆ ಈ ಮಂದಿರ ದ್ಯೋತಕ. ಈ ಮಂದಿರ ಜನಕಮಹಲ್ ಸುತ್ತಮುತ್ತಲಲ್ಲೇ ಇದೆ.

**ರಾಮ್ ಕುಲದೇವತಾ ಮಂದಿರ :**

ರಾಮಚಂದ್ರ ಜನಕಪುರಿಗೆ ಸ್ವಯಂವರಕ್ಕೆಂದು ಬಂದಾಗ ತನ್ನ ಕುಲದೇವತೆಯನ್ನು ಪೂಜೆ ಮಾಡಿದ ಎಂದು ಸ್ಥಳೀಯರು ಹೇಳುತ್ತಾರೆ. ಹಾಗಾಗಿ ಇದಕ್ಕೆ ರಾಮ್ ಕುಲ ದೇವತಾ ಮಂದಿರ್ ಎಂದು ಕರೆಯುತ್ತಾರೆ.

**ಸುಹಾಗ್ ರಾತ್ ಮಂದಿರ :**

ರಾಮಚಂದ್ರ ಹಾಗೂ ಸೀತಾದೇವಿ ಮದುವೆಯಾದ ಮೊದಲರಾತ್ರಿ ಕಳೆದ ಮಂದಿರ ಎಂದು ಸ್ಥಳೀಯರು ಹೇಳು ತ್ತಾರೆ.

**ಶೀಶ್ ಮಹಲ್ :**

ಇಲ್ಲಿ ರಾಮ ಹಾಗೂ ಸೀತೆಯ ವಿಗ್ರಹಗಳಿಗೆ ಎಡಬಲ ಗಳಲ್ಲಿ ಎರಡು ಬೃಹತ್ತಾದ ಕನ್ನಡಿಗಳಿವೆ. ಅದರಲ್ಲಿ ಪ್ರತಿಬಿಂಬ ಗಳು ಬಹಳ ಸುಂದರವಾಗಿ ಕಾಣುತ್ತವೆ.

**ರಾಮಮಂದಿರ :**

ಇದು ಸೀತೆಯನ್ನು ತವರು ಮನೆಯಿಂದ ಬೀಳ್ಕೊಟ್ಟ ಜಾಗ, ಅದರ ಸ್ಮಾರಕಾರ್ಥವಾಗಿ ಒಂದು ಮಂದಿರವನ್ನು ನಿರ್ಮಾಣ ಮಾಡಿದ್ದಾರೆ. ಮಂದಿರದಲ್ಲಿ ರಾಮಚಂದ್ರನ ವಿಗ್ರಹ ವಿದೆ. ಅಯೋಧ್ಯೆಯಲ್ಲಿ ರಾಮಲಲ್ಲಾನ ಪ್ರತಿಷ್ಠಾಪನೆ ಆದಾಗ ಜನಕಪುರಿಯಿಂದ ಅಂದರೆ ಸೀತೆಯೇ ತೌರುಮನೆಯಿಂದ ಸುಮಾರು 100 ಲಾರಿಗಳಲ್ಲಿ ರಾಮಚಂದ್ರನಿಗೆ ವಿವಿಧ ಉಡು ಗೊರೆಗಳನ್ನು ಕಳುಹಿಸಲಾಯಿತು. ಅವೆಲ್ಲವೂ ಈ ಮಂದಿರ ದಿಂದಲೇ ಹೊರಟವು ಎಂದು ಸ್ಥಳೀಯರು ಹೇಳುತ್ತಾರೆ.

**ರಾಮಸೀತಾ ಲಗ್ನಮಂಟಪ :**

ಇದು ಸೀತಾಮಹಲ್‌ನ ಹಿಂದಿರುವ ಭಾಗದಲ್ಲಿದೆ. ಇಲ್ಲಿ ರಾಮಸೀತೆಯರು ಮದುವೆಯಾದ ಜಾಗ ಇದರ ಕುರುಹಾಗಿ ಬೃಹತ್ತಾದ ಮಂದಿರವನ್ನು ನಿರ್ಮಾಣ ಮಾಡಿದ್ದಾರೆ. ಈ ಮಂದಿರದ ಮುಂದೆ ದೊಡ್ಡದಾದ ಸರೋವರವಿದೆ. ಇದರ ಹೆಸರು **"ಗಂಗಾಸಾಗರ ಕುಂಡ"** ಎಂದು. ರಾಮಚಂದ್ರ ಶಿವ ಧನಸ್ಸನ್ನು ಭಂಗ ಮಾಡಿದಾಗ ಒಂದು ಭಾಗ ಇಲ್ಲಿ ಬಿತ್ತು ಎಂದು ನಂಬಲಾಗಿದೆ. ಇನ್ನೊಂದು ಭಾಗ ಇಲ್ಲಿಂದ 22ಕಿ.ಮೀ. ದೂರದಲ್ಲಿರುವ **"ಧನುಷ್ಕುಂಡ"** ಎಂಬ ಜಾಗದಲ್ಲಿ ಬಿತ್ತು. ಮೂರನೇ ಭಾಗ ಭಾರತದಲ್ಲಿರುವ ರಾಮೇಶ್ವರದಲ್ಲಿ ಬಿದ್ದಿದೆ ಎಂದು ಸ್ಥಳೀಯರ ಅಭಿಪ್ರಾಯ. ಸೀತಾಕುಂಡ ಇಲ್ಲಿಂದ 8 ಕಿ.ಮೀ. ದೂರದಲ್ಲಿದೆ.

**ಪ್ರಾಚೀನ ಸಂಕಟಮೋಚನ ಹನುಮಾನ್ ಮಂದಿರ:**

ಸ್ವಯಂವರ ನಡೆದ ಜಾಗ ಎನ್ನಲಾದ ಜಾಗದ ಹತ್ತಿರ ದಲ್ಲೇ ಪ್ರಾಣದೇವರ ಗುಡಿಯಿದೆ. ಜನಕಪುರಿಯ ವಿಶೇಷ ವೆಂದರೆ ಪ್ರತಿಯೊಂದು ಮಂದಿರದ ಮುಂದೆ ಒಂದು ಸರೋ ವರವಿದೆ.

**ಕಠ್ಮಂಡು:**

ಜನಕಪುರಿಯಿಂದ ಕಠ್ಮಂಡು 223 ಕಿ.ಮೀ. ದೂರ ದಲ್ಲಿದೆ. ಜನಕಪುರಿ ಹಿಮಾಲಯದ ಕೆಳಗಿನ ಪ್ರದೇಶವಾದರೆ, ಕಠ್ಮಂಡು ಹಿಮಾಲಯದ ಬೆಟ್ಟದ ಪ್ರದೇಶದಲ್ಲಿದೆ, ಹಾಗಾಗಿ ಮಾರ್ಗ ಬಹಳ ಕಠಿಣ 10 ರಿಂದ 12 ಗಂಟೆಗಳ ಬಸ್ ಅಥವಾ ಜೀಪ್ ಪ್ರಯಾಣ ಅನಿವಾರ್ಯ ಬಹಳ ಕಿರಿದಾದ ಮಾರ್ಗ ದಲ್ಲಿ ಹೋಗಬೇಕಾಗಿರುವುದು ಚಾಲಕರಿಗೆ ಒಂದು ದೊಡ್ಡ ಸವಾಲಾಗಿದೆ. ಮಾರ್ಗವನ್ನು ದೊಡ್ಡದು ಮಾಡುತ್ತಿದ್ದಾರೆ, ಹಾಗಾಗಿ ಕೇವಲ ಕಲ್ಲುಗಳ ಮೇಲೆ ಬಸ್ಸು ಹೋಗಬೇಕು. ನೇಪಾಳದ ರಾಜಧಾನಿ ಕಠ್ಮಂಡು. ಇದು ಸಮುದ್ರ ಮಟ್ಟ ದಿಂದ 3265 ಮೀಟರ್ ಅಥವಾ 10712 ಅಡಿಗಳಷ್ಟು ಇದೆ.

**ಪಶುಪತಿನಾಥ್ ಮಂದಿರ್ :**

ಕಠ್ಮಂಡುವಿನ ಪ್ರಧಾನ ಆಕರ್ಷಣೆ. ಮಂದಿರ ಬಹಳ ವಿಶಾಲವಾಗಿದೆ. ಈ ಮಂದಿರಕ್ಕೆ ನಾಲ್ಕು ಪ್ರಧಾನವಾದ ಬಾಗಿಲುಗಳಿವೆ. ಬೆಳಗ್ಗೆ 5 ಗಂಟೆಗೆ ಒಂದು ದ್ವಾರವನ್ನು ತೆರೆಯುತ್ತಾರೆ. ಬೆಳಗ್ಗೆ 10 ಗಂಟೆಗೆ ಮತ್ತೊಂದು ದ್ವಾರವನ್ನು ತೆರೆಯುತ್ತಾರೆ. ಮಧ್ಯಾಹ್ನ 2 ರಿಂದ ಸಂಜೆ 5 ರವರೆಗೆ ದರ್ಶನಕ್ಕೆ ಅವಕಾಶವಿರುವುದಿಲ್ಲ. ಸಂಜೆ 6.30 ಗಂಟೆಗೆ ರುದ್ರ ದೇವರಿಗೆ ಆರತಿ ಆದಾಗ ನಾಲ್ಕುದ್ವಾರದ ಬಾಗಿಲುಗಳು ತೆರೆದಿರುತ್ತವೆ. ಬೆಳಗಿನ ರುದ್ರದೇವರ ದರ್ಶನ ವಿಶ್ವರೂಪ ದರ್ಶನವಾದರೆ. ಸಂಜೆಯ ದರ್ಶನ ಅಲಂಕೃತ ರುದ್ರದೇವರ ದರ್ಶನವಾಗಿರುತ್ತದೆ. ಇದು ರುದ್ರನ ಕ್ಷೇತ್ರವಾದರೂ, ಏಕಾದಶ ರುದ್ರರ ಕ್ಷೇತ್ರದಲ್ಲಿ ಪ್ರತ್ಯೇಕವಾಗಿ ಬರುವುದಿಲ್ಲ. ಹಿಂತು ಕೇದಾರದಲ್ಲಿರುವ ರುದ್ರದೇವರ ಒಂದು ಭಾಗ. ಕೇದಾರದಲ್ಲಿರುವ ಲಿಂಗ ರುದ್ರದೇವರ ದೇಹದ ಭಾಗವಾದರೆ, ರುದ್ರದೇವರ ಶಿರೋಭಾಗ ಕಠ್ಮಂಡುವಿನಲ್ಲಿರುವ ಪಶುಪತಿನಾಥ ಎಂದು ಹೇಳಲಾಗುತ್ತದೆ. ಪಶುಪತಿನಾಥನ ಲಿಂಗವು ಕಂಬದ ಆಕಾರದಲ್ಲಿದ್ದು ಶಿವನ ಪಂಚಮುಖಗಳಿಂದ ಕೂಡಿದೆ. ನಾಲ್ಕು ದಿಕ್ಕುಗಳಲ್ಲಿಯ ಶಿವನ ಮುಖ ಸ್ಪುಟವಾಗಿ ಕಂಡರೂ ಮೇಲ್ಭಾಗದಲ್ಲಿರುವ ಮುಖ ಸ್ಪುಟವಾಗಿ ಕಾಣುವುದಿಲ್ಲ. ಪೋಖರಾದಲ್ಲಿ ಬಿಂಧು ಭಾಸಿನಿ ಮಂದಿರದಲ್ಲಿ ಪಶುಪತಿನಾಥನ ಮಂದಿರವಿದೆ. ಅಲ್ಲಿ ಇದೇ ರೀತಿಯಾದ ಲಿಂಗವನ್ನು ಚೆನ್ನಾಗಿ ಕಾಣಬಹುದು.



**ಸ್ಥಳಪುರಾಣ :**

ಇಲ್ಲಿಯ ಅರ್ಚಕ ವರ್ಗ ಇಲ್ಲಿ ಸ್ಥಳಪುರಾಣವನ್ನು ನಿರೂಪಿಸಿಲು ಭಾಗವತದಲ್ಲಿ ಬರುವ ದಕ್ಷಯಜ್ಞದ ಪ್ರಸಂಗದ ಕಥೆಯನ್ನು ಆದರಿಸಿ ಒಂದು ಭಾಗವನ್ನು ಹೇಳುತ್ತಾರೆ. ಭಾಗವತದ ನಾಲ್ಕನೆ ಸ್ಕಂದದಲ್ಲಿ ದಕ್ಷಯಜ್ಞದ ಪ್ರಕರಣವಿದೆ. ದಕ್ಷ ಪ್ರಜಾಪತಿ ಯಜ್ಞವನ್ನು ಹಮ್ಮಿಕೊಂಡಿರುತ್ತಾರೆ. ಆ ಯಜ್ಞಕ್ಕೆ ಶಿವನಿಗೆ ಆಮಂತ್ರಣ ಇಲ್ಲದ್ದರಿಂದ ಶಿವ ಬಂದಿರುವುದಿಲ್ಲ ಸತಿಯೊಬ್ಬಳೇ ಬಂದಿರುತ್ತಾರೆ. ಯಜ್ಞ ಕಾಲಕ್ಕೆ ಹವಿಸ್ಸು ನೀಡುವ ವೇಳೆಯಲ್ಲಿ ದಕ್ಷಪ್ರಜಾಪತಿ ಶಿವನಿಗೆ ಹವಿಸ್ಸು ಅರ್ಪಿಸುವ ಪ್ರಸಂಗದಲ್ಲಿ ಅವನಿಗೆ ಹವಿಸ್ಸು ಕೊಡುವುದಿಲ್ಲ. ಸತೀದೇವಿ ಇದನ್ನು ಮನಗಂಡು ತನ್ನ ಗಂಡನಿಗೆ ಆದ ಅವಮಾನವನ್ನು ಸಹಿಸದೆ ದೇಹ ತ್ಯಾಗ ಮಾಡುತ್ತಾರೆ. ಇದರಿಂದ ಕುಪಿತನಾದ ಶಿವ ಯಜ್ಞವನ್ನು ಧ್ವಂಸಮಾಡಲಿಕ್ಕೆ ವೀರಭದ್ರನಿಗೆ ಸೂಚನೆ ನೀಡುತ್ತಾರೆ. ಶಿವ ತನ್ನ ಪತ್ನಿಯ ಮೃತ ಶರೀರವನ್ನು ಹೆಗಲಿಗೆ ಹಾಕಿಕೊಂಡು ಎಲ್ಲ ಕಡೆ ಸುತ್ತುತ್ತಾನೆ. ವಿಷ್ಣು ತನ್ನ ಸುದರ್ಶನ ಚಕ್ರದಿಂದ ಸತಿಯ ಶರೀರವನ್ನು ತುಂಡು ಮಾಡುತ್ತಾ ಹೋಗುತ್ತಾನೆ.ಶಿವ ನಡೆದುಕೊಂಡು ಹೋಗುತ್ತಿದ್ದಾಗ ಸತಿಯ ದೇಹದ ಒಂದೊಂದೇ ಭಾಗ ಬೀಳುತ್ತಾ ಹೋಗುತ್ತದೆ. ಎಲ್ಲಿ ಭಾಗಗಳು ಬಿದ್ದಿದೆಯೋ ಅದು 'ಶಕ್ತಿಪೀಠ' ಎನಿಸಿತು. ಕಠ್ಮಂಡು ವಿನಲ್ಲಿ "ಗುಹ್ಯೇಶ್ವರಿ" ಎಂಬ ಶಕ್ತಿ ಪೀಠವಿದೆ. ಶಿವ ಕೈಲಾಸಕ್ಕೆ ತೆರಳಿ ತಪಸ್ಸಿಗೆ ಕುಳಿತ ಹಿಮವಂತನ ಪುತ್ರಿಯಾಗಿ ಮತ್ತೆ ಪಾರ್ವತಿ, ಉಮಾ ಎಂಬ ರೂಪದಿಂದ ಜನಿಸಿದಳು. ಈಗಿರುವ ಪಶುಪತಿನಾಥನ ಮಂದಿರದ ಹಿಂದೆ "ಭಾಗಮತಿ" ನದಿ ಹರಿಯುತ್ತಿದೆ.

ಹಿಮವಂತನ (ಹಿಮಾಲಯಪರ್ವತ) ಮಗಳಾದ ಉಮಾ ಅಲ್ಲಿಗೆ ಬಂದು ಮರಳಿನಲ್ಲಿ ಶಿವಲಿಂಗವನ್ನು ಮಾಡಿ ಶಿವನೇ ನನ್ನ ಪತಿಯಾಗಬೇಕೆಂದು ತಪಸ್ಸು ಮಾಡಿದಳು. ಉಮಾಳ ತಪಸ್ಸಿಗೆ ಮೆಚ್ಚಿದ ಶಿವ ಅಲ್ಲಿಗೆ ಬಂದು ಅವಳನ್ನು ಮದುವೆಯಾಗಿ ಮತ್ತೆ ಕೈಲಾಸಕ್ಕೆ ತೆರಳಿದನು. ಉಮಾ ತಾನು ಪೂಜೆ ಮಾಡುತ್ತಿದ್ದ ಮರಳಿನ ಶಿವ ಲಿಂಗಕ್ಕೆ ಜೀವ ನೀಡುವಂತೆ ಪ್ರಾರ್ಥಿಸಿದಳು. 'ಇದು ಕೃತಯುಗವಾದ ಕಾರಣ ನಿನ್ನ ಬಯಕೆಯನ್ನು ಪೂರೈಸಲು ಸಾಧ್ಯವಿಲ್ಲ, ನಿನ್ನ ಬಯಕೆಯನ್ನು ದ್ವಾಪರದಲ್ಲಿ ನೆರವೇರಿಸುತ್ತೇನೆಂದನು' ದ್ವಾಪರಯುಗದಲ್ಲಿ ನಡೆದ ಮಹಾಭಾರತದ ಯುದ್ಧದಲ್ಲಿ ಪಾಂಡವರಿಗೆ ಜಯವಾಯಿತು ಆದರೆ ಪಾಂಡವರಿಗೆ ಗುರು ಹತ್ಯಾದೋಷ ಬಂದಿತು. ಯುಧಿಷ್ಠಿರ ಕೃಷ್ಣನಲ್ಲಿ ಪರಿಹಾರವನ್ನು ಕೇಳಿದನು. ಕೃಷ್ಣ ಶಿವನಲ್ಲಿ ಶರಣಾಗು ಎಂದನು. ಪಾಂಡವರು ಶಿವನನ್ನು ಅರಸುತ್ತಾ ಕೈಲಾಸಕ್ಕೆ ಬಂದರು.

ದಾರಿಯಲ್ಲಿ ಪಾಂಡವರಿಗೆ ನಂದಿಯು ದರ್ಶನ ಕೊಟ್ಟನು, ಶಿವನೂ ನಂದಿಯ ವೇಷದಲ್ಲಿ ಓಡಾಡುತ್ತಿದ್ದನು, ಯುಧಿಷ್ಠಿರನಿಗೆ ನಂದಿಯ ವೇಷದಲ್ಲಿ ಶಿವನನ್ನು ಗುರುತಿಸಲು ಸಾಧ್ಯವಾಗಲಿಲ್ಲ. ಶಿವನನ್ನು ಗುರುತಿಸುವ ಸಲುವಾಗಿ ಯುಧಿಷ್ಠಿರನು ಭೀಮಸೇನನಿಗೆ ತನ್ನ ಕಾಲನ್ನು ಅಗಲಿಸಲು ಹೇಳಿ ಎಲ್ಲಾ ನಂದಿಗಳನ್ನು ಅದರ ಕೆಳಗೆ ಹಾದುಹೋಗಲು ಸೂಚಿಸಿದನು. ಎಲ್ಲ ನಂದಿಗಳೂ ಹಾದು ಹೋದರೂ ನಂದಿ ವೇಷದಲ್ಲಿದ್ದ ಶಿವ ಭೀಮಸೇನನ ಕಾಲಿನ ಕೆಳಗೆ ತೂರಲಿಲ್ಲ. ಭೀಮ



ಸೇನ ಆ ನಂದಿಯನ್ನು ಹಿಡಿದು ಬಲವಂತವಾಗಿ ತನ್ನ ಕಾಲಿನ ಮಧ್ಯದಲ್ಲಿ ಪ್ರವೇಶಿಸಲು ಜಗ್ಗಾಡುತ್ತಿದ್ದನು. ಈ ಜಗ್ಗಾಟದಲ್ಲಿ ನಂದಿಯ ದೇಹ ಎರಡು ಭಾಗವಾಯಿತು. ದೇಹದ ಭಾಗ ಭೀಮಸೇನನ ಕೈಲಿದ್ದರೆ, ಶಿರದ ಭಾಗ ಅಲ್ಲಿಂದ ಅದೃಶ್ಯವಾಗಿ ಇಲ್ಲಿ ಬಂದು ಬಿದ್ದಿತು. ಇಲ್ಲಿರುವ ಲಿಂಗ ಪಂಚಮುಖಗಳಿಂದ ಕೂಡಿರುವ ಸುಂದರವಾದ ಲಿಂಗ. ಈ ಲಿಂಗದ ವಿಶೇಷ ವೇನೆಂದರೆ ಲಿಂಗವನ್ನು ಪೂಜೆ ಮಾಡುವ ಅಧಿಕಾರ ಇಲ್ಲಿನ ಅರ್ಚವರ್ಗಕ್ಕೆ ಮಾತ್ರ. ನೇಪಾಳದ ರಾಜನಿಗೂ ಲಿಂಗವನ್ನು ಮುಟ್ಟುವ ಅಧಿಕಾರವಿಲ್ಲ. ರಾಜನಿಗೇ ಅಧಿಕಾರವಿಲ್ಲ ಎಂದ ಮೇಲೆ ಬೇರೆ ಯಾರೂ ಲಿಂಗವನ್ನು ಮುಟ್ಟಲಾರರು ಎಂದೇ ಅರ್ಥ. ಪಶುಪತಿನಾಥನ ಮಂದಿರ ಪಕ್ಕದಲ್ಲೇ ಭಾಗಮತಿ ಎಂಬ ನದಿ ಹರಿಯುತ್ತಿದೆ.

ಇಲ್ಲಿ ಪ್ರಮುಖವಾದ ಸೇವೆ ರುದ್ರಾಭಿಷೇಕ, ಸೇವಾರ್ಥಿ ಗಳನ್ನು ದೇವಾಲಯದ ಮುಂದಿರುವ ಜಾಗದಲ್ಲಿ ಕೂಡಿಸಿ ಬಹಳ ಸುಂದರವಾಗಿ ಸಂಕಲ್ಪವನ್ನು ಮಾಡಿಸಿ ರುದ್ರ ಚಮಕ ಗಳನ್ನು ಹೇಳುತ್ತಾರೆ. ನಂತರ ದರ್ಶನಕ್ಕೆ ಕರೆದೊಯ್ಯುತ್ತಾರೆ. ನೇರವಾಗಿ ಅಭಿಷೇಕವನ್ನು ನೋಡಲು ಅವಕಾಶವಿರುವು ದಿಲ್ಲ. ಪ್ರಸಾದವಾಗಿ ರುದ್ರಾಕ್ಷಿ ಸರವನ್ನು ನೀಡುತ್ತಾರೆ.

**ನಾರಾಯಣ್‌ಹಿತಿ ಪ್ಯಾಲೇಸ್ :**

ಮೂಲತಃ ಇದು ರಾಜಮನೆತನದ ಅರಮನೆ, ಇಲ್ಲಿ ಜ್ಞಾನೇಂದ್ರ ಎಂಬುವರು ರಾಜನಾಗಿದ್ದಾಗ ಇದ್ದಂತಹ ಅರ ಮನೆ, ಈಗ ಅದನ್ನು ಮ್ಯೂಜಿಯಂ ಆಗಿ ಪರಿವರ್ತಿಸಿದ್ದಾರೆ. 2006 ರಲ್ಲಿ ನಡೆದ ಕ್ರಾಂತಿಯಲ್ಲಿ ರಾಜ ಜ್ಞಾನೇಂದ್ರ ಈ ಅರಮನೆಯನ್ನು ತೊರೆದ ಎನ್ನಲಾಗಿದೆ. ನಾರಾಯಣ್ + ಹಿತಿ ಎಂಬುದು ಎರಡು ಶಬ್ದಗಳು ನಾರಾಯಣ ಹಿತಿ ನಾರಾಯಣ ಎಂದರೆ ಭಗವಾನ್ ನಾರಾಯಣ ಹಿತಿ ಎಂದರೆ ನೀರಿನ ಚಿಲುಮೆ. ಈ ಅರಮನೆಯ ಮುಂದೆ ನಾರಾಯಣನ ಮಂದಿರ ವಿದೆ ಅದರ ಮುಂದೆ ನೀರಿನ ಚಿಲುಮೆ ಇದ್ದಿರಬಹುದು ಈಗಿಲ್ಲ.

**ಇಸ್ಕಾನ್ ಕೃಷ್ಣಮಂದಿರ :**

ಬೆಟ್ಟದ ಮೇಲೆ ಸುಂದರವಾದ ರಾಧಾಕೃಷ್ಣನ ವಿಗ್ರಹ ಗಳನ್ನೊಳಗೊಂಡ ವಿಶಾಲದವಾದ ಭವನವಿದೆ. ಇಲ್ಲಿ ಯಾವಾ ಗಲೂ ಇಸ್ಕಾನ ಪಂಥದವರು ಕೃಷ್ಣ ಭಜನೆ ಮಾಡುತ್ತಿರು ತ್ತಾರೆ. ಮಂದಿರಕ್ಕೆ ಹೋಗುವ ಮೊದಲು ಬಾಲಕೃಷ್ಣ ಕಾಳಿಂಗ ಮರ್ಧನ ಮಾಡಿದ ಸುಂದರವಾದ ಕಲಾಕೃತಿ ಇದೆ. ಮಂದಿ ರದ ಒಳಗೆ ಸಂಕಟಮೋಚನ ಪ್ರಾಣದೇವರ ಅಮೃತ ಶಿಲೆಯ ವಿಗ್ರಹವಿದೆ.



**ಜಲನಾರಾಯಣ :**


ಇಲ್ಲಿ ನಾರಾಯಣ ಶಂಖ, ಚಕ್ರ, ಗದಾಪದ್ಮಾಯುತ ನಾಗಿ ಶೇಷನ ಮೇಲೆ ಸಣ್ಣ ಸರೋವರದ ಮಧ್ಯದಲ್ಲಿ ಪವಡಿಸಿ ದ್ದಾನೆ. ಸುಂದರವಾದ ನಾರಾಯಣನ ಮೂರ್ತಿ. ಈ ವಿಗ್ರಹ ವನ್ನು ಸುಮಾರು 17 ನೇ ಶತಮಾನದಲ್ಲಿ ಸ್ಥಾಪಿಸಲಾಗಿದೆ ಎನ್ನಲಾಗಿದೆ. ಇಲ್ಲಿ ಶೇಷ ಸಿಂಬಿಯಾಗಿ ಸುತ್ತಿಕೊಂಡಿಲ್ಲ. ಬದಲು ನಾರಾಯಣನ ಎಡಬಲಗಳಲ್ಲಿ ಹರಡಿಕೊಂಡಿದ್ದಾನೆ. ಅನಂತಶಯನ, ಶ್ರೀರಂಗ, ಶ್ರೀರಂಗಪಟ್ಟಣ ಹಾಗೂ ಮಧ್ಯ ರಂಗದಲ್ಲಿರುವ ಶ್ರೀರಂಗನಾಥನನ್ನೇ ಹೋಲುತ್ತದೆ.

**ಶಕ್ತಿಪೀಠ :**

ಇದು ಭಾಗಮತಿ ನದಿಯ ದಡದಲ್ಲಿ ಇದೆ. ಇಲ್ಲಿ ಸತಿಯ ಪೃಷ್ಠಭಾಗ ಬಿದ್ದಿದೆ ಎಂದು ನಂಬುತ್ತಾರೆ. ಎಲ್ಲೆಲ್ಲಿ ಸತಿಯ ದೇಹದ ಅವಯವಗಳು ಬಿದ್ದಿದೆಯೋ ಅವೆಲ್ಲವೂ ಶಕ್ತಿ ಪೀಠ ಎಂದು ನಂಬುತ್ತಾರೆ, ಪಾರ್ವತಿಯ ಮಂದಿರವಿದೆ.

ಇದಲ್ಲದೆ ಕಠ್ಮಂಡುವಿನ ಪ್ರಮುಖ ಆಕರ್ಷಣೆ ಎಂದರೆ ವಿಮಾನದಲ್ಲಿ ಹಿಮಾಚ್ಛದಿತ ಹಿಮಾಲಯ ಪರ್ವತ ಶ್ರೇಣಿಗಳ ದರ್ಶನ, ಸುಮಾರು ಒಂದು ಗಂಟೆಗಳ ಕಾಲ ವಿಮಾನ ಮೌಂಟ್ ಅನ್ನಪೂರ್ಣ, ಮೌಂಟ್‌ಕೈಲಾಶ್, ಮೌಂಟ್ ಎವೆ ರೆಸ್ಟ್ ಮುಂತಾದ ಶಿಖರಗಳನ್ನು ದರ್ಶನ ಮಾಡಿಸುತ್ತಾರೆ. ಹವಾಮಾನ ವೈಪರೀತ್ಯ ವಿದ್ದಾಗ ವಿಮಾನ ಹಾರಾಡುವುದಿಲ್ಲ.

**- ಮುಂದುವರೆಯುತ್ತದೆ.**



# ವರಾಂಗಿ

-ಡಾ॥ ವಾಣಿಶ್ರೀ ಬಿ. ಎಂ
94803 22475

ಮಹಾಭಾರತ ಧರ್ಮದ ಶ್ರೇಷ್ಠತೆಯನ್ನು ಎತ್ತಿ ಹಿಡಿಯುವ ಕೃತಿ. ದುಷ್ಟಶಿಕ್ಷಣ ಶಿಷ್ಟರಕ್ಷಣಕ್ಕಾಗಿ ಸಂಭವಾಮಿ ಯುಗೇ ಯುಗೇ ಎಂದು ಭಗವಂತನು ಧರ್ಮನಿಷ್ಠರಿಗೆ ಅಭಯ ನೀಡಿದ ಮಹತ್ಕೃತಿ. ಧರ್ಮಿಷ್ಠರಿಗೆ ಉಂಟಾಗುವ ಉನ್ನತಿ, ಅಧರ್ಮಿಗಳ ನಿಗ್ರಹ ಮೊದಲಾದ ವಿಚಾರಗಳನ್ನು ಇದರಲ್ಲಿ ಕಾಣಬಹುದು. ಪಾಂಡವರ ಧರ್ಮ ಅವರನ್ನು ಕೃಷ್ಣನಿಗೆ ಹತ್ತಿರವಾಗಿಸಿ ಜಯಶಾಲಿಗಳನ್ನಾಗಿಸಿತು. ದುರ್ಯೋಧನಾದಿಗಳ ಅಧರ್ಮಕುಲಕ್ಷಯಕ್ಕೆ ಕಾರಣವಾಯಿತು.

ಪಂಚಮವೇದವೆನಿಸಿದ ಮಹಾಭಾರತದ ಮಹಾಪುರುಷರಲ್ಲಿ ಭೀಷ್ಮರು ಮಹಾನ್ ಧರ್ಮ ಸಾಧಕರು. ತಂದೆಗಾಗಿ ಸ್ವಂತ ಸುಖವನ್ನು, ರಾಜ್ಯವನ್ನು ತ್ಯಾಗ ಮಾಡಿದರು.

ತಮ್ಮಂದಿರಿಗಾಗಿ ರಾಜ್ಯದ ಜವಾಬ್ದಾರಿ ವಹಿಸಿಕೊಂಡರು. ಅಧಿಕಾರ, ಭೋಗ ಬಯಸಲಿಲ್ಲ. ಹಸ್ತಿನಾಪುರದ ಹಿತಚಿಂತನೆ, ತಾಯಿ ಸೇವೆಯೇ ಅವರ ಜೀವನದ ಗುರಿಯಾಗಿತ್ತು. ತ್ಯಾಗಮಯ ಜೀವನ ಸಾಗಿಸಿದ ಇಚ್ಛಾಮರಣಿ ಭೀಷ್ಮರು ನಿಸ್ವಾರ್ಥಜೀವನ, ಅಖಂಡ ಬ್ರಹ್ಮಚರ್ಯ ಸಾಧನೆಗಾಗಿ ತಮ್ಮ ಗುರುಗಳಾದ ಪರಶುರಾಮನನ್ನೇ ಎದುರಿಸಿ ಯುದ್ಧ ಮಾಡಿದವರು.

ಅಜಾತಶತ್ರು ಭೀಷ್ಮರನ್ನು ಅತ್ಯಂತವಾಗಿ ದ್ವೇಷಿಸಿದ್ದು ಮಾತ್ರ ಅವರ ಪೂರ್ವ ಜನ್ಮದ ನಿಯತಪತ್ನಿ ಅಂಬೆ ಮಾತ್ರವೇ.

ಅಂಬೆ ಮಹಾಭಾರತದ ಆದಿಪರ್ವದಲ್ಲಿ ಬರುವ ಒಂದು ಪಾತ್ರ. ಭೀಷ್ಮರು ತಮ್ಮ ತಮ್ಮಂದಿರ ಸಲುವಾಗಿ ಕಾಶಿ ರಾಜ್ಯದ ರಾಜಕುಮಾರಿಯರನ್ನು ಸ್ವಯಂವರಮಂಟಪದಿಂದ ಅಪಹರಿಸುತ್ತಾರೆ. ಎದುರಾದ ರಾಜರನೆಲ್ಲ ನಿಗ್ರಹಿಸಿ ಹಸ್ತಿನಾಪುರಕ್ಕೆ ಕರೆತರುತ್ತಾರೆ. ಆ ರಾಜಕುಮಾರಿಯಲ್ಲಿ ಅಂಬೆಯು ತಾನು ಸಾಲ್ವ ರಾಜರನ್ನು ಮನದಲ್ಲಿ ಪತಿಯಾಗಿ ವರಿಸಿದ್ದು ಅದು ಆತನಿಗೂ ಸಮ್ಮತಿಯಿತ್ತು ಎಂಬ ವಿಚಾರವನ್ನು ತಿಳಿಸುತ್ತಾಳೆ. ಭೀಷ್ಮರು ಇತರ ಹಿರಿಯರೊಡನೆ ಚರ್ಚಿಸಿ ಅವಳನ್ನು ಆದರ ಪೂರ್ವಕವಾಗಿ ಸಾಲ್ವನೆಡೆಗೆ ಕಳುಹಿಸುತ್ತಾರೆ. ತನ್ನ ಬಳಿ ಬಂದ ಅಂಬೆಯನ್ನು ಸಾಲ್ವನು ಭೀಷ್ಮರ ಭಯದಿಂದ ತಿರಸ್ಕರಿಸುತ್ತಾನೆ. ಭೀಷ್ಮರ ಬಳಿ ತಿರುಗಿ ಬಂದ ಅಂಬೆ ಭೀಷ್ಮರನ್ನು ವಿವಾಹವಾಗಲು ಒತ್ತಾಯಿಸುತ್ತಾಳೆ. ಅಖಂಡ ಬ್ರಹ್ಮಚರ್ಯವ್ರತಧಾರಿ ಒಪ್ಪಲಿಲ್ಲ ಮತ್ತೆ ಮತ್ತೆ ಸಾಲ್ವನ ಬಳಿ ಭೀಷ್ಮರು ಬಳಿ ಆರು ವರ್ಷಗಳ ಕಾಲ ಅಲೆದ ಅಂಬೆ ನಿರಾಶಳಾಗಿ ಹಿಮಾಲಯದ ಬಾಹುದಾ ನದಿಯ ತೀರದಲ್ಲಿ 12 ವರ್ಷಗಳ ಕಾಲ ಕಠಿಣ ತಪಸ್ಸು ಮಾಡುತ್ತಾಳೆ. ಅವಳ ತಪಸ್ಸಿನ ತೀವ್ರತೆಗೆ ದೇವತೆಗಳೆಲ್ಲ ನಡುಗಿದರು. ನಂತರ ಶಿವನು ಪ್ರತ್ಯಕ್ಷನಾಗಿ ಆಕೆಗೆ ಒಂದು ಮಾಲೆಯನ್ನು ನೀಡಿ, ಅದನ್ನು ಧರಿಸುವ ಪುರುಷನಿಂದ ಭೀಷ್ಮನ ಸಂಹಾರವಾಗುವುದಾಗಿ ವರ ನೀಡಿ ಅದೃಶ್ಯನಾದನು.

ಅಂಬೆಮಾಲೆಯನ್ನು ಸ್ವೀಕರಿಸಿ ಭೀಷ್ಮರನ್ನು ಕೊಲ್ಲಬಲ್ಲ ಪರಾಕ್ರಮಿಗಾಗಿ ಹುಡುಕುತ್ತಾ ಹಲವಾರು ಕ್ಷತ್ರಿಯರಲ್ಲಿ ಅಲೆಯುತ್ತಾಳೆ. ಭೀಷ್ಮರ ವಿರೋಧ ಕಟ್ಟಿಕೊಳ್ಳಲು ಬಯಸದೆ ಯಾವ ರಾಜರೂ ಸಮ್ಮತಿಸಲಿಲ್ಲ. ಕೊನೆಗೆ ಯಜ್ಞದೇವನ (ದ್ರುಪದ)ಬಳಿ ಬಂದು ಅವನ ರಾಜದ್ವಾರದಲ್ಲಿ ಇಟ್ಟು ಹೊರಟು ಹೋಗುತ್ತಾಳೆ. ಅಂಬೆ ಸುಮ್ಮನಾಗದೆ ಪರಶುರಾಮನನ್ನು ಪ್ರಚೋದಿಸಿ ಭೀಷ್ಮರೊಡನೆ ಯುದ್ಧ ಮಾಡಿಸುತ್ತಾಳೆ. ತನ್ನ ದುಃಸ್ಥಿತಿಗೆ ಭೀಷ್ಮರೇ ಕಾರಣ ಎಂದು ಅವಳ ನಂಬಿಕೆ.

ಅವರ ಅವಸಾನವೇ ಅವಳ ಜೀವನದ ಗುರಿಯಾಗಿತ್ತು, ಮತ್ತೆ ಘೋರ ತಪಸ್ಸು ಮಾಡಿ ಶಿವನಿಂದ ವರ ಪಡೆದು, ಚಿತೆ ಸಿದ್ಧಮಾಡಿ ಅಗ್ನಿಪ್ರವೇಶ ಮಾಡಿ ದೇಹತ್ಯಾಗ ಮಾಡುತ್ತಾಳೆ, ನಂತರ ಶಿಖಂಡಿಯಾಗಿ ಜನಿಸುತ್ತಾಳೆ.

ಭೀಷ್ಮರು ಹೇಳಿದ ಈ ಕಥೆಯು ಉದ್ಯೋಗ ಪರ್ವದಲ್ಲಿಯೂ ಬರುತ್ತದೆ.

ಅಂಬೆ ಪೂರ್ವಜನ್ಮದಲ್ಲಿ ದ್ಯುನಾಮಕ ವಸುವಿನ ಪತ್ನಿ ವರಾಂಗಿ. ದೇವಲೋಕದಲ್ಲಿದ್ದ ವಸಿಷ್ಠರ ನಂದಿನೀ ಧೇನುವನ್ನು ಅಪಹರಿಸಿ ತರಲು ಪತಿಯನ್ನು ಪ್ರಚೋದಿಸುತ್ತಾಳೆ. ದ್ಯು ಇತರ ಏಳು ವಸುಗಳೊಡನೆ ಧೇನುವನ್ನು ಬಂಧಿಸುತ್ತಾನೆ.

ಇದರಿಂದ ಕ್ರುದ್ಧರಾದ ವಸಿಷ್ಠರ ಅಂತರ್ಯಾಮಿ ಬ್ರಹ್ಮದೇವರು ಭೂಲೋಕದಲ್ಲಿ ಹುಟ್ಟಲು ಶಪಿಸುತ್ತಾರೆ. ಗಂಗೆ ಮತ್ತು ಶಂತನುವಿನಲ್ಲಿ ಜನಿಸಿದ ವಸುಗಳು ಜನಿಸಿದ ತಕ್ಷಣವೇ ಗಂಗೆಯಿಂದಲೇ ಕೊಲ್ಲಲ್ಪಡುತ್ತಾರೆ. ದ್ಯು ಮಾತ್ರ ದೀರ್ಘಕಾಲ ಭೂಮಿಯಲ್ಲಿ ಉಳಿಯ ಬೇಕಾಗುತ್ತದೆ.

ವರಾಂಗಿಯ ಪ್ರೇರಣೆಯು ಅಧರ್ಮವಾಗಿದ್ದು ನಿಯತಪತಿಯ ವಿಯೋಗ, ವಿವಾದ ಮತ್ತು ದ್ವೇಷಗಳಿಗೆ ಕಾರಣವಾಯಿತು. ಕೊನೆಗೆ ಆತನ ಮರಣಕ್ಕೆ ಕಾರಣವಾಗುವ ಮಟ್ಟಕ್ಕೆ ಬೆಳೆಯಿತು. ದೇವತೆಗಳು ಭಗವಂತನೊಡನೆ ಆತನ ಸೇವೆಗಾಗಿ ಅವತರಿಸಿದರೆ, ಈಕೆ ಪತಿದ್ರೋಹಕ್ಕಾಗಿ ಜನಿಸಿದಳು. ನಿಯತಪತಿ ಭೀಷ್ಮರನ್ನು ಬಿಟ್ಟು ಸಾಲ್ವನಿಗೆ ಮನಸೋತದ್ದು ಅಧರ್ಮವೇ.

ಭೀಷ್ಮರು ಅಖಂಡ ಬ್ರಹ್ಮಚರ್ಯವ್ರತದ ಬಗ್ಗೆ ತಿಳಿದಿದ್ದರೂ ಮತ್ತೆ ಮತ್ತೆ ವಿವಾಹವಾಗಲು ಪೀಡಿಸಿ ಸ್ವೋತ್ತಮ ದ್ರೋಹವೆಸಗಿದಳು.

ತಪ್ಪು ತನ್ನದೇ ಆದರೂ ಅದನ್ನು ಭೀಷ್ಮರ ಮೇಲೆ ಹಾಕಿ ಪತಿ ದ್ರೋಹಿಯಾಗಿ ಅವರ ನಾಶಕ್ಕಾಗಿ ತಪಸ್ಸು ಮಾಡಿದ್ದು ಕೂಡಾ ಅಪರಾಧವೇ. ಮೂಲ ರೂಪದಲ್ಲಿ ಗಂಡನ ದಾರಿ ತಪ್ಪಿಸಿ, ಅವತಾರ ರೂಪದಲ್ಲೂ ದ್ವೇಷ ಸಾಧಿಸಿದಳು. ಆದರೂ ಭೀಷ್ಮರು ಅವಳನ್ನು ದ್ವೇಷಿಸಲಿಲ್ಲ, ಬದಲಾಗಿ ಅನುಕಂಪ ತೋರಿಸಿದರು.

ಧರ್ಮಕ್ಕೆ ಚ್ಯುತಿ ತರುವ ಯಾವುದೇ ಆಶೋತ್ತರಗಳನ್ನು ಬಯಸಬಾರದು.

ಅವಿವೇಕದಿಂದ ಯುಕ್ತಾಯುಕ್ತ ವಿವೇಚನೆಯಿಲ್ಲದೆ ಆಚರಿಸುವ ಅಧರ್ಮದ ಫಲದ್ವೇಷಕ್ಕೆ ಕಾರಣವಾಗುತ್ತದೆ. ಸ್ವೋತ್ತಮ ದ್ರೋಹಕ್ಕೆ ಎಡೆಗೊಡುತ್ತದೆ.

ಆದ್ದರಿಂದ ಎಂತಹ ಸನ್ನಿವೇಷದಲ್ಲೂ ಧರ್ಮ ಮಾರ್ಗದಲ್ಲಿ ನಡೆಯಬೇಕೆಂಬುದೇ ಈ ಉಪಾಖ್ಯಾನ ತಿಳಿಸುವ ನೀತಿ.


## STATEMENT ABOUT OWNERSHIP AND OTHER PARTICULARS ABOUT

## SAPTHAGIRI

**(MONTHLY)**

**FORM IV**


*See Rule 8*

1. Place of Publication : TIRUPATI
2. Periodicity of its Publication : Monthly
3. Printer's Name : **Sri P. Ramaraju**, M.A.
   Whether citizen of India : Yes
   Address : S.O.,T.T.D.Press, K.T.Road, Tirupati – 517 507
4. Publisher's Name : **Dr. K. Radha Ramana**, M.A.,M.Phil., Ph.D. P.G. Dip.in Ephigraphy, Dip.in Yoga
   Whether citizen of India : Yes
   Address : Chief Editor Office, T.T.D.Press Building, 2nd floor, K.T.Road, Tirupati - 517 507
5. Editor's Name : **Dr. V.G.Chokkalingam**, M.A., Ph.D.
   Whether citizen of India : Yes
   Address : Chief Editor Office, T.T.D.Press Building, 2nd floor, K.T.Road, Tirupati - 517 507
6. Name and address of individuals who own the News paper and partners or share holders holding more than one percent of the Total Capital } Tirumala Tirupati Devasthanams

*I, K. Radha Ramana, hereby declare that the particulars given above are true to the best of my knowledge and belief.*

TIRUPATI
Date : 28-2-2025

**(Sd.) Dr. K. Radha Ramana**
*Signature of the Publisher*



# ಪಂಚಯಜ್ಞ

– ಡಾ|| ವಿಷ್ಣುದತ್ತ ಪ್ರಭುಜಿ
95907 99995

ಪಂಚ ಎಂದರೆ ಐದು ಮತ್ತು ಯಜ್ಞ ಎಂದರೆ ಭಕ್ತಿಯಿಂದ ಕೂಡಿದ ಪೂಜಾ ವಿಧಾನ. ಇದು ವೈದಿಕ ಕಾಲದಲ್ಲಿ ಪ್ರಚಲಿತವಿದ್ದ ಅರ್ಪಣೆ, ಆಹುತಿಗಳನ್ನೊಳಗೊಂಡ ಯಾಗವಾಗಿದೆ. ಯಜ್ಞದ ನಿಜವಾದ ಅರ್ಥ ತ್ಯಾಗ ಅಥವಾ ಸಮರ್ಪಣೆಯ ಮೂರ್ತ ರೂಪ.

ಎರಡು ವಿಧವಾದ ಯಜ್ಞಗಳಿದ್ದು,ಅದರಲ್ಲೊಂದು ವಿಧವು ಆರಂಭದಿಂದಲೂ ಕೇಳಲ್ಪಡುವುದರ ಮೂಲಕ ಬಂದ ವೇದಗಳಲ್ಲಿ (ಶ್ರುತಿಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ) ಅದು ಪವಿತ್ರ ಜ್ಞಾನವಾಗಿದ್ದು ಅದು ಮೌಖಿಕವಾಗಿ ಪೀಳಿಗೆಯಿಂದ ಪೀಳಿಗೆಗೆ ಹರಿದು ಬಂದಿದೆ. ಋಗ್ವೇದವು ಬಹಳಷ್ಟು ಯಜ್ಞಾಚರಣೆಗಳ ಕುರಿತು ಉಲ್ಲೇಖಿಸಿದರೆ, ಯಜುರ್ವೇದ ಸಂಹಿತೆಯು ಯಜ್ಞ-ಯಾಗಾದಿಗಳ ಸಮಯದಲ್ಲಿ ಪಠಿಸ ಬೇಕಾದ ಮಂತ್ರಗಳನ್ನು ಮತ್ತು ಆ ಮಂತ್ರಗಳನ್ನು ವಿವರಿಸುವ ಬ್ರಾಹ್ಮಣಗಳೆಂದು ಕರೆಯಲ್ಪಡುವ ಗದ್ಯ ಪಂಕ್ತಿಗಳನ್ನು ಒಳಗೊಂಡಿದೆ. ಬ್ರಾಹ್ಮಣದ ಪಂಕ್ತಿಗಳು ವೇದಾಚರಣೆಗಳಲ್ಲಿ ಅನುಸರಿಸಬೇಕಾದ ಮತ್ತು ಸಂರಕ್ಷಿಸಬೇಕಾದ ಸೂಕ್ಷ್ಮವಾದ ವಿಷಯಗಳ ಕುರಿತಾಗಿ ಮಾರ್ಗದರ್ಶನವನ್ನು ಕೊಡುತ್ತವೆ, ಮತ್ತೊಂದು ವಿಧವಾದ ಯಜ್ಞವು ಸ್ಮೃತಿಗಳಲ್ಲಿ ಉಲ್ಲೇಖಿಸಲ್ಪಟ್ಟಿದ್ದು. ಇದರಲ್ಲಿ ಪವಿತ್ರವಾದ ಪರಂಪರೆ ಅಥವಾ ಮಾನವ ಗುರುಗಳು ಶ್ರುತಿ ಅಥವಾ ವೇದಗಳಿಗೆ ಪ್ರತಿಯಾಗಿ ನೆನಪಿನಲ್ಲಿಟ್ಟುಕೊಂಡ ಆಚರಣೆಗಳ ವಿಷಯಗಳಿರುತ್ತವೆ. ಸ್ಮೃತಿಗಳು ಆರು ವೇದಾಂಗಗಳು, ಶ್ರೌತ ಮತ್ತು ಗೃಹ್ಯ ಸೂತ್ರಗಳು, ಮನು ಧರ್ಮಸಂಹಿತೆ ಮೊದಲಾದವುಗಳನ್ನು ಒಳಗೊಂಡಿವೆ.


ವೇದಗಳಲ್ಲಿ ಉಲ್ಲೇಖಿಸಲ್ಪಟ್ಟ ಪಂಚಯಜ್ಞಗಳೆಂದರೆ ಅಗ್ನಿಹೋತ್ರ, ದರ್ಶಪೂರ್ಣಮಾಸ, ಚಾತುರ್ಮಾಸ್ಯ, ಪಶುಬಂಧ ಮತ್ತು ಸೋಮ. ಸೋಮಯಾಗವು ಉಳಿದ ನಾಲ್ಕೂ ಯಜ್ಞಗಳನ್ನೊಳಗೊಂಡಿದ್ದು ಅದು ಪಂಚಯಜ್ಞಗಳಲ್ಲೇ ಶ್ರೇಷ್ಠವೆನಿಸಿದೆ.

ಸ್ಮೃತಿಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಐದು ವಿಧವಾದ ಯಜ್ಞಗಳನ್ನು ಪಂಚಮಹಾಯಜ್ಞಗಳೆಂದು ಕರೆಯುತ್ತಾರೆ. ಅವುಗಳೆಂದರೆ ದೇವಯಜ್ಞ (ದೇವತೆಗಳನ್ನು ತೃಪ್ತಿ ಪಡಿಸುವುದು), ಬ್ರಹ್ಮಯಜ್ಞ (ವೇದಗಳನ್ನು ಕುರಿತು ತಿಳಿದುಕೊಳ್ಳುವುದು), ಪಿತೃಯಜ್ಞ (ಪೂರ್ವಿಕರನ್ನು ತೃಪ್ತಿ ಪಡಿಸುವುದು), ಭೂತಯಜ್ಞ (ಪ್ರಾಣಿ,ಪಕ್ಷಿ ಮೊದಲಾದವುಗಳನ್ನು ತೃಪ್ತಿ ಪಡಿಸುವುದು) ಮತ್ತು ನರ ಅಥವಾ ಅತಿಥಿಯಜ್ಞ. ದೇವಯಜ್ಞ ಎಂದರೆ ಒಬ್ಬನ ಕುಲದೇವತೆಯನ್ನು ಅಥವಾ ಪರಂಪರಾನುಗತವಾಗಿ ಬಂದಿರುವ ದೇವರನ್ನು ಪೂಜಿಸುವುದು. ವೇದಗಳ ಅಧ್ಯಯನವು ಮುಂದಿನದು. ನಮ್ಮ ಪೂರ್ವಿಕರನ್ನು ನೆನೆಯುವುದು ಮೂರನೆಯದು. ಇದನ್ನು ಪೂರ್ವಿಕರಿಗೆ ವಾರ್ಷಿಕ ತಿಥಿಗಳನ್ನು ಆಚರಿಸುವುದರ ಮೂಲಕ ಕೈಗೊಳ್ಳಲಾಗುತ್ತದೆ. ಇದರ ಹಿಂದಿರುವ ಉದ್ದೇಶ ಕೇವಲ ಸ್ಮರಿಸುವುದಷ್ಟೇ ಅಲ್ಲ ಅವರು ಹಾಕಿಕೊಟ್ಟ ಉನ್ನತ ಪಂಕ್ತಿ ಮತ್ತು ಕುಟುಂಬದ ಸತ್ಸಂಪ್ರದಾಯಗಳನ್ನು ಅನುಸರಿಸುವುದನ್ನು ನೆನಪು ಮಾಡಿ ಕೊಳ್ಳುವುದಾಗಿದೆ. ಭೂತಯಜ್ಞ ಎಂದರೆ ಇತರೇ ಜೀವಿಗಳೊಂದಿಗೆ ಹಂಚಿಕೊಳ್ಳುವುದು. ಹಸಿದ ಪ್ರಾಣಿಗಳಿಗೆ ಆಹಾರವನ್ನು ನೀಡುವುದು ವಿಶ್ವಪ್ರೇಮವನ್ನು ಹೆಚ್ಚಿಸುತ್ತದೆ. ಕಡೆಯದನ್ನು ಮಾನುಷ್ಯ ಯಜ್ಞವೆಂದೂ ಕರೆಯಲಾಗುತ್ತದೆ. ಇದು ಸಹ ಮಾನವರಿಗೆ ಸಾಂಪ್ರದಾಯಿಕ ಆದರಾತಿಥ್ಯಗಳನ್ನು ನೀಡುವುದನ್ನು ಒಳಗೊಂಡಿದೆ.

ಉತ್ಪತ್ತಿಗೆ ಕಾರಣವಾದ ರಸಗಳು ಕಾಣಿಸಿಕೊಂಡವು. ಅವರು ಉತ್ಪತ್ತಿಗೆ ಕಾರಣವಾದ ರಸಗಳನ್ನು ಅರ್ಪಿಸಿದರು ಆಗ ಭ್ರೂಣವು ಕಾಣಿಸಿಕೊಂಡಿತು. ಪಾಂಚರಾತ್ರ ಆಗಮಗಳು ವಿಷ್ಣುವನ್ನು ಪೂಜಿಸಲು ಐದು ವಿಧವಾದ ಆಚರಣೆಗಳನ್ನು ವಿಧಿಸುತ್ತವೆ. ಅಭಿಗಮನ (ವಿಷ್ಣುವಿನೆಡೆಗೆ ಸಾಗುವುದು) ಉಪಾದಾನ (ಪೂಜಾ ಸಾಮಾಗ್ರಿಗಳನ್ನು ಸಂಗ್ರಹಿಸುವುದು), ಇಜ್ಯ (ಪೂಜೆ ಅಥವಾ ಅರ್ಚನೆ) ಗದ್ಯರೂಪದ ಸ್ತುತಿ ಮತ್ತು ಸ್ವಾಧ್ಯಾಯ (ವೇದೋಪನಿಷತ್ತು ಮತ್ತು ಶಾಸ್ತ್ರಗಳು, ಸ್ತೋತ್ರ


ಮಂತ್ರ ಮೊದಲಾದುವುಗಳನ್ನು ಅಭ್ಯಸಿಸುವುದು) ವಿಷ್ಣುವನ್ನು ಹೆಚ್ಚಿನ ವೇಳೆಯಲ್ಲಿ ಗದ್ಯದ ರೂಪದಲ್ಲಿ ಸ್ತುತಿಸಲಾಗುತ್ತದೆ (ಗದ್ಯವು ಛಂದೋಬದ್ಧವಾಗಿಲ್ಲದಿದ್ದರೂ ಸಹ ಸಮಂಜಸವೆನಿಸುವ ವಿಧದಲ್ಲಿ ರಚಿಸಲ್ಪಟ್ಟಿರುತ್ತವೆ ಮತ್ತು ಅವು ಬಹಳ ದೀರ್ಘವಾದ ರಚನೆಗಳಾಗಿರುತ್ತವೆ.)

ಛಾಂದೋಗ್ಯ ಉಪನಿಷತ್ತು (5.4 ರಿಂದ 5,9 ರ ವರೆಗೆ) ಮಾನವನ ಜನ್ಮಕ್ಕೆ ಕಾರಣವಾದ ಐದು ವಿಧವಾದ ಸಮಿತ್ತುಗಳ ಕುರಿತಾಗಿ ಹೇಳುತ್ತದೆ. ಇವುಗಳನ್ನು ದೇವತೆಗಳು ಸಮಿತ್ತುಗಳಾಗಿ ಅರ್ಪಿಸುತ್ತಾರೆ. ಮೊದಲು ದೇವತೆಗಳು ನೀರನ್ನು ಅಹುತಿಯಾಗಿ ಅರ್ಪಿಸಿದರು ಅದರಿಂದ ಸೋಮನು (ಚಂದ್ರನು) ಕಾಣಿಸಿಕೊಂಡನು. ಅವರು ಸೋಮನನ್ನು ಎರಡನೇ ಆಹುತಿಯಾಗಿ ಅರ್ಪಿಸಿದರು ಆಗ ಮಳೆಯು ಕಾಣಿಸಿಕೊಂಡಿತು. ಆಗ ಅವರು ನೀರನ್ನು ಮೂರನೆಯ ಆಹುತಿಯಾಗಿ ಸಮರ್ಪಿಸಿದರು ಆಗ ಆಹಾರವು ಕಾಣಿಸಿಕೊಂಡಿತು.



ಅವರು ಆಹಾರವನ್ನು ನಾಲ್ಕನೇ ಆಹುತಿಯಾಗಿ ಸಮರ್ಪಿಸಿದಾಗ ದೇವಿಯ ಮೇಲೆ ಚರ್ಚಿಸಲ್ಪಟ್ಟ ಐದು ವಿಧವಾದ ಯಜ್ಞಗಳನ್ನು ಇಷ್ಟಪಡುತ್ತಾಳೆ.

## ಪುಸ್ತಕ ಪರಿಚಯ




**ಲೇಖರು :** ಆರ್.ಸಿ. ಕೃಷ್ಣಸ್ವಾಮಿರಾಜು
**ಕನ್ನಡಾನುವಾದ :** ಸೂರ್ಯವಂಶಿ
**ಪುಟಗಳು :** 95, **ಬೆಲೆ :** 150/-
**ಪ್ರತಿಗಳಿಗೆ :** ವಿಕ್ರಮ್ ಪ್ರಕಾಶನ,
ನಂ. 23, ಅರ್ಕ, 18 ನೇ ಅಡ್ಡರಸ್ತೆ,
1 ನೇ ಮುಖ್ಯ ರಸ್ತೆ, ಭುವನೇಶ್ವರಿ ನಗರ,
ಕಾಫೀಬೋರ್ಡ್ ಲೇಔಟ್ ಪಾರ್ಕ್ ಹತ್ತಿರ,
ಹೆಬ್ಬಾಳ, ಬೆಂಗಳೂರು - 560 024

ಹಿಂದಿನ ಕಾಲದಲ್ಲಿ ಹಿರಿಯರು ಮಕ್ಕಳಿಗೆ ಕತೆಗಳನ್ನು ಹೇಳುತ್ತಾ ಊಟ ಮಾಡಿಸುವುದು, ಮಲಗಿಸುವುದು ಒಂದು ಅಭ್ಯಾಸವಾಗಿತ್ತು. ಇದರಿಂದ ಬಾಲ ಸಾಹಿತ್ಯವು ಬೆಳವಣಿಗೆ ಹೊಂದಿತು ಎನ್ನುವುದರಲ್ಲಿ ಸಂಶಯವಿಲ್ಲ.

ಈಗ ಅದೇ ನಿಟ್ಟಿನಲ್ಲಿ ಶ್ರೀ ಆರ್.ಸಿ.ಕೃಷ್ಣಸ್ವಾಮಿರಾಜು ಅವರು ಓದುಗರಿಗೆ ತಮ್ಮ ಬಾಲ್ಯದ ನೆನಪನ್ನು ಮರುಕಳಿಸುವಂತೆ ಚಿಕ್ಕ ಮಕ್ಕಳಿಗೆ ನೀತಿ ಕತೆಗಳ ಮೂಲಕ ಹಲವಾರು ಸಂದೇಶವನ್ನು ನೀಡುತ್ತಾ ಈ ರಾಜನ ಕತೆಗಳು ಎಂಬ ಪುಸ್ತಕವನ್ನು ರಚಿಸಿದ್ದಾರೆ. ಅದನ್ನು ತಮ್ಮದೇ ಸರಳ ಭಾಷೆಯಲ್ಲಿ ಎಲ್ಲಾ ಮಕ್ಕಳಿಗೂ ಹಿರಿಯರಿಗೂ ಅರ್ಥವಾಗುವಂತೆ ಸೂರ್ಯವಂಶಿಯವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಪುಸ್ತಕದಲ್ಲಿ ಬರುವ ಪ್ರತಿಯೊಂದು ಕತೆಯೂ ಒಂದು ನೀತಿಯನ್ನು ಸಾರುತ್ತಿದೆ.

ಆರತಿ ತಟ್ಟೆ ಎನ್ನುವ ಕತೆಯಲ್ಲಿ ಜೀವನ ನಡೆಸುವ ದಾರಿಯನ್ನು ತಿಳಿಸುವುದು, ಹಾಗೇ ಉಚಿತ ಸಲಹೆ ಎಂಬ ಕತೆಯಿಂದ ಎಲ್ಲರಿಗೂ ಸಲಹೆಗಳನ್ನು ಕೊಡುವುದು ಸುಲಭ ಅದನ್ನು ಆಚರಿಸುವುದು ಎಷ್ಟು ಕಷ್ಟ ಎಂಬುದವನ್ನು ಸಾರಿದ್ದಾರೆ. ರಾಜನ ಕತೆಯಲ್ಲಿ ರಾಜನ ಜವಾಬ್ದಾರಿ, ಅದನ್ನು ಆತ ನಿರ್ವಹಿಸಿರುವ ರೀತಿಯನ್ನು ಸಾರುತ್ತಿದೆ. ಹಾಗೇ ಒಂದು ಹಿಡಿ ಅಕ್ಕಿ ಕತೆಯಲ್ಲಿ ರಾಜ ತನ್ನ ಮುಂಜಾಗ್ರತೆಯಿಂದ ರಾಜ್ಯವನ್ನು ಕ್ಷಾಮದಿಂದ ಹೇಗೆ ರಕ್ಷಿಸಿದ ಎನ್ನುವುದನ್ನು ತಿಳಿಸಿ, ಎಲ್ಲಾ ಕಾಲದಲ್ಲೂ ಮುಂಜಾಗ್ರತೆ ಎಷ್ಟು ಒಳ್ಳೆಯದು ಎಂಬುದನ್ನು ತಿಳಿಸಿದ್ದಾರೆ. ಹೀಗೇ ಈ ಪುಸ್ತಕದಲ್ಲಿ ಇರುವ ಎಲ್ಲಾ ಕತೆಯಲ್ಲೂ ಒಂದಲ್ಲಾ ಒಂದು ಗುಣಪಾಠವನ್ನು ಮಕ್ಕಳಿಗೆ ತಿಳಿಸುವಂತಿದೆ. ಆ ಕೆಲಸವನ್ನು ಮನೆಯಲ್ಲಿನ ಹಿರಿಯರು ಮಾಡಿದಲ್ಲಿ ಈ ಲೇಖಕರ ಶ್ರಮಸಾರ್ಥಕವಾಗುತ್ತದೆ.

**- ಎಸ್. ವಾದಿರಾಜ್**

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಶ್ರೀ ವೆಂಕಟೇಶ್ವರಸ್ವಾಮಿ ಗೋವಿಂದನಾಮಗಳು

| | |
|---|---|
| ಶ್ರೀ ಶ್ರೀನಿವಾಸ | ಗೋವಿಂದಾ |
| ಶ್ರೀ ವೆಂಕಟೇಶ | ಗೋವಿಂದಾ |
| ಭಕ್ತವತ್ಸಲ | ಗೋವಿಂದಾ |
| ಭಾಗವತಪ್ರಿಯ | ಗೋವಿಂದಾ |
| ನಿತ್ಯನಿರ್ಮಲ | ಗೋವಿಂದಾ |
| ನೀಲಮೇಘಶ್ಯಾಮ | ಗೋವಿಂದಾ |
| ಪುರಾಣಪುರುಷ | ಗೋವಿಂದಾ |
| ಪುಂಡರೀಕಾಕ್ಷ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ನಂದನಂದನ | ಗೋವಿಂದಾ |
| ನವನೀತಚೋರ | ಗೋವಿಂದಾ |
| ಪಶುಪಾಲಕ ಶ್ರೀ | ಗೋವಿಂದಾ |
| ಪಾಪವಿಮೋಚನ | ಗೋವಿಂದಾ |
| ದುಷ್ಟಸಂಹಾರ | ಗೋವಿಂದಾ |
| ದುರಿತನಿವಾರಣ | ಗೋವಿಂದಾ |
| ಶಿಷ್ಟಪರಿಪಾಲಕ | ಗೋವಿಂದಾ |
| ಕಷ್ಟನಿವಾರಣ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ವಜ್ರಮಕುಟಧರ | ಗೋವಿಂದಾ |
| ವರಾಹಮೂರ್ತಿ | ಗೋವಿಂದಾ |
| ಗೋಪೀಜನಲೋಲ | ಗೋವಿಂದಾ |
| ಗೋವರ್ಧನೋದ್ಧಾರ | ಗೋವಿಂದಾ |
| ದಶರಥನಂದನ | ಗೋವಿಂದಾ |
| ದಶಮುಖಮರ್ದನ | ಗೋವಿಂದಾ |
| ಪಕ್ಷಿವಾಹನ | ಗೋವಿಂದಾ |
| ಪಾಂಡವಪ್ರಿಯ | ಗೋವಿಂದಾ |
| ಗೋವಿಂದ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಮತ್ಸ್ಯಕೂರ್ಮ | ಗೋವಿಂದಾ |
| ಮಧುಸೂದನ ಹರಿ | ಗೋವಿಂದಾ |
| ವರಾಹ ನರಸಿಂಹ | ಗೋವಿಂದಾ |
| ವಾಮನ ಭೃಗುರಾಮ | ಗೋವಿಂದಾ |
| ಬಲರಾಮಾನುಜ | ಗೋವಿಂದಾ |
| ಬೌದ್ಧಕಲ್ಕಿಧರ | ಗೋವಿಂದಾ |
| ವೇಣುಗಾನಪ್ರಿಯ | ಗೋವಿಂದಾ |
| ವೆಂಕಟರಮಣ | ಗೋವಿಂದಾ |
| ಗೋವಿಂದ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಸೀತಾನಾಯಕ | ಗೋವಿಂದಾ |
| ಶ್ರಿತಪರಿಪಾಲಕ | ಗೋವಿಂದಾ |
| ದರಿದ್ರಜನಪೋಷಕ | ಗೋವಿಂದಾ |
| ಧರ್ಮಸಂಸ್ಥಾಪಕ | ಗೋವಿಂದಾ |
| ಅನಾಥರಕ್ಷಕ | ಗೋವಿಂದಾ |
| ಆಪತ್‌ಬಾಂಧವ | ಗೋವಿಂದಾ |
| ಶರಣಾಗತವತ್ಸಲ | ಗೋವಿಂದಾ |
| ಕರುಣಾಸಾಗರ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಕಮಲದಳಾಕ್ಷ | ಗೋವಿಂದಾ |
| ಕಾಮಿತಫಲದಾತ | ಗೋವಿಂದಾ |
| ಪಾಪವಿನಾಶಕ | ಗೋವಿಂದಾ |
| ಪಾಹಿಮುರಾರೆ | ಗೋವಿಂದಾ |
| ಶ್ರೀಮುದ್ರಾಂಕಿತ | ಗೋವಿಂದಾ |
| ಶ್ರೀವತ್ಸಾಂಕಿತ | ಗೋವಿಂದಾ |
| ಧರಣೀನಾಯಕ | ಗೋವಿಂದಾ |
| ದಿನಕರತೇಜ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಪದ್ಮಾವತಿಪ್ರಿಯ | ಗೋವಿಂದಾ |
| ಪ್ರಸನ್ನಮೂರ್ತಿ | ಗೋವಿಂದಾ |
| ಅಭಯಹಸ್ತಪ್ರದರ್ಶನ | ಗೋವಿಂದಾ |
| ಮತ್ಸ್ಯಾವತಾರ | ಗೋವಿಂದಾ |
| ಶಂಖಚಕ್ರಧರ | ಗೋವಿಂದಾ |
| ಶಾರ್ಙ್ಗಗದಾಧರ | ಗೋವಿಂದಾ |
| ವಿರಾಜಾತೀರ್ಥ | ಗೋವಿಂದಾ |
| ವಿರೋಧಿಮರ್ದನ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಸಾಲಗ್ರಾಮಧರ | ಗೋವಿಂದಾ |
| ಸಹಸ್ರನಾಮ | ಗೋವಿಂದಾ |
| ಲಕ್ಷ್ಮೀವಲ್ಲಭ | ಗೋವಿಂದಾ |
| ಲಕ್ಷ್ಮಣಾಗ್ರಜ | ಗೋವಿಂದಾ |
| ಕಸ್ತೂರಿ ತಿಲಕ | ಗೋವಿಂದಾ |
| ಕಾಂಚನಾಂಬರಧರ | ಗೋವಿಂದಾ |
| ಗರುಡವಾಹನ | ಗೋವಿಂದಾ |
| ಗಜರಾಜರಕ್ಷಕ | ಗೋವಿಂದಾ |
| ಗೋವಿಂದ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ವಾನರಸೇವಿತ | ಗೋವಿಂದಾ |
| ವಾರಧಿಬಂಧನ | ಗೋವಿಂದಾ |
| ಎಳುಬೆಟ್ಟದ ಒಡೆಯ | ಗೋವಿಂದಾ |
| ಏಕಾಸ್ವರೂಪ | ಗೋವಿಂದಾ |
| ಶ್ರೀರಾಮಕೃಷ್ಣ | ಗೋವಿಂದಾ |
| ರಘುಕುಲನಂದನ | ಗೋವಿಂದಾ |
| ಪ್ರತ್ಯಕ್ಷದೇವ | ಗೋವಿಂದಾ |
| ಪರಮದಯಾಕರ | ಗೋವಿಂದಾ |
| ಗೋವಿಂದ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ವಜ್ರಕವಚಧರ | ಗೋವಿಂದಾ |
| ವೈಜಯಂತಿಮಾಲ | ಗೋವಿಂದಾ |
| ಬಡ್ಡಿಯಕಾಸಿನ | ಗೋವಿಂದಾ |
| ವಸುದೇವತನಯ | ಗೋವಿಂದಾ |
| ಬಿಲ್ವಪತ್ರಾರ್ಚಿತ | ಗೋವಿಂದಾ |
| ಭಿಕ್ಷುಕ ಸಂಸ್ತುತ | ಗೋವಿಂದಾ |
| ಸ್ತ್ರೀಪುಂರೂಪ | ಗೋವಿಂದಾ |
| ಶಿವಕೇಶವಮೂರ್ತಿ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಬ್ರಹ್ಮಾಂಡರೂಪ | ಗೋವಿಂದಾ |
| ಭಕ್ತ ರಕ್ಷಕ | ಗೋವಿಂದಾ |
| ನಿತ್ಯಕಲ್ಯಾಣ | ಗೋವಿಂದಾ |
| ನೀರಜನಾಭ | ಗೋವಿಂದಾ |
| ಹಾಥೀರಾಮಪ್ರಿಯ | ಗೋವಿಂದಾ |
| ಹರಿಸರ್ವೋತ್ತಮ | ಗೋವಿಂದಾ |
| ಜನಾರ್ದನಮೂರ್ತಿ | ಗೋವಿಂದಾ |
| ಜಗತ್ಸಾಕ್ಷಿರೂಪ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಅಭಿಷೇಕಪ್ರಿಯ | ಗೋವಿಂದಾ |
| ಆಪನ್ನಿವಾರಣ | ಗೋವಿಂದಾ |
| ರತ್ನಕಿರೀಟ | ಗೋವಿಂದಾ |
| ರಾಮಾನುಜನುತ | ಗೋವಿಂದಾ |
| ಸ್ವಯಂಪ್ರಕಾಶ | ಗೋವಿಂದಾ |
| ಆಶ್ರಿತಪಕ್ಷ | ಗೋವಿಂದಾ |
| ನಿತ್ಯಶುಭಪ್ರದ | ಗೋವಿಂದಾ |
| ನಿಖಿಲಲೋಕೇಶ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಆನಂದರೂಪ | ಗೋವಿಂದಾ |
| ಆದ್ಯಂತರಹಿತ | ಗೋವಿಂದಾ |
| ಇಹಪರದಾಯಕ | ಗೋವಿಂದಾ |
| ಇಭರಾಜರಕ್ಷಕ | ಗೋವಿಂದಾ |
| ಪರಮದಯಾಳೋ | ಗೋವಿಂದಾ |
| ಪದ್ಮನಾಭ ಹರಿ | ಗೋವಿಂದಾ |
| ತಿರುಮಲೆವಾಸ | ಗೋವಿಂದಾ |
| ತುಲಸೀವನಮಾಲ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಶೇಷಾದ್ರಿನಿಲಯ | ಗೋವಿಂದಾ |
| ಶೇಷಶಾಯಿಯೆ | ಗೋವಿಂದಾ |
| ಶ್ರೀ ಶ್ರೀನಿವಾಸ | ಗೋವಿಂದಾ |
| ಶ್ರೀ ವೆಂಕಟೇಶ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |

ಸರ್ವೇ ಜನಾ ಸುಖಿನೋಭವಂತು





# ಪಾಂಡವರ ಮಾತೆ ಕುಂತಿದೇವಿ

– ಹನುಮಂತ ಮ. ದೇಶಕುಲಕರ್ಣಿ
94803 64915

ಕುಂತಿದೇವಿ ಶ್ರೀಕೃಷ್ಣನ ಸೋದರತ್ತೆ, ವಸುದೇವನ ಸಹೋದರಿ. ಶೂರರಾಜನ ಮಗಳು. ಯದುವಂಶದ ಲಲನೆ, ಪೃಥೆ ಎಂದು ಕುಂತಿಯನ್ನು ಕರೆಯುತ್ತಿದ್ದುದೂ ಉಂಟು.

ಕುಂತೀಭೋಜ ಶೂರರಾಜನ ಸೋದರತ್ತೆಯ ಮಗ, ಇವನಿಗೆ ಸಂತಾನವಿರಲಿಲ್ಲ. ಶೂರಸೇನನು ತನ್ನ ಮೊದಲನೆ ಮಗುವನ್ನು ಕುಂತೀಭೋಜನಿಗೆ ಕೊಡುತ್ತೇನೆಂದು ಕೊಟ್ಟ ಮಾತಿನಂತೆ ನಡೆದ. ಸಾಮಾನ್ಯವಾಗಿ ಚೊಚ್ಚಲ ಮಗುವೆಂದರೆ ತಂದೆ ತಾಯಿಗಳಿಗೆ ಅತಿ ಪ್ರೀತಿಯಿರುತ್ತದೆ. ಜೊತೆಗೆ ಮೊದಲ ಮಗುವನ್ನು ದತ್ತು ಕೊಡಬಾರದೆಂದು ಶಾಸ್ತ್ರಗಳು ಹೇಳುತ್ತವೆ. ಆದರೂ ಶೂರಸೇನನು ತನ್ನ ಹಿರಿಯ ಮಗಳನ್ನು ಕುಂತೀಭೋಜನಿಗೆ ಕೊಟ್ಟ. ಕುಂತೀಭೋಜನು ಬಹಳ ಸಂತೋಷದಿಂದ ಆ ಮಗುವನ್ನು ಸ್ವೀಕರಿಸಿದನು. ಶೂರಸೇನನ ಮಗಳಿಗೆ ಕುಂತಿ ಎಂದು ನಾಮಕರಣ ಮಾಡಿ ಬೆಳಸತೊಡಗಿದನು.

ಇವಳ ಮಕ್ಕಳಾದ ಪಾಂಡವರಲ್ಲಿ ಮಧ್ಯಮನಾದ ಅರ್ಜುನನಿಗಿರುವ ಪಾರ್ಥ ಎಂಬ ಹೆಸರು ಇವಳ ಪೃಥೆ ಎಂಬ ಹೆಸರನ್ನು ನೆನಪಿಗೆ ತಂದುಕೊಡುತ್ತದೆ. ಸ್ವರ್ಗನಿವಾಸಿಗಳು ಊರ್ಧ್ವಲೋಕದಿಂದ ಬಂದು, ರಾಜ ಕುಂತೀಭೋಜನ ಅರಮನೆಗೆ ಭೇಟಿ ನೀಡುತ್ತಿದ್ದರೆ ಕುಂತಿಯನ್ನು ಅವರ ಸ್ವಾಗತ-ಸತ್ಕಾರದಲ್ಲಿ ತೊಡಗಿಸಲಾಗಿತ್ತು. ಅವಳು ಮಹಾ ಹಠ ಯೋಗಿಯಾದ ದೂರ್ವಾಸರ ಸೇವೆಯನ್ನೂ ಮಾಡಿದಳು. ಅವಳ ವಿಶ್ವಾಸಪೂರ್ಣ ಸೇವೆಯಿಂದ ಸಂತೃಪ್ತರಾದ ದೂರ್ವಾಸ ಮುನಿಗಳು ಅವಳಿಗೆ ವರ ಕೇಳಲು ಹೇಳಿದಾಗ ಕುಂತಿಯು ಮಹಾತ್ಮರೇ ತಾವು ಪ್ರಸನ್ನರಾದಿರೆಂದು ತಿಳಿದರೆ ನಮ್ಮ ತಂದೆ ಸಂತೋಷಪಡುತ್ತಾರೆ. ತಂದೆಯವರ ಪ್ರಸನ್ನತೆಗಿಂತ ಹೆಚ್ಚಿನದೇನು ಬೇಕು? ನಾನು ಆಜ್ಞೆಯಾದ್ದರಿಂದ ಏನೂ ಕೇಳಬೇಕೆಂದು ನನಗೆ ಹೊಳೆಯುತ್ತಿಲ್ಲ. ನನ್ನ ನಡೆ,ನುಡಿ ಹಾಗೂ ಸೇವೆಯಲ್ಲಿ ಏನಾದರೂ ಲೋಪವಿದ್ದರೆ ಕ್ಷಮಿಸಿ ಬಿಡಿ ಎಂದಳು.

ದೂರ್ವಾಸರಿಗೆ ಅವಳ ಮುಗ್ಧಮಾತುಗಳು ಪ್ರಿಯವೆನಿಸಿದವು. ಸೇವಾಧರ್ಮ ಕಠಿಣವಿದ್ದರೂ ಅದನ್ನು ನಿರ್ವಹಿಸಿ ಅದಕ್ಕೆ ಪ್ರತಿಯಾಗಿ ಸ್ವಸಂತೋಷದಿಂದ ಫಲವನ್ನು ಕೊಡುತ್ತೇನೆಂದರೂ ವಿನಯಪೂರ್ವಕ ನಿರಾಕರಿಸುವುದು ಸಾಧಾರಣ ಸ್ವಭಾವವಲ್ಲವೆಂದು ಹರ್ಷಚಿತ್ತರಾಗಿ ಅವಳಿಗೆ ಮಂತ್ರೋಪದೇಶ ಮಾಡಬೇಕೆಂದು ಸಂಕಲ್ಪಿಸಿದಾಗ, ಆ ಮಹಾ ಬ್ರಾಹ್ಮಣರನ್ನು ಸಂತೋಷಗೊಳಿಸಲು, ಅವರ ಮಾತನ್ನು ತಿರಸ್ಕರಿಸಲಾರದೆ ಕುಂತಿ ಒಪ್ಪಿಕೊಂಡಳು. ದೂರ್ವಾಸರು ಅವಳಿಗೆ ಅಥರ್ವವೇದದ ಶಿರೋಭಾಗದಲ್ಲಿ ಬಂದಿರುವ ಐದು ಮಂತ್ರಗಳನ್ನು ಉಪದೇಶಿಸಿ ಇದನ್ನು ಉಚ್ಚರಿಸಿ ನೀನು ದೇವ ದೇವತೆಯನ್ನು ಆವಾಹಿಸಿಕೊಂಡು ನಿನ್ನ ಇಷ್ಟಾರ್ಥವನ್ನು ಈಡೇರಿಸಿಕೊಳ್ಳಬಹುದೆಂದು ಹೇಳಿ ಹೊರಟರು.

ಅವಳು ಇನ್ನು ಕನ್ಯೆಯಾಗಿದ್ದಾಗ ಒಮ್ಮೆ ಕುತೂಹಲಕ್ಕಾಗಿ ಸೂರ್ಯದೇವನನ್ನು ಕರೆದಳು. ಸೂರ್ಯನು ತನ್ನ ಒಂದು ಅಂಶದಿಂದ ಮಗುವನ್ನು ಸೃಷ್ಟಿಸಿ ಅವಳ ಕೈಗೆ ಕೊಟ್ಟಾಗ ಅವ



ಕಾಲಾಂತರದಲ್ಲಿ ಪಾಂಡು ಎಳೆ ವಯಸ್ಸಿನಲ್ಲಿಯೇ ಸತ್ತು ಹೋದನು. ಅಪ್ರಾಪ್ತ ವಯಸ್ಸಿನ ಈ ಪಂಚಪಾಂಡವರನ್ನು ಸಾಕುವ ಸಲುವಾಗಿ ಕುಂತಿ ಬದುಕಿರಬೇಕೆಂದೂ ಮಾದ್ರಿಯು ಸತಿ ಪದ್ಧತಿಯನ್ನು ಸ್ವೀಕಾರ ಮಾಡಬೇಕೆಂದು ಇತ್ಯರ್ಥವಾಯಿತು. ಕೆಲವು ಕಾಲದ ಬಳಿಕ ದುರ್ಯೋಧನನು ಒಳಸಂಚು ಮಾಡಿ ಪಾಂಡವರನ್ನು ರಾಜ್ಯದಿಂದ ಹೊರ ಗಟ್ಟಿದಾಗ, ಕುಂತಿಯು ಅವರನ್ನು ಹಿಂಬಾಲಿಸಿದಳು. ವನವಾಸದ ಸಮಯದಲ್ಲಿ ದೊರೆತ ಆಹಾರದಲ್ಲಿ ಎರಡು ಭಾಗ ಮಾಡಿ ಅರ್ಧ ಭೀಮ ನಿಗೆ ಉಳಿದರ್ಧ ಪಾಂಡವರಿಗೆ ಕುಂತಿ ಹಂಚುತ್ತಿದ್ದಳು. ನಂತರ ವನ ವಾಸದಲ್ಲಿ ಕುಂತಿಯಾಜ್ಞೆ ಮೇರೆಗೆ ಭೀಮನು ಹಿಡಿಂಬೆಯನ್ನು ಮದುವೆ ಯಾದನು.

ಪಾಂಚಾಲ ದೇಶದಲ್ಲಿ ಅರ್ಜುನನು ದ್ರೌಪದಿಯನ್ನು ಸ್ವಯಂ ವರದಲ್ಲಿ ಪಡೆದಿದ್ದರೂ ಕುಂತಿಯ ಅಜಾಗರುಕತೆಯಿಂದಲೋ ಎನ್ನುವು ದಕ್ಕಿಂತ ವಿಧಿಲಿಖಿತದ ಪ್ರಕಾರ ಐವರು ಪಾಂಡವರು ದ್ರೌಪದಿಯನ್ನು ಮದುವೆಯಾದರು.

ಕುರುಕ್ಷೇತ್ರ ಯುದ್ಧದಲ್ಲಿ ಕರ್ಣ ಮಡಿದ ಬಳಿಕ ಕುಂತಿ ತನ್ನ ಮಗ ನೆಂದು ಒಪ್ಪಿಕೊಂಡಳು. ಯುದ್ಧಾನಂತರ ಶ್ರೀ ಕೃಷ್ಣನು ಮರಳಿ ಮನೆಗೆ ಹೊರಟಾಗ, ಆಕೆ ಅವನಲ್ಲಿ ಮಾಡಿಕೊಂಡ ಪ್ರಾರ್ಥನೆ ಅತ್ಯುತ್ಕೃಷ್ಟವಾ ಗಿದೆ. ಕೊನೆಗೆ ಅವಳು ಘೋರತಪಸ್ಸಿಗಾಗಿ ಗಾಂಧಾರಿಯೊಂದಿಗೆ ಕಾಡಿಗೆ ಹೋಗಿ ಪ್ರತಿ 30 ದಿನಗಳಿಗೊಮ್ಮೆ ಆಹಾರವನ್ನು ಸೇವಿಸುತ್ತ ಆಳವಾದ ಧ್ಯಾನದಲ್ಲಿ ಮಗ್ನಳಾಗಿ ಅಲ್ಲಿಯೇ ಕಾಲವಾದಳು.

ಆಗೆ ಆಘಾತವಾಗುತ್ತದೆ. ಆಗ ಅವಳಿಗೆ ದೂರ್ವಾ ಸರು ಕೊಟ್ಟ ವರದಂತೆ ತನಗಿಷ್ಟವಾದ ದೇವರನ್ನು ಪ್ರತ್ಯಕ್ಷ ಮಾಡಿಕೊಳ್ಳುವುದರ ಜೊತೆಗೆ ಅವರಿಂದ ಮಗು ಪಡೆಯುವ ಬಗ್ಗೆಯೂ ಹೇಳಿದ್ದು ನೆನಪಾ ಗುತ್ತದೆ. ಆಗ ತಾನು ಮಾಡಿದ ತಪ್ಪಿನ ಅರಿವಾಗು ತ್ತದೆ. ಅನಿರೀಕ್ಷಿತವಾದ ಈ ಆಘಾತದಿಂದ ತತ್ತರಿಸು ತ್ತಾಳೆ. ಸೂರ್ಯದೇವನ ಆಶೀರ್ವಾದದಿಂದ ಅವಳ ಕನ್ಯತ್ವ ಹಾಗೇ ಉಳಿಯಿತು. ಆದರೆ ತನ್ನ ಪಾಲಕ ರಿಗೆ ಹೆದರಿ, ಕರ್ಣನನ್ನು ಗಂಗೆಯಲ್ಲಿ ತೇಲಿ ಬಿಟ್ಟಳು. ಆಮೇಲೆ ಸ್ವಯಂವರದಲ್ಲಿ ಪಾಂಡು ಮಹಾರಾಜ ನನ್ನು ತನ್ನ ಪತಿಯಾಗಿ ಪಡೆದಳು. ಕಾಲಾಂತರದಲ್ಲಿ ಪಾಂಡುರಾಜ ಗೃಹಸ್ಥ ಜೀವನದಿಂದ ನಿವೃತ್ತನಾಗ ಬಯಸಿದನು. ಇದನ್ನು ಕುಂತಿ ನಿರಾಕರಿಸಿದಳು. ಆದರೆ ಅಂತಿಮವಾಗಿ ಪಾಂಡುರಾಜನು, ಅನು ರೂಪನಾದ ಪರಪುರುಷನನ್ನು ಆಹ್ವಾನಿಸಿ ಪುತ್ರ ವತಿಯಾಗಲು ಕುಂತಿಗೆ ಹೇಳಿದಾಗ, ಕುಂತಿ ಒಪ್ಪಿ ಕೊಳ್ಳಲಿಲ್ಲ.

ಆದರೆ ಪಾಂಡು ವೈದಿಕ ನಿದರ್ಶನಗಳನ್ನು ಕೊಟ್ಟಾಗ ಅವಳು ಒಪ್ಪಿದಳು. ಹೀಗೆ ಅವಳು ದೂರ್ವಾಸಮುನಿ ನೀಡಿದ ಮಂತ್ರದ ಪ್ರಭಾವದ ಕಾರಣ, ಯಮರಾಜನಿಂದ ಯುಧಿಷ್ಠಿರ, ವಾಯು ದೇವನಿಂದ ಭೀಮ, ಇಂದ್ರನಿಂದ ಅರ್ಜುನನ ಜನನವಾಯಿತು. ಪಾಂಡುವಿನ ಮತ್ತೊಬ್ಬ ಪತ್ನಿ ಮಾದ್ರಿಯು ಅಶ್ವಿನೀಕುಮಾರರಿಂದ ನಕುಲ ಸಹ ದೇವರನ್ನು ಪಡೆದರು. ಆದರೆ ಈ ಮಂತ್ರಗಳನ್ನು ಹೇಳಿದರೆ ತನಗಿಷ್ಟವಾದ ದೇವರು ಪ್ರತ್ಯಕ್ಷನಾಗು ತ್ತಾನೆಯೋ, ಇಲ್ಲವೋ ಎಂಬ ಕುತೂಹಲವೇ ಕುಂತಿಯನ್ನು ಆಜೀವಪರ್ಯಂತ ದುಃಖಕ್ಕೆ ದೂಡು ತ್ತದೆ. ಆದರೆ ಕುಂತಿಯ ಈ ಆದರ್ಶ ನಿಷ್ಕಾಮ ಸೇವಾಭಾವ ಇಂದಿಗೂ ಪ್ರಸ್ತುತ.

### ಜನವರಿ 2025 ಸಂಚಿಕೆ ರಸಪ್ರಶ್ನೆಯ ಉತ್ತರಗಳು

01. ಮಕರರಾಶಿ
02. ಆಂಡಾಳ್
03. ಪುರಂದರ
04. ಅತ್ರಿಮಹರ್ಷಿ
05. ಆಂಜನೇಯಸ್ವಾಮಿ
06. ಶೃಂಗವಂತನು
07. ವಿನತ, ಕದ್ರುವ
08. ಸ್ನಪನ ಮಂಟಪ
09. ಚಿತ್ರಭಾನು ಸಂವತ್ಸರ ಪುಷ್ಯ ಬಹುಳ ಅಷ್ಟಮಿ
10. ಕುರವರ ಪಂಜು
11. ಹರಿ ಮತ್ತು ಶ್ರೀ ಭೂನೀಳಾದೇವಿಯರಿಗೆ
12. ಸ್ನಾನಕ್ಕೆ
13. ಉತ್ತರ ದ್ವಾರ
14. 3 ಹಾರಗಳಿದ್ದವು
15. ಭೋಗಿ ಹಬ್ಬ



# ಧಾರಾವಾಹಿ

# ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ

- ಡಾ॥ ಬಿ.ಎನ್.ಶ್ರೀನಿವಾಸನ್

ಕಳೆದ ಸಂಚಿಕೆಯಿಂದ

ಈ ಹಿಂದೆ ಹೇಳಿದ ಲಕ್ಷಣಗಳೊಡನೆ ಆಗಮ ಶಾಸ್ತ್ರದನುಸಾರವಾಗಿ ಯಾವ ನಮೂನೆಯ ವಿಗ್ರಹವಿದೆಯೆಂಬುದನ್ನು ನಾವೀಗ ಗಮನಿಸಬಹುದು.

**ಮರೀಚಿ ಸಂಹಿತೆಯಲ್ಲಿ ಕಂಡು ಬರುವಂತೆ ಸ್ಥಾನಕ ಮೂರ್ತಿಯ ಹನ್ನೆರಡು ಬಗೆಯ ವಿವರ**

| ಕ್ರ ಸಂ. | ಮೂರ್ತಿಯ ಬಗೆ | ಮೂರ್ತಿಯ ವರ್ಣ | ಕೈಗಳ ವಿವರ | ಪರಿವಾರ 8 ದೇವತೆಗಳು |
|---|---|---|---|---|
| 1. | ಯೋಗ ಉತ್ತಮ | ಶ್ಯಾಮಲ | 4ಕೈಗಳು, ಮೇಲಿನವುಗಳಲ್ಲಿ ಶಂಖ, ಚಕ್ರಗಳಿವೆ ಕೆಳಗಡೆ ಬಲಗೈ ಅಭಯ ಎಡಗೈ ಕಟ್ಯವಲಂಬಿತ | ಬಲಗಡೆ ಭೃಗು, ಮಾರ್ಕಂಡೇಯ, 4ಕೈ ಬ್ರಹ್ಮ ದಕ್ಷಿಣ ಭಾಗಕ್ಕೆ ಬಿಳಿಯಬಣ್ಣದ ಶಿವ |
| 2. | ಯೋಗ ಮಧ್ಯಮ | ಶ್ಯಾಮಲ | ಮೇಲಿನಂತೆಯೇ | ಬ್ರಹ್ಮಶಿವರಿಲ್ಲ ಮಿಕ್ಕ ಪರಿವಾರವಿದೆ. |
| 3. | ಯೋಗ ಅಧಮ | ಶ್ಯಾಮಲ | ಮೇಲಿನಂತೆಯೇ | ಭೃಗು ಮಾರ್ಕಂಡೇಯರಿಲ್ಲ. |
| 4. | ಭೋಗ ಉತ್ತಮ | ಶ್ಯಾಮಲ | ನಾಲ್ಕು ಕೈಗಳು ಮೇಲಿನವುಗಳಲ್ಲಿ ಶಂಖ, ಚಕ್ರ. ಕೆಳಗಡೆ - ಬಲಗೈ ಅಭಯ ಅಥವಾ ವರದ ಹಸ್ತ. ಪ್ರಸರಿತಹಸ್ತ ಧೈತೋತ್ಪಲ ಎಡಗೈ ಕಟ್ಯವಲಂಬಿತ ಸಿಂಹಕರಣ ಭಂಗಿ | ಬಲಕ್ಕೆ ಶಿವಬ್ರಹ್ಮರು,ಕಮಲಹಿಡಿದ ಎಡಗೈ, ಬಲಕ್ಕೆಬಾಚಿದ ಬಲಹಸ್ತದ ಶ್ರೀದೇವಿ ಎಡಕ್ಕೆ ಹಸ್ತದ ಭೂದೇವಿ ಭೃಗು, ವ್ಯಾಸ ತುಂಬುರು, ನಾರದ, ಸನಕ, ಸನತ್ಕುಮಾರ, ಸೂರ್ಯ, ಚಂದ್ರ ಮಯ, ಸಂಹ್ಲಾದಿನಿ ಕಿನ್ನರ, ಮಿಥುನ, ವಿದ್ಯಾಧರಯಕ್ಷ, ಸನಂದನ. |
| 5. | ಭೋಗ ಮಧ್ಯಮ | ಶ್ಯಾಮಲ | ಮೇಲಿನಂತೆಯೇ | ತುಂಬುರು, ನಾರದ,ಯಕ್ಷ, ವಿದ್ಯಾಧರರಿಲ್ಲ. |
| 6. | ಭೋಗ ಅಧಮ | ಶ್ಯಾಮಲ | ಮೇಲಿನಂತೆಯೇ | ಸೂರ್ಯಚಂದ್ರರಿಲ್ಲ. |
| 7. | ವೀರ ಉತ್ತಮ | ಶ್ಯಾಮಲ | ನಾಲ್ಕು ಕೈಗಳು ಶಂಖ ಚಕ್ರಗಳುಂಟು | ಬ್ರಹ್ಮಶಿವರು ಎಡಬಲದಲ್ಲಿ ಕಿಷ್ಕಿಂಧ, ಭೃಗು, ಮಾರ್ಕಂಡೇಯ, ಸುಂದರ, ಸನತ್ಕುಮಾರಸನಂದನ,ಸೂರ್ಯಚಂದ್ರರಿದ್ದಾರೆ. |
| 8. | ವೀರ ಮಧ್ಯಮ | ಶ್ಯಾಮಲ | ಮೇಲಿನಂತೆಯೇ | ಕಿಷ್ಕಿಂಧ, ಸುಂದರ, ಸನತ್ಕುಮಾರಸನಂದನ. |
| 9. | ವೀರ ಅಧಮ | ಶ್ಯಾಮಲ | ಮೇಲಿನಂತೆಯೇ | ಸೂರ್ಯ, ಚಂದ್ರ ಮುನಿಗಳಿಲ್ಲ. |
| 10. | ಅಭಿಚಾರಕ ಉತ್ತಮ | ಧೂಮ್ರ ವರ್ಣ | ಎರಡು ಅಥವಾ ನಾಲ್ಕು ಕೈಗಳು ಕಪ್ಪು ತುಟಿಗಳು, ಬಾಗಿದಕಾಲುಗಳು, ಮೇಲೆ ನೋಡುವ ಕಣ್ಣು (ತಮೋಗುಣ) | ಪರಿವಾರ ದೇವತೆಗಳು ಬ್ರಹ್ಮ,ಇಲ್ಲ. ಪಿಶಾಚಗಣ ಗಳ ಪರಿವೃತವಾಗಿರುವುದು. |
| 11. | ಅಭಿಚಾರಕ ಮಧ್ಯಮ | ಧೂಮ್ರ ವರ್ಣ | ಮೇಲಿನಂತೆಯೇ | ಮೇಲಿನಂತೆಯೇ |
| 12. | ಅಭಿಚಾರಕ ಅಧ್ಯಮ | ಮೇಲಿನಂತೆಯೆ | ಮೇಲಿನಂತೆಯೇ | ಮೇಲಿನಂತೆಯೇ |

ದೇವರು ಬೆಟ್ಟದ ಮೇಲಿರುವುದರಿಂದಲೂ ಕಾಡಿರುವುದರಿಂದಲೂ,ಪ್ರಾಚೀನ ಕಾಲದಲ್ಲಿ ಇಲ್ಲಿ ಯಾವುದೇ ಗ್ರಾಮವಾಗಲೀ ಕೋಟೆಯಾಗಲೀ ಇರಲಿಲ್ಲವಾದ್ದರಿಂದ ಇದು ಯೋಗ ಅಧಮಸ್ಥಾನಕ ಅಥವಾ ಅಭಿಚಾರಕ ಸ್ಥಾನಕ ಅಥವಾ ವೀರ ಅಧಮ

ಸ್ಥಾನಕ ಮೂರ್ತಿ ಆಗಿರಬೇಕು. ಆ ಕಾಲದಲ್ಲಿ ಇದು ಭೋಗ ಮೂರ್ತಿ ಆಗಿರಲು ಸಾಧ್ಯವಿಲ್ಲ. ಆಲಯದಲ್ಲಿ ಏಕ ಮೂರ್ತಿ ಇರುವುದಾಗಿ ಇದು ಅಧಮ ರೀತಿಯದು.

ಯೋಗ ಅಧಮ ಸ್ಥಾನಕ ಮೂರ್ತಿಯು ನಾಲ್ಕು ಕೈಗಳನ್ನು ಹೊಂದಿ, ಮೇಲಿನೆರಡು ಕೈಗಳಲ್ಲಿ ಶಂಖ, ಚಕ್ರಗಳಿದ್ದು, ಬಲಗಡೆ ಕೆಳಹಸ್ತ ಕಟ್ಯವಲಂಬಿತವಾಗಿಯೂ ಇರಬೇಕು. ಎದೆಯಲ್ಲಿ ಶ್ರೀದೇವಿಯು ಉಪಸ್ಥಿತಿಯನ್ನು ಕುರಿತು ಆಗಮಗಳಲ್ಲಿ ಹೇಳಿಲ್ಲ. ವಿಗ್ರಹದ ಬಲಭಾಗದ ಎದೆಯ ಮೇಲೆ ಶ್ರೀದೇವಿಯನ್ನು ವಿಗ್ರಹದ ಅಂಗವಾಗಿಯೇ ಕೆತ್ತಲಾಗಿದೆಯೇ ಹೊರತು ನಂತರದ ಕಾಲದಲ್ಲಿ ತೆಗೆದು ಸೇರಿಸುವಂತಹ ಜೋಡಣೆಯಾಗಿ ಬಂದಿಲ್ಲ. ನಿಯಮ ವಿರುದ್ಧವಾಗಿ ಕೆಳಗಡೆಯ ಬಲಹಸ್ತ ಅಭಯ ಹಸ್ತವಾಗಿರದೆ ವರದ ಹಸ್ತವಾಗಿದೆ. ಮೇಲಿನೆರಡು ಕೈಗಳ ಶಂಖ, ಚಕ್ರಗಳೆರಡೂ ವಿಗ್ರಹದ ಅವಿನಾಭಾವಿ ಭಾಗಗಳಾಗದೆ ತೆಗೆದಿಡಬಹುದಾದವುಗಳಾಗಿವೆ. ಹೀಗಾಗಿ ಈ ವಿಗ್ರಹವು ಆಗಮ ಶಾಸ್ತ್ರದನುಸಾರವಾದ ಯೋಗ ಅಧಮಸ್ಥಾನಕ ಮೂರ್ತಿ ಅಲ್ಲ.

ಅಭಿಚಾರಕ ಸ್ಥಾನಕ ಮೂರ್ತಿಯು ಉತ್ತಮ ಮಧ್ಯಮ ಅಧಮ ಮೂರ್ತಿ ಆಗಿದ್ದು ಎರಡು ಅಥವಾ ನಾಲ್ಕು ಕೈ ಹೊಂದಿರಬಹುದಾದರೂ ಯಾವುದೇ ದೈವಿಕ ಆಯುಧಗಳೂ ಇರದು. ಆಗಮಶಾಸ್ತ್ರಗಳಲ್ಲಿ ಈ ಮೂರ್ತಿಯ ಕೈಗಳು ಅಭಯ ವರದ ಕಟ್ಯವಲಂಬಿತ ಮುದ್ರೆ ಹೊಂದಿರುವುದರ ಬಗ್ಗೆ ಹೇಳಿಲ್ಲ. ಹೀಗಾಗಿ ಈ ಮೂರ್ತಿ ಅಭಿಚಾರಕ ಸ್ಥಾನಕ ಮೂರ್ತಿ ಆಗಿರಬಹುದಾದರೂ ಕೆಲವು ವಿನಾಯಿತಿಗಳುಂಟು. ಅಭಿಚಾರಕ ಮೂರ್ತಿಯು ತಗ್ಗಾದ ಗಲ್ಲ,ಸಣ್ಣ ಅಂಗಗಳನ್ನು ಹೊಂದಿರಬೇಕು ಎಂದರೆ ಒಟ್ಟು ವಿಗ್ರಹ ಸಣಕಲಾಗಿ ದೃಷ್ಟಿ ಮೇಲಕ್ಕಿದ್ದು ತಮೋಗುಣವನ್ನು ತೋರಿಸಬೇಕು. ತಿರುಮಲೆಯ ದೇವರ ವಿಗ್ರಹ ಅತ್ಯಂತ ಸುಂದರವಾಗಿದ್ದು, ಅಳತೆಯ ಪ್ರಮಾಣಗಳಲ್ಲಿ ಅತಿ ಸೂಕ್ತವಾದ ಅಂಗಾಂಗಗಳನ್ನು ಹೊಂದಿದ್ದು, ದೈವಿಕ ಆಭರಣಗಳೊಂದಿಗೆ ಪರವಾಸುದೇವ ರೂಪವನ್ನು ಹೋಲಿ ನಿತ್ಯಾನಪಾಯಿನಿಯಾದ,ಜಗನ್ಮಾತೆ ಶ್ರೀದೇವಿಯನ್ನು ವಿಗ್ರಹದ ಅವಿಭಾಜ್ಯ ಅಂಗವಾಗಿ ಹೊಂದಿದೆ. ಹೀಗಾಗಿ ಈ ವಿಗ್ರಹ ಉತ್ತಮ, ಮಧ್ಯಮ, ಅಧಮ ರೀತಿಗಳಿಗೆ ಸೇರುವ ಅಭಿಚಾರಕ ಮೂರ್ತಿ ಅಲ್ಲ.

ವೀರ ವಿಗ್ರಹ ಮೂರ್ತಿಯು ಶಂಖ, ಚಕ್ರಗಳನ್ನು ನಿತ್ಯವೂ ಹೊಂದಿರಬೇಕಾದರೂ ವಿಗ್ರಹದ ಭಾಗವಾಗಿ ಶ್ರೀದೇವಿಯನ್ನು ಹೇಳಲಾಗಿಲ್ಲ. ಕೆಳಗಿನ ಕೈಗಳ ಮುದ್ರೆಗಳು ವರದ ಅಥವಾ ಅಭಯವೆಂದು ಹೇಳದೇ ಇದ್ದರೂ ಶ್ರೀದೇವಿ,ಶಂಖ ಹಾಗೂ ಚಕ್ರಗಳ ಇರುವಿಕೆಯು ವಿಗ್ರಹದ ಅವಿಚ್ಛಿನ್ನ ಲಕ್ಷಣವಾಗದಿರುವುದರಿಂದ ಈ ಸಾಧ್ಯತೆಯನ್ನು ಅಲ್ಲಗಳೆಯಬೇಕು. ಭೋಗಮೂರ್ತಿಯ ವಿಷಯದಲ್ಲಿಯೂ,ಶಂಖ, ಚಕ್ರಗಳು ನಿತ್ಯವಾಗಿಯೂ, ಶ್ರೀದೇವಿ, ಭೂದೇವಿಯರು ಎದೆಯ ಮೇಲೆಯೂ ಇರಲೇಬೇಕು. ಇನ್ನೊಂದು ಕೈ ಕಟ್ಯವಲಂಬಿತ ಸಿಂಹಕರಣವಾಗಿರಬೇಕು. ಈ ಲಕ್ಷಣಗಳು ವಿಗ್ರಹದಲ್ಲಿಲ್ಲ. ಈ ವಿಗ್ರಹದಲ್ಲಿ ಹೇಳಲಾದ ಒಂದೇ ಒಂದು ಲಕ್ಷಣವೆಂದರೆ ಕೆಳಗಡೆಯ ಬಲಗೈ ವರದ ಹಸ್ತವಾಗಿರುವಿಕೆ.

ದೇವರು ಶ್ಯಾಮಲ ಅಥವಾ ಕಪ್ಪುವರ್ಣದವನಾಗಿರುವುದೂ, ಎರಡು ಕದಲುವ ಕೈ ಆಯುಧಗಳು ಸೇರಿದಂತೆ ನಾಲ್ಕು ಕೈಗಳನ್ನು ಹೊಂದಿರುವುದರಿಂದಲೂ, ಆಗಮಶಾಸ್ತ್ರದ ವಿಗ್ರಹ ಲಕ್ಷಣಗಳಂತೆ ಧ್ರುವಮೂರ್ತಿಯ ಪ್ರತಿಷ್ಠಾಪನೆಯಲ್ಲಿ ಆಗಮ ಶಾಸ್ತ್ರಗಳು ಹೇಳುವ ಯಾವುದೇ ನಮೂನೆಯಲ್ಲೂ ಇಲ್ಲ. ಇದರಿಂದಾಗಿ ಉಳಿದಿರುವ ಒಂದು ಮಾರ್ಗವೆಂದರೆ ಇಲ್ಲಿನ ದೇವರು ಪರಬ್ರಹ್ಮ ಅಥವಾ ಪರವಾಸುದೇವ ಮಾದರಿಗೆ ಹೊಂದುವುದೇ ಎಂಬುದರ ಪರಿಶೀಲನೆ.

ದಿವ್ಯಲೋಕದಲ್ಲಿರುವ ಅವನನ್ನು ಕುರಿತು ವಿವಿಧ ಸಂಹಿತೆಗಳು ವಿಧವಿಧವಾಗಿ ವರ್ಣಿಸುತ್ತವೆ. ಭೃಗುಸಂಹಿತೆಯ 33ನೇ ಅಧ್ಯಾಯದಲ್ಲಿ ಅವನು ನಾಲ್ಕು ಕೈ ಹೊಂದಿ, ಐದು ಆಯುಧ ಹೊಂದಿರುವನೆಂದು ಹೇಳಲಾಗಿದೆ. ಅವನ ದೇಹದ ಎಡ,ಬಲ ಭಾಗಗಳು ಒಂದರೊಡನೊಂದು ಹೋಲುತ್ತ ಅತ್ಯಂತ ಸುಂದರವಾಗಿವೆ. ಅವನಿಗೆ ಎಲ್ಲ ದಿವ್ಯಾಭರಣಗಳುಂಟು.

ಅವನಲ್ಲಿಯೇ ಶ್ರೀದೇವಿಯೂ ಇರುವಳೆಂದು ಅವನು ಸರ್ವ ಕಲ್ಯಾಣಗುಣಾಕರನೆಂದೂ, ನಿರಪೇಕ್ಷನೆಂದೂ, ಆರು ಸದ್ಗುಣಗಳಿಂದ ಶೋಭಿತನಾಗಿರುವನೆಂದು ಹೇಳುತ್ತದೆ. ಆದರೆ ಈ ವಿವರಣೆ ಸಂಪೂರ್ಣವಾಗಿಲ್ಲ. ಇಲ್ಲಿ ಹೇಳಲ್ಪಟ್ಟ ಎಲ್ಲ ಆಯುಧಗಳೂ ವೆಂಕಟೇಶ್ವರ ಸ್ವಾಮಿಯಲ್ಲಿಲ್ಲ. ಷಡ್ಗುಣಗಳ ಉಲ್ಲೇಖ ಇಲ್ಲಿ ಗಮನಾರ್ಹ, ಪಾಂಚರಾತ್ರ ಆಗಮಗಳು ಪರವಾಸುದೇವನನ್ನು ವಿವಿಧ ರೀತಿಯಲ್ಲಿ ವರ್ಣಿಸುತ್ತವೆಯಾದರೂ ಬಹುತೇಕ ಅನಂತನಾಗನ ಮೇಲೆ ಕುಳಿತಂತೆಯೂ, ಶಯನರೂಪಿಯಾಗಿಯೂ ಇರುವಂತೆ ವಿವರಿಸುತ್ತದೆ. ನಮ್ಮ ಸಧ್ಯದ ಪ್ರಶ್ನೆಯ ಪರಿಹಾರದಲ್ಲಿ ಇವೆಲ್ಲವೂ ದೂರದ ಸಂಬಂಧಿಗಳಷ್ಟೆ.

**- ಮುಂದುವರೆಯುತ್ತದೆ.**



# ತಿರುಮಲೇಶನ ಯುಗಾದಿ ಆಸ್ಥಾನ

ದೇವದೇವನಾದ ಶ್ರೀಮಹಾವಿಷ್ಣುವು ಶ್ರೀವೈಕುಂಠದಿಂದ ಧರೆಗೆ ಇಳಿದು ಬಂದು ಸಪ್ತಗಿರಿಯಲ್ಲಿ ನೆಲೆಸಿದ್ದಾನೆ. ಭೂಮಿಗೆ ಬರುವಾಗ ತನ್ನೊಂದಿಗೆ ಶ್ರೀವೈಕುಂಠದಲ್ಲಿ ಇರುವಂತಹಾ ಬೆಟ್ಟಗಳನ್ನು ತೀರ್ಥಗಳನ್ನು ತಂದಿದ್ದಾನೆ. ಹಾಗೇ ತನ್ನ ಪ್ರಿಯ ಸಖಿಯರಾದ ಶ್ರೀದೇವಿ ಭೂದೇವಿಯರೊಂದಿಗೆ ತನ್ನ ಭಕ್ತಾಗ್ರೇಸರನಾದ ಗರುಡನನ್ನು ಇತ್ಯಾದಿ ಪರಿವಾರ ದೇವತೆಗಳನ್ನು ಭೂತಳಕ್ಕೆ ಕರೆತಂದಿದ್ದಾನೆ.

ಇಲ್ಲಿ ನೋಡಿ! ಆ ಸ್ವಾಮಿಯು ಈ ಭೂಲೋಕದಲ್ಲಿ ತನ್ನ ನಿವಾಸವನ್ನು ಏರ್ಪಡಿಸಿಕೊಂಡು ಎಲ್ಲರ ಮನಸ್ಸಿನ, ಮನೆಯ ಇಷ್ಟದೈವವಾಗಿ ನೆಲೆಸಿದ್ದಾನೆ. ಅದಕ್ಕೇ ವೈಕುಂಠದಲ್ಲಿನ ಆ ಮಹಾಸಂಸ್ಥಾನ ಇಲ್ಲಿ ಭೂಲೋಕ ವೈಕುಂಠವಾಗಿ, ದಿವ್ಯಧಾಮವಾಗಿ ರಾರಾಜಿಸುತ್ತಿದೆ.

ಎಲ್ಲರ ಮನೆ ದೈವವಾದ ಶ್ರೀವೇಂಕಟೇಶ್ವರನಿಗೆ ಯುಗಾದಿಯ ಹಬ್ಬದಂದು ಉತ್ಸವಗಳು, ಮೆರವಣಿಗೆಗಳು ಪ್ರಾರಂಭವಾಗಿ ಪುನಃ ಬರುವ ಯುಗಾದಿಯ ಹಿಂದಿನ ದಿನದಂದು ಎಲ್ಲಾ ಉತ್ಸವಗಳು ಪೂರ್ಣಗೊಳ್ಳುತ್ತವೆ.

ತಿರುಮಲೆಯಲ್ಲಿ ಯುಗಾದಿಯ ಹಬ್ಬದಂದು ನಡೆಯುವ ಮೊದಲ ವಾರ್ಷಿಕೋತ್ಸವ **"ತಿರುಮಲೇಶನ ಯುಗಾದಿ ದರ್ಬಾರ್"** ಇದನ್ನು **"ಯುಗಾದಿ 'ಆಸ್ಥಾನ"** ಎಂದು ಕರೆಯುತ್ತಾರೆ. ಈ ಯುಗಾದಿ ಆಸ್ಥಾನ! ಬಂಗಾರದ ಬಾಗಿಲಿನ ಮುಂದೆ ತಿರುಮಹಾಮಣಿಮಂಟಪ **(ಘಂಟಾ ಮಂಟಪ)** ದಲ್ಲಿ, ಅತ್ಯಂತ ವೈಭವದಿಂದ ನಿರ್ವಹಿಸಲ್ಪಡುತ್ತದೆ.

ಈ ಆಸ್ಥಾನದಲ್ಲಿ ಶ್ರೀಹರಿಯ ಅರ್ಚಕರು, ಜಿಯ್ಯಂಗಾರರು, ಏಕಾಂಗಿಗಳು, ವೇದಪಂಡಿತರು, ದೇವಸ್ಥಾನದ ಉನ್ನತಾಧಿಕಾರಿಗಳು, ಧರ್ಮಕರ್ತರ ಮಂಡಳಿಯ ಸದಸ್ಯರು, ತಿರುಮಲೆಯ ಆಲಯದ ಸಿಬ್ಬಂದಿಯವರು ಮಾತ್ರಾ ಪಾಲ್ಗೊಂಡು ದರ್ಶಿಸುವಂತಹಾ ಆನಂದನಿಲಯದ **"ಯುಗಾದಿ ಆಸ್ಥಾನ"** ಸಂಭ್ರಮವನ್ನು ಸಾಮಾನ್ಯ ಭಕ್ತರು ಯಾರೂ ದರ್ಶಿಸುವುದಕ್ಕೆ ಅವಕಾಶವಿಲ್ಲ. ಅಷ್ಟೇ ಅಲ್ಲ ಈ ಸಂಭ್ರಮವನ್ನು ವಿಡಿಯೋ ಕ್ಯಾಮರಾದಲ್ಲೂ ಚಿತ್ರಿಸುವುದಕ್ಕೆ ಅನುಮತಿ ಇಲ್ಲ. ಆದರೂ **"ತಿರುಮಲೇಶನ ಯುಗಾದಿ ಆಸ್ಥಾನ "** ಅನ್ನು ಓದಿ ಮನನ ಮಾಡಿಕೊಂಡರೆ ಸಾಕು. ಪ್ರತಿಯೊಬ್ಬ ಭಕ್ತನು ತನ್ನ ಮನೋನೇತ್ರದ ಮೂಲಕ ದರ್ಶಿಸಬಹುದು.

### ಏಕಾಂತವಾಗಿ ನೆರವೇರಿಸುವ ತಿರುಮಂಜನ

ಯುಗಾದಿಯ ಹಬ್ಬದಂದು ಶ್ರೀಹರಿಯ ಆಲಯದಲ್ಲಿ ಸುಪ್ರಭಾತ, ತೋಮಾಲ ಸೇವೆ ನಡೆದ ನಂತರ ಉಭಯ ದೇವಿಯರೊಂದಿಗೆ ಶ್ರೀಮಲೆಯಪ್ಪಸ್ವಾಮಿಗೆ, ಶ್ರೀಹರಿಯ ಸೇನಾಧಿಪತಿ ವಿಷ್ವಕ್ಸೇನನಿಗೆ ಏಕಾಂತವಾಗಿ ತಿರುಮಂಜನ (ಅಭಿಷೇಕ) ನಡೆಯುತ್ತದೆ.

ಒಂದು ವೇಳೆ ಯುಗಾದಿ **"ಶುಕ್ರವಾರ"** ದ ದಿನದಂದು ಬಂದರೆ, ಶ್ರೀವೇಂಕಟೇಶ್ವರಸ್ವಾಮಿಯ ಮೂಲಮೂರ್ತಿಗೆ ಮೊದಲು ಶುಕ್ರವಾರ ಅಭಿಷೇಕವು ನಡೆಯುತ್ತದೆ. ಯುಗಾದಿಗೆ ಮೊದಲು ಬರುವ ಶುಕ್ರವಾರ ಅಭಿಷೇಕವಾದ ನಂತರ ಶ್ರೀವೇಂಕಟೇಶ್ವರಸ್ವಾಮಿಯ ಮೂರ್ತಿಯನ್ನು ವಿಶೇಷವಾಗಿ ವಜ್ರಗಳನ್ನು ಹುದುಗಿಸಿದ ಕಿರೀಟ, ಶಂಖ, ಚಕ್ರಗಳು, ವರದ, ಕಟಿಹಸ್ತಗಳ ಕವಚಗಳೊಂದಿಗೆ ಅಲಂಕರಿಸುತ್ತಾರೆ. ಈ ವಿಶೇಷ ಅಲಂಕಾರದೊಂದಿಗೆ ಆನಂದ ನಿಲಯನ ಸೌಂದರ್ಯ ವರ್ಣಿಸಲದಳವಾಗಿರುತ್ತದೆ. ಆ ರೂಪ ಅಪ್ರಮೇಯ! ಅದ್ಭುತ! ಆನಂದಮಯ! ಸರ್ವಾರ್ಥ ಸಿದ್ಧಿಪ್ರದಾಯಕವಾದುದು. ನಂತರ ಆಲಯದಲ್ಲಿ ಶ್ರೀ ವೇಂಕಟೇಶ್ವರ ಸ್ವಾಮಿಗೆ ತುಳಸೀದಳದೊಂದಿಗೆ ಸಹಸ್ರನಾಮಾರ್ಚನೆ, ನೈವೇದ್ಯಗಳನ್ನು ಸಮರ್ಪಿಸಲಾಗುತ್ತದೆ.

### ಉಭಯದೇವಿಯರೊಂದಿಗೆ ಸರ್ವಭೂಪಾಲವಾಹನದಲ್ಲಿ ವಿರಾಜಮಾನವಾಗುವ ಮಲೆಯಪ್ಪಸ್ವಾಮಿ

ಬಂಗಾರದ ಬಾಗಿಲಿನ ಒಳಗೆ ಇರುವ ಘಂಟಾ ಮಂಟಪದಲ್ಲಿ ಬಂಗಾರದ ಸರ್ವಭೂಪಾಲ ವಾಹನದಲ್ಲಿ ಶ್ರೀದೇವಿ ಭೂದೇವಿಯರೊಂದಿಗೆ ಶ್ರೀಮಲೆಯಪ್ಪಸ್ವಾಮಿ

ಯವರನ್ನು ಪೂರ್ವಮುಖವಾಗಿ ಬಂಗಾರದ ಬಾಗಿ ಲಿಗೆ ಎದಿರನಲ್ಲಿರುವ ಗರುಡನಿಗೆ ಅಭಿಮುಖವಾಗಿ ಕೂಡಿಸಿರುತ್ತಾರೆ. ನಂತರ ರೇಷ್ಮೆ ಪೀತಾಂಬರ ದೊಂದಿಗೆ, ವಜ್ರವೈಢೂರ್ಯ ಮರಕತಮಾಣಿ ಕ್ಯಾದಿ ಸರ್ವಾಭರಣದೊಂದಿಗೆ, ವಜ್ರ ಕಿರೀಟ ದೊಂದಿಗೆ ಸುಗಂಧ ಪರಿಮಳಭರಿತವಾದ ಹೂವಿನ ಮಾಲೆಗಳೊಂದಿಗೆ ಶ್ರೀದೇವೀ ಭೂದೇವಿ ಮಲೆಯಪ್ಪ ಸ್ವಾಮಿಯ ಮೂರ್ತಿಗಳನ್ನು ಕಣ್ಣಿಗೆ ಹಬ್ಬವನ್ನುಂಟು ಮಾಡುವಂತೆ ವಿಶೇಷ ರೀತಿಯಲ್ಲಿ ಅಲಂಕರಿಸಿರುತ್ತಾರೆ.

### ಶ್ರೀನಿವಾಸನ ಸೇನಾಧಿಪತಿ

ಶ್ರೀನಿವಾಸನ ಸರ್ವಭೂಪಾಲವಾಹನದ ಪಕ್ಕದಲ್ಲೇ ಮತ್ತೊಂದು ಪೀಠದ ಮೇಲೆ ದಕ್ಷಿಣಾಭಿಮುಖವಾಗಿ ಸೇನಾಧಿ ಪತಿಯಾದ ವಿಷ್ವಕ್ಸೇನನನ್ನು ದಿವ್ಯವಾದ ಆಭರಣಗಳಿಂದ ವಿವಿಧ ರೀತಿಯ ಹೂಮಾಲೆಗಳಿಂದ ಅಲಂಕರಿಸುತ್ತಾರೆ. ಶಿರ ಸ್ತ್ರಾಣವನ್ನು, ಖಡ್ಗವನ್ನು ಧರಿಸಿ ಅತ್ಯಂತ ಭಯಭಕ್ತಿಗಳಿಂದ ಶ್ರೀಸ್ವಾಮಿಯ ಆಜ್ಞೆಯನ್ನು ಶಿರಸಾವಹಿಸುವುದಕ್ಕಾಗಿ ಶ್ರೀನಿ ವಾಸನ ಸೇನಾಧಿಪತಿಯಾದ ವಿಷ್ವಕ್ಸೇನನು ಸಿದ್ಧನಾಗಿ ರುತ್ತಾನೆ.

ನಂತರ, ಆನಂದನಿಲಯದಲ್ಲಿನ ಶ್ರೀವೇಂಕಟೇಶ್ವರ ಸ್ವಾಮಿಯ ಮೂಲವಿಗ್ರಹಕ್ಕೆ ಬಂಗಾರದ ಬಾಗಿಲಿನ ಮುಂದೆ **"ಯುಗಾದಿ ಆಸ್ಥಾನ"** ಕ್ಕೆ ಸಿದ್ಧವಾಗಿರುವ ಶ್ರೀನಿವಾಸನ ಉತ್ಸವ ಮೂರ್ತಿಗೆ ಸೇನಾಧಿಪತಿಗೆ ಕೆಳಗೆ ತಿಳಿಸಿರುವ ರೀತಿಯಲ್ಲಿ ಹಲವು ಭಕ್ಷ್ಯಗಳನ್ನು ನೈವೇದ್ಯ ಮಾಡುತ್ತಾರೆ.

### ವಿಶೇಷಕರವಾದ ಭಕ್ಷ್ಯಗಳ ನೈವೇದ್ಯ

ಶ್ರೀನಿವಾಸನ ಅರ್ಚಕರು, ದೊಡ್ಡ ಜಿಯ್ಯಂಗಾರರು, ಚಿಕ್ಕ ಜಿಯ್ಯಂಗಾರರು, ಏಕಾಂಗಿಗಳು, ಆಚಾರ್ಯಪುರುಷರು, ವೇದ ಪಂಡಿತರು, ದೇವಸ್ಥಾನದ ಕಾರ್ಯನಿರ್ವಹಣಾಧಿ ಕಾರಿಗಳು, ಇತರ ಅಧಿಕಾರಿಗಳು, ದೇವಸ್ಥಾನದ ಧರ್ಮ ಕರ್ತರ ಮಂಡಲಿಯ ಅಧ್ಯಕ್ಷರು, ಸದಸ್ಯರು, ದೇವಸ್ಥಾನದ ಆಲಯ ಪೇಷ್ಕಾರರು, ಆಲಯದ ಸಿಬ್ಬಂದಿವರ್ಗದವರು, ಹೀಗೆ ಎಲ್ಲರೂ ಛತ್ರಚಾಮರಗಳೊಂದಿಗೆ ಮಂಗಳವಾದ್ಯಗಳು ಮೊಳಗುತ್ತಿರುವಾಗ, ವೇದಪಠನೆಯ ಶ್ರುತಿಗೆ ಅನುಸಾರವಾಗಿ ನಡೆಯುತ್ತಿರುವಾಗ ಶ್ರೀನಿವಾಸನಿಗೆ ಅರ್ಪಿಸುವ ವಿವಿಧ ರೀತಿಯ ಭಕ್ಷ್ಯ ಭೋಜ್ಯಗಳನ್ನು ಸಿದ್ಧ ಪಡಿಸುವ ಅಡುಗೆ ಯವರು ಅವುಗಳನ್ನು ಮೆರವಣಿಗೆಯಲ್ಲಿ ತರುತ್ತಾರೆ.

ಲಾಡು, ವಡೆ, ಅತಿರಸ, ದೋಸೆಗಳು, ಮೊದಲಾದ ಭಕ್ಷ್ಯಗಳು ಸಕ್ಕರೆ ಪೊಂಗಲ್, ಕಾಳುಮೆಣಸಿನ ಪೊಂಗಲ್, ಪುಳಿಯೋಗರೆ, ಮೊಸರನ್ನ ಮೊದಲಾದ ಅನ್ನಪ್ರಸಾದಗಳನ್ನು ವಿಮಾನ ಪ್ರದಕ್ಷಿಣೆಯ ಮಾರ್ಗದಲ್ಲಿರುವ ಬಂಗಾರದ ಬಾವಿಯ ಪಕ್ಕದಲ್ಲಿರುವ ಅಡುಗೆಯ ಮನೆಯಿಂದ ಮೆರವಣಿಗೆಯಲ್ಲಿ ವಿಮಾನ ಪ್ರದಕ್ಷಿಣೆಯನ್ನು ಮಾಡುತ್ತಾ ಬೆಳ್ಳಿಯ ಬಾಗಿಲಿನ ಎದಿರಿ ನಲ್ಲಿರುವ ಧ್ವಜಸ್ತಂಭಕ್ಕೆ ಪ್ರದಕ್ಷಿಣೆಯನ್ನು ಮಾಡಿ ಒಳಗೆ ಬಂದು, ಆಲಯದ ಪ್ರವೇಶಮಾಡಿ, ಅತ್ತ ಗರ್ಭಾಲ ಯದಲ್ಲೂ, ಇತ್ತ ಬಂಗಾರದ ಬಾಗಿಲಿನ ಬಳಿಯ ಆಸ್ಥಾನದಲ್ಲಿ ನೈವೇದ್ಯ ಮಾಡುತ್ತಾರೆ. ನೈವೇದ್ಯದ ಘಂಟೆಗಳು ಸುಮಧುರವಾಗಿ, ಕಿವಿಗಿಂಪಾಗಿ, ಮೊಳಗು ತ್ತಿರುವಾಗ ಎರಡು ಕಡೆಗಳಲ್ಲಿ ಈ ವಿಶೇಷವಾದ ನೈವೇದ್ಯ ಗಳು ನಡೆಯುತ್ತವೆ.

ಹೀಗೆ ಎರಡೂ ಕಡೆಗಳಲ್ಲಿ ವಿಶೇಷವಾದ ನೈವೇದ್ಯ ನಡೆದ ನಂತರ ಮತ್ತೊಂದು ವಿಶೇಷವಾದ ಸೇವೆ ನಡೆಯುತ್ತದೆ. ಅದೇ ವಸ್ತ್ರಗಳ ಸಮರ್ಪಣೆ.

### ರೇಷ್ಮೆ ವಸ್ತ್ರಗಳ ಸಮರ್ಪಣೆ

ನೈವೇದ್ಯಗಳು ಪೂರ್ತಿಯಾದ ನಂತರ ವಿಮಾನ ಪ್ರದಕ್ಷಿಣೆ ಯಲ್ಲಿ ಈಶಾನ್ಯಮೂಲೆಯಲ್ಲಿ ಶ್ರೀಯೋಗನರ ಸಿಂಹಸ್ವಾಮಿಯ ಆಲಯದ ಪಕ್ಕದಲ್ಲಿ ಇರುವ ಪರಿಮಳದ ಕಟ್ಟೆಯ ಬಳಿಯಿಂದ ಶ್ರೀಶ್ರೀಶ್ರೀ ದೊಡ್ಡ ಜಿಯ್ಯಂಗಾರರು ಒಂದು ದೊಡ್ಡ ಬೆಳ್ಳಿಯ ತಟ್ಟೆ ಯಲ್ಲಿ ಬಂಗಾರದ ಜರಿಅಂಚು ಇರುವ ಆರು ದೊಡ್ಡ ರೇಷ್ಮೆಯ ವಸ್ತ್ರಗಳನ್ನು ತಲೆಯ ಮೇಲೆ ಇರಿಸಿಕೊಂಡು ಛತ್ರ, ಚಾಮರ, ಮಂಗಳವಾದ್ಯಗಳ ಸಹಿತವಾಗಿ ಮೊದಲು ಪಂಚಮುಖ ದೀವಟಿಗೆಗಳು ಬೆಳಗುತ್ತಾ, ಚಿಕ್ಕ ಡೋಲು ಬಾರಿಸುತ್ತಿರುವಾಗ, ಕಂಚಿನ ಘಂಟೆಗಳು ಮೊಳಗುತ್ತಿರುವಾಗ, ವೇದಪಾರಾಯಣ ದಾರರು ಇಂಪಾಗಿ ಪಠನೆಯನ್ನು ಮಾಡುತ್ತಿರುವಾಗ ಇವೆಲ್ಲ ವನ್ನೂ ಭಗವಂತನಿಗೆ ಸಮರ್ಪಿಸುತ್ತಾರೆ. ಅವರೆಲ್ಲರ ಹಿಂದೆ ಶ್ರೀಶ್ರೀಶ್ರೀ ಚಿನ್ನ ಜಿಯ್ಯಂಗಾರರು, ಏಕಾಂಗಿಗಳು, ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿಗಳು, ಸಂಯುಕ್ತ ಕಾರ್ಯನಿರ್ವ ಹಣಾಧಿಕಾರಿಗಳು, ದೇವಾಲಯದ ಉಪಕಾರ್ಯನಿರ್ವ ಹಣಾಧಿಕಾರಿಗಳು, ಪೇಷ್ಕಾರರು, ಪಾರುಪತ್ತೆದಾರರು, ಮೊದ ಲಾದ ಆಲಯದ ಅಧಿಕಾರ ಬೃಂದದವರು ಬರುತ್ತಾರೆ. ನಂತರ ದೇವಾಲಯದ ಬೆಳ್ಳಿ ಬಾಗಿಲ ಮುಂದೆ ಇರುವ ಬಂಗಾರ ಧ್ವಜ ಸ್ತಂಭಕ್ಕೆ ಬಲಿಪೀಠಕ್ಕೆ ಪ್ರದಕ್ಷಿಣೆಯನ್ನು ಮಾಡುತ್ತಾ ಒಳಗೆ ಪ್ರವೇಶಿಸಿ ವಿಮಾನ ಪ್ರದಕ್ಷಿಣೆಯನ್ನು ಮಾಡಿ ಬಂಗಾರದ ಬಾಗಿ ಲಿನ ಬಳಿಗೆ ಬರುತ್ತಾರೆ.

ಅಲ್ಲಿ ಮಂಗಳವಾದ್ಯಗಳು ಮೊಳಗುತ್ತಿರುತ್ತವೆ. ಆಗ **'ಸನ್ನಿಧಿಗೊಲ್ಲ'** ನು ದೀವಟಿಗೆಯೊಂದಿಗೆ ರೇಷ್ಮೆಯ ವಸ್ತ್ರಗಳನ್ನು ತಂದಿದ್ದ ಜಿಯ್ಯಂಗಾರರು ಮೊದಲಾದ ಹಿರಿಯರನ್ನು ಶ್ರೀನಿ ವಾಸನ ಸನ್ನಿಧಿಯವರೆಗೂ ಕರೆದೊಯ್ದು ಕುಲಶೇಖರ ಪಡಿಯ ಬಳಿ ನಿಲ್ಲಿಸುತ್ತಾನೆ. ಶ್ರೀ ಜಿಯ್ಯಂಗಾರರು, ಏಕಾಂಗಿಗಳು ಮಾತ್ರ ಅರ್ಚಕ ಸ್ವಾಮಿಗಳಿಗೆ ಈ ಕಾಣಿಕೆಗಳನ್ನು ಸಮರ್ಪಿಸುತ್ತಾರೆ. ಕೂಡಲೇ ಅರ್ಚಕರು ಕುಲಶೇಖರಪಡಿ (ಗರ್ಭ ಗುಡಿಯ ಹೊಸ್ತಿಲು) ಬಳಿ ಇರುವ ತೆರೆಯನ್ನು ಮುಚ್ಚುತ್ತಾರೆ. ಮೂಲ ವಿಗ್ರಹದ ಬಳಿ ಇರುವ ಅರ್ಚಕರು, ಜಿಯ್ಯಂಗಾರರು ಸಮ ರ್ಪಿಸಿದ ಆರು ರೇಷ್ಮೆಯ ವಸ್ತ್ರಗಳಲ್ಲಿ ನಾಲ್ಕು ವಸ್ತ್ರಗಳನ್ನು

ಶ್ರೀವೇಂಕಟೇಶ್ವರ ಸ್ವಾಮಿಗೆ ಅಲಂಕರಿಸುತ್ತಾರೆ. ಒಂದು ವಸ್ತ್ರವನ್ನು ಶ್ರೀನಿವಾಸನ ಕಿರೀಟಕ್ಕೆ ಎರಡನೆಯ ವಸ್ತ್ರವನ್ನು ನಂದಕ ಖಡ್ಗಕ್ಕೆ ಮೂರನೆಯ ವಸ್ತ್ರವನ್ನು ಆದಿತೋಮಾಲೆಯಾಗಿ, ನಾಲ್ಕನೆಯ ವಸ್ತ್ರವನ್ನು ಉತ್ತರೀಯದಂತೆ ಅಲಂಕರಿಸುತ್ತಾರೆ. ನಂತರ ಅರ್ಚಕರು, ಆ ತೆರೆಯನ್ನು ಸರಿಸಿ ಶ್ರೀವೇಂಕಟೇಶ್ವರ ಸ್ವಾಮಿಯ ದಿವ್ಯ ಮಂಗಳವಿರಾಟಾ ಮೂರ್ತಿಗೆ ಬಂಗಾರದ ಹರಿವಾಣ ದಲ್ಲಿ ಪಚ್ಚಕರ್ಪೂರದಿಂದ ಆಪಾದಮಸ್ತಕವಾಗಿ ದಿವ್ಯ ಮಂಗಳ ಕರ್ಪೂರ ನೀರಾಜನವನ್ನು ಸಮರ್ಪಿಸಿ ಎಲ್ಲರಿಗೂ ತೋರಿಸುತ್ತಾರೆ. ಕುಲಶೇಖರಪಡಿಯ ಹೊರಗೆ ನಿಂತವರೆಲ್ಲರೂ ಭಕ್ತಿ ಭಾವದಿಂದ ಶ್ರೀನಿವಾಸನ ಆರತಿಯನ್ನು ಕಣ್ಣಿಗೆ ಒತ್ತಿಕೊಳ್ಳುತ್ತಾರೆ. ನಂತರ

**ಚಂದನ, ತೀರ್ಥ, ಶಠಾರಿ, ಸ್ವೀಕಾರ**

ಮೊದಲು ಅರ್ಚಕರು ತಾವು ಚಂದನ ತೀರ್ಥ, ಶಠಾರಿಗಳನ್ನು ಸ್ವೀಕರಿಸಿದ ನಂತರ ಹೊರಗೆ ಸಾಲಾಗಿ ನಿಂತಿರುವ ದೊಡ್ಡಜಿಯ್ಯಂಗಾರರು, ಚಿಕ್ಕಜಿಯ್ಯಂಗಾರರು, ಏಕಾಂಗಿ, ಆಚಾರ್ಯ ಪುರುಷರು, ತಾಳ್ಳಪಾಕದವರಿಗೆ ತೀರ್ಥ, ಶಠಾರಿ ಚಂದನ, ತಾಂಬೂಲಗಳನ್ನು ನೀಡುತ್ತಾರೆ. ನಂತರ ದೇವಾಲಯದ ಕಾರ್ಯನಿರ್ವಹಣಾಧಿಕಾರಿಗಳಿಗೆ, ಇನ್ನಿತರ ಅಧಿಕಾರಿಗಳಿಗೆ ಮೇಲಿನ ರೀತಿಯಲ್ಲೇ ತೀರ್ಥ, ಶಠಾರಿ, ಚಂದನಗಳನ್ನು ನೀಡುತ್ತಾರೆ.

**'ಯುಗಾದಿ ಆಸ್ಥಾನ' ದಂದು ಶ್ರೀಹರಿಗೆ ವಸ್ತ್ರ ಸಮರ್ಪಣೆ**

ನಂತರ ಉಳಿದ ಎರಡು ವಸ್ತ್ರಗಳನ್ನು ಇರಿಸಿರುವ ಬೆಳ್ಳಿಯ ತಟ್ಟೆಗಳನ್ನು ದೊಡ್ಡ ಜಿಯ್ಯಂಗಾರರು ತಲೆಯ ಮೇಲೆ ಹೊತ್ತುಕೊಂಡು ಬಂಗಾರದ ಬಾಗಿಲ ಬಳಿ **"ಯುಗಾದಿ ಆಸ್ಥಾನ"**ಕ್ಕೆ ಸಿದ್ಧವಾಗಿರುವ ಶ್ರೀನಿವಾಸನ ಉತ್ಸವಮೂರ್ತಿಗಳಿಗೆ ಸಮರ್ಪಿಸುತ್ತಾರೆ. ಅರ್ಚಕರು ಆ ಎರಡರಲ್ಲಿ ಒಂದು ವಸ್ತ್ರವನ್ನು ಮಲೆಯಪ್ಪಸ್ವಾಮಿಗೆ, ಎರಡನೆಯ ವಸ್ತ್ರವನ್ನು ವಿಷ್ವಕ್ಸೇನರಿಗೆ ಅಲಂಕರಿಸುತ್ತಾರೆ.

**ಶ್ರೀ ಹರಿಗೆ ಅಕ್ಷತಾರೋಹಣ ಸಮರ್ಪಣೆ**

ನಂತರ ಪ್ರಧಾನ ಅರ್ಚಕರು ತಮ್ಮ ತಲೆಗೆ ಶ್ರೀ ಹರಿಯ ಪಾದ ವಸ್ತ್ರವನ್ನು ಸುತ್ತಿಕೊಳ್ಳುತ್ತಾರೆ. ಅದನ್ನು **'ಪರಿವಟ್ಟಂ'** ಎಂದು ಕರೆಯುತ್ತಾರೆ. ಪರಿವಟ್ಟಂ ಕಟ್ಟಿಕೊಂಡ ಅರ್ಚಕರು ಶ್ರೀಮಲೆಯಪ್ಪಸ್ವಾಮಿಯ ಮೇಲೆ ವಿಷ್ವಕ್ಸೇನರ ಮೇಲೆ ಕುಂಕುಮಾಕ್ಷತೆಗಳನ್ನು ಸಮರ್ಪಿಸುತ್ತಾರೆ. ನಂತರ ಸೇನಾಧಿಪತಿಗೆ ಪರಿವಟ್ಟಂ ಕಟ್ಟಿ ಶ್ರೀ ಸ್ವಾಮಿಯ ಪಾದಗಳ ಮೇಲಿರುವ ಅಕ್ಷತೆಗಳನ್ನು ತೆಗೆದು ಕೊಂಡು ವಿಷ್ವಕ್ಸೇನರ ಮೇಲೆ ಹಾಕಿ ಶಠಾರಿ ಮರ್ಯಾದೆಗಳನ್ನು ಮಾಡುತ್ತಾರೆ.

**ಅರ್ಚಕರಿಗೆ ತಂಡುಲದಾನ (ಅಕ್ಕಿ) - ಆನಂದ ನಿಲಯನಿಗೆ ಆಶೀರ್ವಚನ**

ಶ್ರೀವೇಂಕಟೇಶ್ವರ ಸ್ವಾಮಿಯವರು ಅರ್ಚಕರಿಗೆ ತಂಡುಲ ದಾನವನ್ನು ದಕ್ಷಿಣೆ ತಾಂಬೂಲದೊಂದಿಗೆ ನೀಡುತ್ತಾರೆ. ಈ ರೀತಿ ಅಕ್ಕಿಯೊಂದಿಗೆ ದಕ್ಷಿಣೆ, ತಾಂಬೂಲಗಳನ್ನು ಸ್ವೀಕರಿಸಿದ ಅರ್ಚಕರು ಸಾಕ್ಷಾತ್ತು ಆನಂದ ನಿಲಯನನ್ನು **'ನಿತ್ಯೈಶ್ವರ್ಯೋರ್ಭವ'** ಎಂದು ಆಶೀರ್ವದಿಸುತ್ತಾರೆ. ಸಾಕ್ಷಾತ್ತು ಶ್ರೀನಿವಾಸನಿಂದ ದಾನ ತೆಗೆದುಕೊಂಡು ಆ ಸ್ವಾಮಿಯನ್ನೇ **"ಸ್ವಾಮೀ ಶ್ರೀನಿವಾಸಾ! ನಿತ್ಯವೂ ಐಶ್ವರ್ಯ ದೊಂದಿಗೆ ರಾರಾಜಿಸು!"** ಎಂದು ಆಶೀರ್ವದಿಸುವ ಶ್ರೀಹರಿಯ ಅರ್ಚಕರ ಭಾಗ್ಯವು ಎಷ್ಟೆಂದು ವರ್ಣಿಸಲು ಅಸಾಧ್ಯವಲ್ಲವೇ? ಈ ರೀತಿ ಆಶೀರ್ವದಿಸಿದ ಪ್ರಧಾನ ಅರ್ಚಕರಿಗೆ ಮತ್ತೊಂದು ಅರ್ಚಕರು ಪರಿವಟ್ಟಂ ಕಟ್ಟಿ ಶಠಾರಿ ಮರ್ಯಾದೆಗಳನ್ನು ಮಾಡುತ್ತಾರೆ.

**ಯುಗಾದಿ ಆಸ್ಥಾನದಲ್ಲಿ ಪಂಚಾಂಗಶ್ರವಣ**

ಬಂಗಾರದ ಸರ್ವಭೂಪಾಲವಾಹನದಲ್ಲಿ ವಿರಾಜಮಾನನಾಗಿರುವ ಶ್ರೀದೇವಿ ಭೂದೇವಿ ಸಹಿತ ಶ್ರೀ ಮಲೆಯಪ್ಪ ಸ್ವಾಮಿಯ ಪಾದಗಳ ಬಳಿ ಇರಿಸಿರುವ ನೂತನ ಸಂವತ್ಸರದ ಪಂಚಾಂಗವನ್ನು ಶ್ರೀಸ್ವಾಮಿಗೆ ನಮಸ್ಕರಿಸುತ್ತಾ ಅರ್ಚಕರು ಆಸ್ಥಾನ ಸಿದ್ಧಾಂತಿಗೆ ನೀಡುತ್ತಾರೆ.

ಆಸ್ಥಾನ ಸಿದ್ಧಾಂತಿಗಳು, ಶ್ರೀಹರಿಗೆ ಅಂದಿನ ತಿಥಿ, ವಾರ, ನಕ್ಷತ್ರಗಳೊಂದಿಗೆ ನೂತನ ಸಂವತ್ಸರದ ಫಲಗಳನ್ನು, ಲಾಭನಷ್ಟಗಳನ್ನು, ನವಗ್ರಹಗಳ ಸಂಚಾರವನ್ನು ಸಸ್ಯವೃದ್ಧಿ, ಮೊದಲಾದ ವಿಷಯಗಳೊಂದಿಗೆ, 27 ನಕ್ಷತ್ರ ಜಾತಕದವರ ಕಂದಾಯ ಫಲಗಳು, ಆದಾಯವ್ಯಯಗಳನ್ನು, ರಾಜಪೂಜೆ, ಅವಮಾನಗಳು ಎಲ್ಲವನ್ನೂ ಪಂಚಾಂಗಶ್ರವಣದಲ್ಲಿ ತಿಳಿಸುತ್ತಾರೆ. ಹಾಗೇ ಪ್ರತ್ಯೇಕವಾಗಿ, ಸ್ವಾಮೀ! ಅಖಿಲಾಂಡಕೋಟಿ ಬ್ರಹ್ಮಾಂಡನಾಯಕಾ! ಆದಿಮಧ್ಯಾಂತರಹಿತಾ! ಜಗದೇಕ ಸಾರ್ವಭೌಮ! ಶ್ರೀಮತ್‌ರಾಜಾಧಿರಾಜ ಪರಮೇಶ್ವರಾ! ನಿತ್ಯಕಲ್ಯಾಣ ಚಕ್ರವರ್ತೀ! ಶ್ರೀಮದಲಮೇಲ್ಮಂಗಪತೀ! ಶ್ರೀಮದಾನಂದನಿಲಯವಾಸಾ!! ಬಹುಪರಾಕ್! ಬಹುಪರಾಕ್! ಸ್ವಾಮಿ! ನೀನು ಶ್ರೀವೈಕುಂಠವನ್ನು ಬಿಟ್ಟು ಈ ಭೂಲೋಕ ವೈಕುಂಠದಲ್ಲಿ ಅವತರಿಸಿದ ನಕ್ಷತ್ರ, ಅತ್ಯಂತ ಶುಭಪ್ರದವಾದ ಶ್ರವಣ ನಕ್ಷತ್ರ! ಈ ನೂತನ ಸಂವತ್ಸರದಲ್ಲಿ ನೀನು ಮತ್ತಷ್ಟು ಕರುಣಾಕರನಾಗಿ,ಆಪದ್ಬಾಂದವನಾಗಿ, ಭಕ್ತರ ಪಾಪಗಳನ್ನು, ಆರ್ತಿಗಳನ್ನು ಹೋಗಾಲಡಿಸುವೆ. ಸಮಸ್ತ ಕೋರಿಕೆಗಳನ್ನು ನೆರವೇರಿಸುವೆ. ಲೋಕಕಲ್ಯಾಣ ಮಾಡುತ್ತಾ ಸಕಲ ಜೀವರಾಶಿಗಳಿಗೂ ಸಮಸ್ತ ಸಂಪತ್ತನ್ನೂ ಕರುಣಿಸುವೆ. ಶುಭ ಪರಂಪರೆಯನ್ನು ಸುರಿಸುವೆ. ಅದಕ್ಕೇ ಸ್ವಾಮೀ! ಈ ನೂತನ ಸಂವತ್ಸರದಲ್ಲಿ ಲಕ್ಷಾಂತರ ಭಕ್ತರು ನಿನ್ನ ದಿವ್ಯಮಂಗಳ ಸೌಂದರ್ಯ ಮೂರ್ತಿಯ ದರ್ಶನಕ್ಕಾಗಿ ನಿರೀಕ್ಷಿಸುತ್ತಾ ನಿರಂತರವಾಗಿ ತಿರುಮಲೆಗೆ ಬರುತ್ತಾರೆ.

ಶ್ರೀದೇವಿ ಭೂದೇವಿ ಸಹಿತನಾದ ನಿನಗೆ ಉತ್ಸವಗಳು, ಮೆರವಣಿಗೆಗಳು, ಇನ್ನೂ ವೈಭವದಿಂದ ನಿರ್ವಹಿಸುತ್ತಾರೆ. ಭಕ್ತರು ಅಪಾರವಾದ ಕಾಣಿಕೆಗಳನ್ನು ಸಮರ್ಪಿಸುತ್ತಾರೆ. ಇನ್ನು




ನಿನ್ನ ಕಣ್ಸನ್ನೆಯಂತೆ ನಡೆದು ಕೊಳ್ಳುವ ನವಗ್ರಹದೇವತೆಗಳು, ನಿಮ್ಮ ಭಕ್ತರನ್ನು ಕಷ್ಟಕ್ಕೀಡು ಮಾಡದೇ ಸದಾ ಕಾಪಾಡು ತ್ತಾರೆ. ದೇಶವೆಲ್ಲಾ ಸಸ್ಯ ಶ್ಯಾಮಲ ವಾಗಿರುತ್ತದೆ. ಕಾಲಾನುಗುಣಕ್ಕೆ ಸರಿಯಾಗಿ ಅತಿವೃಷ್ಟಿ, ಅನಾ ವೃಷ್ಟಿ ರೋಗಾದಿ ರುಜಿನಗಳ ಭಯವಿದ್ದರೂ ನಿಮ್ಮ ಅನು ಗ್ರಹದಿಂದ ನಿಮ್ಮ ಭಕ್ತರು ಸದಾ ಸುಖದಿಂದ, ಆನಂದದಿಂದ ಜೀವಿಸುತ್ತಾರೆ ಎಂದು ಆಸ್ಥಾನ ಸಿದ್ಧಾಂತಿ ನೂತನ ಪಂಚಾಂಗ ಶ್ರವಣ ಮಾಡುತ್ತಿರುವಾಗ ಮಹಾ ಮಹಿಮನಾದ ಶ್ರೀವೇಂಕ ಟೇಶನು ಸರ್ವಭೂಪಾಲ ವಾಹನದಲ್ಲಿ ತನ್ನ ಕಿವಿಯಾರೇ ಪಂಚಾಂಗವನ್ನು ಕೇಳಿಸಿ ಕೊಳ್ಳುತ್ತಾ ಓರೆಗಣ್ಣಿನಿಂದ ಶ್ರೀದೇವಿ ಭೂದೇವಿಯರನ್ನು ನೋಡುತ್ತಾ, ಕಿರುಮಂದ ಹಾಸದೊಂದಿಗೆ ತಲೆಯಾಡಿ ಸುತ್ತಾ, ಭಕ್ತರೆಲ್ಲರನ್ನೂ ಅರೆಮುಚ್ಚಿದ ಕಣ್ಣುಗಳ ನೋಟದಿಂದ ನೋಡುತ್ತಾ ಆನಂದದಿಂದ ಅನುಗ್ರಹಿಸುತ್ತಾರೆ. ನಂತರ ಆಸ್ಥಾನ ಸಿದ್ಧಾಂತಿ ಶ್ರೀದೇವಿ ಭೂದೇವಿಯರಿಗೆ ಅವರ ನಕ್ಷತ್ರಗಳಾದ ಉತ್ತರಫಲ್ಗುಣಿ, ಮತ್ತು ರೇವತಿ ನಕ್ಷತ್ರಗಳ ಫಲಗಳನ್ನು ತಿಳಿಸಿದ ನಂತರ, ಅಲ್ಲಿರುವ ಕಾರ್ಯನಿರ್ವಹಣಾಧಿಕಾರಿಗಳು, ಸಂಯುಕ್ತಕಾರ್ಯನಿರ್ವಹಣಾಧಿಕಾರಿಗಳು, ಧರ್ಮಕರ್ತರ ಮಂಡಲಿ ಸದಸ್ಯರು, ಅಲ್ಲಿರುವ ಆಲಯ ಅಧಿಕಾರಿಗಳ ನಕ್ಷತ್ರ ಫಲಗಳನ್ನು ತಿಳಿಸುತ್ತಾರೆ. ಈ ರೀತಿ ಪಂಚಾಂಗ ಶ್ರವಣ ಮಾಡಿದ ಆಸ್ಥಾನ ಸಿದ್ಧಾಂತಿಗಳಿಗೆ ಶ್ರೀ ಸ್ವಾಮಿಯ ಅರ್ಚಕರು, ಶ್ರೀಸ್ವಾಮಿಯವರ ಪಾದಗಳ ಮೇಲಿರುವ ಅಕ್ಷತೆಯನ್ನು ಶಿರಸ್ಸಿನ ಮೇಲೆ ಹಾಕಿ ಆಶೀರ್ವದಿಸುತ್ತಾರೆ.

ನಂತರ ಶ್ರೀನಿವಾಸನ ಬೊಕ್ಕಸದ ಗುಮಾಸ್ತರು ಬಂದು ಅತ್ಯಂತ ಭಯಭಕ್ತಿಗಳಿಂದ ಸ್ವಾಮಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ಎದ್ದು ನಿಂತು ಹಿಂದಿನ ದಿನ ಹುಂಡಿಗೆ ಬಂದಿರುವ ಆದಾಯವನ್ನು, ಇತರ ಆದಾಯ ವ್ಯಯಗಳನ್ನು, ಉತ್ಸವ ವಿಶೇಷಗಳನ್ನು, ದೇವಸ್ಥಾನ ಮತ್ತು ತಿ.ತಿ.ದೇ.,ಗೆ ಸಂಬಂಧಿಸಿದ ಇತರ ಆಲಯಗಳಲ್ಲಿ ನಡೆಯುವ ಉತ್ಸವ ವಿಶೇಷಗಳನ್ನು ತಿಳಿಸಿದ ನಂತರ ಶ್ರೀನಿವಾಸನು **"ಚಿತ್ತೈಸಬೇಕು"** ಎನ್ನುತ್ತಾ ಸಾಷ್ಟಾಂಗ ನಮಸ್ಕಾರ ಮಾಡುತ್ತಾರೆ. ನಂತರ ಶಠಾರಿಯನ್ನು ತಲೆಯ ಮೇಲೆ ಇರಿಸಿಕೊಂಡು ಶ್ರೀನಿವಾಸನ ಅನುಗ್ರಹವನ್ನು ಪಡೆಯುತ್ತಾರೆ.ಕೂಡಲೇ ಶ್ರೀದೇವಿ ಭೂದೇವಿ ಸಹಿತ ಶ್ರೀನಿವಾಸನಿಗೆ **"ಆಸ್ಥಾನ ಹರಿವಾಣ"** ಎಂಬ ಬಂಗಾರದ ತಟ್ಟೆಯಲ್ಲಿ ಅರ್ಚಕರು ನವನೀತ ಆರತಿಯನ್ನು ಮಾಡುತ್ತಾರೆ. ನಂತರ ಅರ್ಚಕರು ಆ ಆರತಿಯನ್ನು ಕಾರ್ಯನಿರ್ವಹಣಾಧಿಕಾರಿಗಳಿಗೆ ನೀಡಿದ ನಂತರ ಎಲ್ಲರಿಗೂ ಆ ಆರತಿಯನ್ನು ತೋರಿಸುತ್ತಾರೆ.

ನಂತರ ತಾಳ್ಲಪಾಕ, ತರಿಗೊಂಡ, ಮಹಂತರು, ಮೈಸೂರಿನವರ ಆರತಿಗಳನ್ನು ಪ್ರತ್ಯೇಕವಾಗಿ ಸಮರ್ಪಿಸಲಾಗುತ್ತದೆ. ನಂತರ ಅಲ್ಲಿ ನೆರೆದಿರುವ ಭಕ್ತರೆಲ್ಲರಿಂದ ಒಂದೊಂದು ರೂಪಾಯಿಯನ್ನು ಶೇಖರಿಸಿ ಪ್ರತ್ಯೇಕವಾಗಿ ಎಲ್ಲರ ಪರವಾಗಿ **'ರೂಪಾಯಿ ಆರತಿಯನ್ನು'** ಸಮರ್ಪಿಸುತ್ತಾರೆ. ಈ ರೀತಿ ಶೇಖರಿಸಿದ ರೂಪಾಯಿಗಳನ್ನು ಕಾರ್ಯ ನಿರ್ವಹಣಾ ಧಿಕಾರಿಗಳು ಖಜಾನೆಯಲ್ಲಿ ಜಮೆ ಮಾಡುತ್ತಾರೆ. ಕೊನೆಯದಾಗಿ ಶ್ರೀಮಾನ್ ದೊಡ್ಡ ಜೀಯ್ಯಂಗಾರ್ ಅವರಿಗೆ ನಂತರ ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿಗಳಿಗೆ, ಪರಿವಟ್ಟಂ ಕಟ್ಟಿ ಶಠಾರಿಯನ್ನು ಅನುಗ್ರಹಿಸಿ ನಂತರ ಶ್ರೀನಿವಾಸನ ಪ್ರಸಾದ, ಅಕ್ಷತೆ, ತಾಂಬೂಲ ಸತ್ಕಾರವನ್ನು ಸಂಪ್ರದಾಯದ ಪ್ರಕಾರ ಮಾಡುತ್ತಾರೆ. ಈ ರೀತಿ **"ತಿರುಮಲೇಶನ ಯುಗಾದಿ ಆಸ್ಥಾನ"** ಸಂಭ್ರಮ ಪೂರ್ತಿಯಾಗುತ್ತದೆ.

ಯುಗಾದಿಯ ಹಬ್ಬದಂದು ಪಂಚಾಂಗಶ್ರವಣ ಮಾಡಿದರೆ ಶತ್ರುನಾಶವುಂಟಾಗುತ್ತದೆ. ದುಃಸ್ವಪ್ನಗಳು ಪರಿಹಾರವಾಗುವುವು, ಗಂಗಾಸ್ನಾನದ ಫಲ, ಗೋದಾನ ಫಲವುಂಟಾಗಿ ಆಯುಸ್ಸು ಹೆಚ್ಚುತ್ತದೆ. ಸತ್ಸಂತಾನ ಪ್ರಾಪ್ತಿಯಾಗುತ್ತದೆ. ಅದರಲ್ಲೂ ಇದು ಲೋಕ ಕಲ್ಯಾಣಕ್ಕಾಗಿ ತಿರುಮಲೇಶನು ಆಚರಿಸುತ್ತಿರುವ ಯುಗಾದಿ ಪಂಚಾಂಗಶ್ರವಣ! ಶ್ರೀಹರಿಯ ಆಲಯದಲ್ಲಿ ಯುಗಾದಿಯ ಹಬ್ಬದಂದು ಬೆಳಗಿನ ಸಮಯದಲ್ಲಿ ಬಂಗಾರದ ಬಾಗಿಲಿನ ಮುಂದೆ ಏಕಾಂತವಾಗಿ ನಡೆಯುವ **"ತಿರುಮಲೇಶನ ಯುಗಾದಿ ಆಸ್ಥಾನ"** ಅನ್ನು ನೋಡುವುದಕ್ಕೆ ಆಗಲಿಲ್ಲವೇ ಎಂದು ಅಸಂತೃಪ್ತಿಗೆ ಒಳಗಾಗದೆ ಶ್ರೀನಿವಾಸನನ್ನು ಮನಸಾರೆ ಸ್ಮರಿಸಿ. ಆಗ ಎಲ್ಲರ ಮನೆಗಳೂ ಆನಂದನಿಲಯಗಳೇ ಆಗುತ್ತವೆ. ಎಲ್ಲರ ಮನೆಬಾಗಿಲೂ ಬಂಗಾರದ ಬಾಗಿಲುಗಳೇ! ಎಲ್ಲರ ಮನೆಯಂಗಳವೂ ಘಂಟಾಮಂಟಪಗಳೇ ಆಗುತ್ತವೆ! ಎಲ್ಲರ ಹೃದಯವೂ ಸರ್ವಭೂಪಾಲವಾಹನಗಳೇ! ಆದ್ದರಿಂದ ನಿಮ್ಮ ನಿಮ್ಮ ಹೃದಯದಲ್ಲಿ ಶ್ರೀನಿವಾಸನನ್ನು ಪ್ರತಿಷ್ಠಾಪನೆ ಮಾಡಿಕೊಳ್ಳಿ! ನಿಮ್ಮ ಮನೆಯಲ್ಲಿ, ನಿಮ್ಮ ಹೃದಯದಲ್ಲಿ ನೂತನ ಪಂಚಾಂಗಶ್ರವಣವನ್ನು ಮಾಡಿ, ಆ ಶ್ರೀನಿವಾಸನ ಕರುಣೆಯಿಂದ ಈ ನೂತನ ಸಂವತ್ಸರದಲ್ಲಿ ಎಲ್ಲಾ ಶುಭಗಳನ್ನೂ ಶ್ರೇಯಸ್ಸನ್ನೂ ಸಂಪೂರ್ಣವಾಗಿ ಹೊಂದಿರಿ!

**ಮೂಲ - ಜೆ. ಬಾಲಸುಬ್ರಹ್ಮಣ್ಯ**
**ಅನುವಾದ - ಎಸ್. ವಾದಿರಾಜ್**




# ಶ್ರೀ ಶ್ರೀ ವಾದೀಂದ್ರ ತೀರ್ಥ ಕೃತ "ಗುರುಗುಣ ಸ್ತವನಂ"

-ಎ.ಆರ್. ವಿಠಲಮೂರ್ತಿ
98448 59545

ಶ್ರೀಮಂಚಾಲಮ್ಮನ ಸ್ವ ಕ್ಷೇತ್ರವಾದ ಶ್ರೀಮಂತ್ರಾಲಯದಲ್ಲಿ ಭಕ್ತರು ಒಳಗೆ ಹೋದ ತಕ್ಷಣ ಕಾಣುವುದು ಒಂದು ದೊಡ್ಡ ಬೃಂದಾವನ. ಇದರ ಪಕ್ಕದಲ್ಲೇ ಇನ್ನೊಂದು ಬೃಂದಾವನವಿದೆ. ಇದೇ ಶ್ರೀಶ್ರೀ ವಾದೀಂದ್ರತೀರ್ಥರ ಬೃಂದಾವನ!

ವಂದಾರು ಜನ ಸಂದೋಹ ಮಂದಾರ ತರು ಸನ್ನಿಭಮ್ ।
ವೃಂದಾರಕ ಗುರು ಪ್ರಖ್ಯಂ ವಂದೇ ವಾದೀಂದ್ರ ದೇಶಿಕಮ್ ॥

ಎಂದು ಶ್ರೀ ವಸುಧೇಂದ್ರರು ಭಕ್ತಿಯಿಂದ ಹೊಗಳಿದ್ದಾರೆ.

ಹಾಗಾದರೆ ಈ ವಾದೀಂದ್ರತೀರ್ಥರು ಯಾರು? ಶ್ರೀ ರಾಯರು ತಮ್ಮ ಪಕ್ಕದಲ್ಲಿಯೇ ಏಕೆ ಸ್ಥಳ ಕೊಟ್ಟರು? ಈ ಪ್ರಶ್ನೆಗಳಿಗೆ ಉತ್ತರ ಇಲ್ಲಿದೆ. ಇದೊಂದು ಅದ್ಭುತವಾದ ಪವಾಡವೇ ಸರಿ! **"ಅಗಮ್ಯ ಮಹಿಮಾಲೋಕೇ ರಾಘವೇಂದ್ರೋ ಮಹಾಯಶಾಃ"** ಎಂದು ಶ್ರೀಅಪ್ಪಣ್ಣಾಚಾರ್ಯರು ಹೇಳಿದಂತೆ ಶ್ರೀರಾಯರು ಲೋಕೋಪಕಾರಿಗಳು, ಉದಾರ ಮಹಿಮರು, ಜಾತಿ ಬೇಧವಿಲ್ಲದೆ ಬಂದ ಭಕ್ತರುಗಳನ್ನು ಉದ್ಧಾರ ಮಾಡಿದವರು ಮತ್ತು ಮಾಡುತ್ತಾ ಇರುವರು.

ಶ್ರೀರಾಯರು ತಮ್ಮ ಅವತಾರ ಕಾಲ ಮುಗಿಯುತ್ತಿರುವಾಗ ಅವರ ಕೃಪೆಯಿಂದಲೇ ದನಕಾಯುವ ಯುವಕನೊಬ್ಬ. ನವಾಬನ ಪತ್ರಕ್ಕೆ ಉತ್ತರಿಸಲಾಗದೆ **ರಾ...ಘು...ವೇಂ....ದ್ರ** ಎಂಬ ಅಕ್ಷರಗಳಿಂದ ಶ್ರೀರಾಯರನ್ನು ಸ್ಮರಿಸಿದಾಗ ನವಾಬರ ದಿಗ್ವಿಜಯ ಪತ್ರದ ಸಾರಾಂಶ ಓದಿ, ನವಾಬರ ಆಸ್ಥಾನದಲ್ಲೇ ಮಂತ್ರಿಯಾದವನು. ಅಂತಹ ಮಂತ್ರಿ ವೆಂಕಣ್ಣನೆಂಬುವವನು ರಾಯರ ಪರಮ ಭಕ್ತನಾದ. ಆಗ ರಾಯರು ತಮ್ಮ ಅವತಾರ ಕಾಲ ಸಮೀಪಿಸುತ್ತಿದೆ. ಒಂದು ಬೃಂದಾವನವನ್ನು ಸಿದ್ಧಪಡಿಸಲು ಆಜ್ಞೆ ಮಾಡಿದರು. ದಿವಾನನಾದ ವೆಂಕಣ್ಣ ಬಹು ದುಃಖದಿಂದ ರಾಯರಿಗೆ ಒಂದು ಬೃಂದಾವನವನ್ನು ಸಿದ್ಧಪಡಿಸಿದನು. ರಾಯರು ಆ ಬೃಂದಾವನವನ್ನು ನೋಡಿ ಹಸನ್ಮುಖಿಗಳಾಗಿ ಈ ಬೃಂದಾವನ ಹೀಗೇ ಜೋಪಾನವಾಗಿರಿಸಿ, ಇದು ನನ್ನ ನಂತರ ಐದನೆಯವರಿಗೆ ಬೇಕಾಗುತ್ತದೆ ಎಂದು ಭವಿಷ್ಯವನ್ನು ತಿಳಿಸಿದರು. ದಿವಾನ ವೆಂಕಣ್ಣರಿಗೆ ಆಶ್ಚರ್ಯವಾಗಿ ರಾಯರು ತೋರಿಸಿದ ಮಹಿಮೋಪೇತವಾದ ಒಂದು ದೊಡ್ಡ ಬಂಡೆಯಿಂದ ಶ್ರೀರಾಯರಿಗಾಗಿಯೇ ಬೃಂದಾವನವನ್ನು ನಿರ್ಮಿಸಿದರು. ಈ ಬೃಂದಾವನದ ದೊಡ್ಡ ಬಂಡೆಯ ಮಹಿಮೆ ಹೇಳುತ್ತಾರೆ. ಈ ಬಂಡೆ ಹಿಂದೆ ಕೃತಯುಗದಲ್ಲಿ ಪ್ರಲ್ಹಾದರಾಜರು ಯಾಗ ಮಾಡಿದ ಜಾಗ, ತ್ರೇತಾಯುಗದಲ್ಲಿ ರಾಮನು ಲಕ್ಷ್ಮಣನೊಡನೆ ವಿಶ್ರಮಿಸಿಕೊಂಡ ಬಂಡೆ ! ದ್ವಾಪರಯುಗದಲ್ಲಿ ಶ್ರೀಕೃಷ್ಣನು ಅರ್ಜುನನೊಡನೆ ರಥ ನಡೆಸುವಾಗ ಈ ಬಂಡೆ ಇರುವ ಜಾಗದಲ್ಲೇ ರಥ ನಿಲ್ಲಿಸಿದ್ದು ಎಂಬ ಪವಾಡಗಳನ್ನು ಕೇಳಿ ದಿವಾನ ವೆಂಕಣ್ಣನವರಿಗೆ ಭಕ್ತಿ ಉಕ್ಕಿ ಬಂತು! ಆ ಮಹಿಮೆಗೆಲ್ಲಾ ಕಾರಣ ಈ ಕ್ಷೇತ್ರದೇವತೆಯಾದ ಮಂಚಾಲಮ್ಮ! ಈ ದಿವ್ಯ ಶಕ್ತಿ ದೇವತೆ ಇದ್ದಲ್ಲಿ ಸಕಲ ದೇವತೆಗಳೂ ನೆಲೆಸುತ್ತಾರೆ !

ಸರಿ, ಹಾಗಾದರೆ ಶ್ರೀವಾದೀಂದ್ರರು ಯಾರು ? ಎಂಬ ಪ್ರಶ್ನೆಗೆ ರಾಯರು ಹೇಳಿದಂತೆ ರಾಯರ ನಂತರ ಐದನೆಯವರು ವಾದೀಂದ್ರರು! ರಾಯರ ನಂತರ ಯೋಗಿಂದ್ರತೀರ್ಥರು. ನಂತರ ಸೂರೀಂದ್ರತೀರ್ಥರು, ಶ್ರೀಸುಮತೀಂದ್ರತೀರ್ಥರು, ಶ್ರೀಉಪೇಂದ್ರರು ನಂತರ ಈಗ ಐದನೆಯವರೇ ಶ್ರೀಶ್ರೀವಾದೀಂದ್ರತೀರ್ಥರು.

ರಾಯರ ನಂತರ ಅವರ ಪೂರ್ವಾಶ್ರಮ ಮಕ್ಕಳು - ಮೊಮ್ಮಕ್ಕಳು ಯಾರೂ ವೇದಾಂತ ಪೀಠ ಅಂದರೆ ಶ್ರೀಮನ್‌ಮಧ್ವಾಚಾರ್ಯರ ಪೀಠ ಅಲಂಕರಿಸಲಿಲ್ಲ. ಆದರೆ ರಾಯರ ಮರಿಮಗ (ಪೂರ್ವಾಶ್ರಮದ) ಈಗ ವಾದೀಂದ್ರರಾಗಿ ಅವತಾರ ಮಾಡಿದ್ದಾರೆ. ಶ್ರೀರಾಯರ ಪೂರ್ವಾಶ್ರಮದ ಹೆಸರು ವೆಂಕಟನಾಥ! ವೆಂಕಟಾನಾಥರ ಮಗನೇ ಲಕ್ಷ್ಮೀನಾರಾಯಣಾಚಾರ್ಯ!ಲಕ್ಷ್ಮೀನಾರಾಯಣಾಚಾರ್ಯರಿಗೆ ಪುರುಷೋತ್ತಮಾಚಾರ್ಯ ಎಂಬ ಮಗ ಇದ್ದರು. ಅಂದರೆ ವೆಂಕಟನಾಥರ ಮೊಮ್ಮಗ ! ಪುರುಷೋತ್ತಮಾಚಾರ್ಯರಿಗೆ ಶ್ರೀನಿವಾಸಾಚಾರ್ಯ ಮತ್ತು ವೇಣುಗೋಪಾಲಚಾರ್ಯ ಎಂದು ಇಬ್ಬರು ಗಂಡು ಮಕ್ಕಳಿದ್ದರು. ಹಿರಿಯ ಮಗ ಶ್ರೀನಿವಾಸಚಾರ್ಯರೇ ಶ್ರೀವಾದೀಂದ್ರ ತೀರ್ಥರಾಗಿ ತಾವು ಅತೀ ಚಿಕ್ಕ ವಯಸ್ಸಿನಲ್ಲಿ ಕಂಡ ಶ್ರೀರಾಯರನ್ನು ಸ್ತೋತ್ರ ಮಾಡಲು **"ಗುರುಗುಣ ಸ್ತವನಮ್"** ಎಂಬ ದೊಡ್ಡ ಗ್ರಂಥವನ್ನು ಖಂಡ ಕಾವ್ಯವನ್ನು ರಚಿಸಿದ್ದಾರೆ.

ಶ್ರೀನಿವಾಸಾಚಾರ್ಯರು ಬಾಲ್ಯದಲ್ಲಿ ಶ್ರೀಸುಮತೀಂದ್ರ ತೀರ್ಥರಲ್ಲಿ ಕಾವ್ಯ-ನಾಟಕ-ಅಲಂಕಾರ ಇತ್ಯಾದಿ ಸಂಸ್ಕೃತ ಸಾಹಿತ್ಯ ಗ್ರಂಥಗಳನ್ನು ಅಧ್ಯಯನ ಮಾಡಿ, ಶ್ರೀಸುಮತೀಂದ್ರ ಬೃಂದಾವನ ಪ್ರವೇಶ ನಂತರ ಶ್ರೀಉಪೇಂದ್ರತೀರ್ಥರಲ್ಲಿ ನ್ಯಾಯ-ವೇದಾಂತ-ಬ್ರಹ್ಮಮೀಮಾಂಸ ಇತ್ಯಾದಿ ಗ್ರಂಥಗಳನ್ನು ಸಹ ಅಧ್ಯಯನ ಮಾಡಿದ್ದರು. ಅಷ್ಟರಲ್ಲಿ ಇತರೆ ಪಂಡಿತನೊಬ್ಬ ಶ್ರೀಮಧ್ವಾ ಚಾರ್ಯರ ಭಾಷ್ಯಕ್ಕೆ ದೂಷಣ ಗ್ರಂಥವೊಂದನ್ನು ರಚಿಸಿದ್ದನು. ಈ ಗ್ರಂಥವನ್ನು ಶ್ರೀನಿವಾಸಾಚಾರ್ಯರು



ಶ್ರೀವಾದೀಂದ್ರತೀರ್ಥರ ಮೂಲ ಬೃಂದಾವನ, ಮಂತ್ರಾಲಯ

ಸಂಪೂರ್ಣ ಅಧ್ಯಯನ ಮಾಡಿ ಆ ಗ್ರಂಥಕ್ಕೆ ಖಂಡನೆ ಪೂರ್ವಕವಾಗಿ "ನವ್ಯ ದುರುಕ್ತಿ ಶಿಕ್ಷಾ" ಎಂಬ ಶ್ರೇಷ್ಠ ಗ್ರಂಥವೊಂದನ್ನು ಖಂಡನಾ ರೂಪದಲ್ಲಿ ಬರೆದು ಅದನ್ನು ಶ್ರೀಉಪೇಂದ್ರ ತೀರ್ಥರಲ್ಲಿ ಅರ್ಪಿಸಿ ಶ್ರೀಉಪೇಂದ್ರ ತೀರ್ಥರ ಕೃಪಾಕಟಾಕ್ಷಕ್ಕೆ ಪಾತ್ರರಾಗಿದ್ದರು. ಶ್ರೀಉಪೇಂದ್ರರು ತಮ್ಮ ಅವತಾರ ಕಾಲ ಸಮಾಪ್ತಿಯಾಗುತ್ತಾ ಬರಲು ಶ್ರೀನಿವಾಸಾಚಾರ್ಯರನ್ನು ಕರೆದು ಕ್ರಿ.ಶ. 1728 ರ ಪ್ಲವಂಗ ಸಂವತ್ಸರದ ಮಾರ್ಗಶಿರ ಕೃಷ್ಣಪಕ್ಷ ಅಷ್ಟಮಿಯಂದು ಇದೇ ಶ್ರೀನಿವಾಸಾಚಾರ್ಯರಿಗೆ ಶ್ರೀಶ್ರೀವಾದೀಂದ್ರತೀರ್ಥರು ಎಂದು ನಾಮಕರಣ ಮಾಡಿ ಸನ್ಯಾಸಾಶ್ರಮವಿತ್ತರು.

ಹೀಗೆ ಆಶ್ರಮ ಪಡೆದ ಶ್ರೀರಾಯರ ಪೂರ್ವಾಶ್ರಮದ ಮರಿಮಗ ಶ್ರೀ ವಾದೀಂದ್ರರಾಗಿ 22 ವರ್ಷಗಳ ಕಾಲ ವೇದಾಂತ ಸಾಮ್ರಾಜ್ಯವನ್ನು ಆಳಿದರು. ಶ್ರೀವ್ಯಾಸ-ದಾಸ-ಗ್ರಂಥಗಳಿಗೂ ಮನ್ನಣೆ ಇತ್ತು ಸಕಲರನ್ನು ಸನ್ಮಾನಿಸುತ್ತಾ ರಾಜ ಮಹಾರಾಜರುಗಳಿಂದಲೂ ಸನ್ಮಾನಿತರಾಗಿದ್ದರು. ಶ್ರೀವಿಜಯ ದಾಸರೇ ಮೊದಲಾದ ಶ್ರೇಷ್ಠ ದಾಸರುಗಳು ಶ್ರೀಶ್ರೀವಾದೀಂದ್ರ ತೀರ್ಥರಲ್ಲಿ ಅಧ್ಯಯನ ಮಾಡಿದ್ದರು. ಇವರ ಶ್ರೇಷ್ಠ ಕೃತಿಗಳೆಂದರೆ : ನವ್ಯದುರಕ್ತಿ ಶಿಕ್ಷಾ, ತತ್ವ ಪ್ರಕಾಶಿಕಾ ಟಿಪ್ಪಣಿ, (ಮೀಮಾಂಸ ದರ್ಪಣ) ತತ್ತ್ವೋದ್ಯೋತ ಟಿಪ್ಪಣಿ, ಭೂಗೋಳ ಖಗೋಳ ವಿಚಾರ, ಶ್ರೀರಾಘವೇಂದ್ರ ಮತ ಗತಾರ್ಚಾಗತಿಕ್ರಮ, ಶ್ರೀಗುರುಗುಣಸ್ತವನಮ್ ಹೀಗೆ ಗ್ರಂಥಗಳನ್ನು ರಚಿಸಿದ್ದಾರೆ.

ಶ್ರೀವಾದೀಂದ್ರರು ತಾವು ರಚಿಸಿದ ಗುರುಗುಣಸ್ತವನಮ್ ಎಂಬ ಶ್ರೇಷ್ಠ ಕೃತಿ ರಚಿಸಿ ಶ್ರೀರಾಯರ ಬೃಂದಾವನದ ಮುಂದೆ ನಿಂತು ಭಕ್ತಿಯಿಂದ ಪಠಿಸಿ ಸಮರ್ಪಿಸಿದಾಗ ಶ್ರೀರಾಯರ ಬೃಂದಾವನವೇ ತಲೆ ಆಡಿಸಿದಂತೆ ಡೋಲಾಯಮಾನವಾಗಿ ಶ್ರೀರಾಯರು ಈ ರೀತಿ ತಲೆ ಆಡಿಸಿ ತಮ್ಮ ಸಂತೋಷವನ್ನು ಸಮ್ಮತಿಸಿದಾಗ ಪುಷ್ಪಗಳು ತುಳಸಿಗಳು ಶ್ರೀಗುರುಗುಣಸ್ತವನದ ಮೇಲೆ ಬಿದ್ದವಂತೆ ! ಅಂದು ಅಕ್ಷಯತೃತೀಯ ಹಬ್ಬವಾಗಿದ್ದರಿಂದ ಶ್ರೀ ರಾಯರಿಗೆ ಶ್ರೇಷ್ಠ ಆಭರಣ ಕಾಣಿಕೆಯಾಯಿತಂತೆ, ಆದ್ದರಿಂದ ಭಕ್ತಮಹಾಶಯರು ಶ್ರೀ ಗುರುಗುಣಸ್ತವನವನ್ನು ಯಾರು ಬೇಕಾದರೂ ಭಕ್ತಿಯಿಂದ ಶುಚಿರ್ಭೂತರಾಗಿ ಪಾರಾಯಣ ಮಾಡಿದರೆ ಶ್ರೀರಾಯರು ಪ್ರಸನ್ನರಾಗುವುದರಲ್ಲಿ ಸಂದೇಹವೇ ಇಲ್ಲ.

ಶ್ರೀ ಗುರುಗುಣಸ್ತವನದಲ್ಲಿ ಒಟ್ಟು 35 ಶ್ಲೋಕಗಳಿವೆ. ಆದಿ ಅಂತ್ಯ ಶ್ಲೋಕಗಳನ್ನು ಮಾತ್ರ ಬರೆಯುತ್ತಿದ್ದೇನೆ. ಏಕೆಂದರೆ ಗ್ರಂಥಬಾಹುಲ್ಯದ ಭೀತಿ ! ಓದುಗರಿಗೆ ಸ್ವಲ್ಪ ವಿಶ್ರಾಂತಿ ಕೊಟ್ಟು ಓದಿಸಬೇಕು. ಆರಂಭದ ಶ್ಲೋಕ.

ಉನ್ಮೀಲ ನೀಲ ನೀರೇ ರುಹ ನಿವಹ ಮಹಃ ಪುಷ್ಟಿಮುಷ್ಟಿಂಥಯಿ
ಶ್ರೀ ಶ್ರೀ ಭೂದುರ್ಗಾದೃಗಂತ ಪ್ರಚಯ ಪರಿಚಯೋದಾರಕಿರ್ಮೀರ ಭಾವಃ।
ಸ್ವೈರ ಕ್ಷೀರೋದ ನಿರ್ಯಚ್ಛಶಿರುಚಿಶಿ ನಿಚಯೋಳಿಖರ್ವಗರ್ವಾಪನೋದೀ
ಪಾತು ಶ್ರೀ ನೇತುರಸ್ಮಾನ್ ಸಪದಿ ಬುಧಜನತ್ರಾಣದಕ್ಷಃ ಕಟಾಕ್ಷಃ॥

**ಅರ್ಥ:** ಅರಳುತ್ತಿರುವ ನೀಲಕಮಲ ಸಮೂಹಗಳ ಸೌಂದರ್ಯ ಕಾಂತಿಗಿಂತಲೂ ಶ್ರೀದೇವಿ ಭೂದೇವಿ ಮತ್ತು ದುರ್ಗಾದೇವಿಯರ ಕಡೆಗಣ್ಣನೋಟದ ಸೌಂದರ್ಯ ಕಾಂತಿ ಹಾಗೂ ಕ್ಷೀರಸಾಗರದಿಂದ ಹೊರ ಹೊಮ್ಮುತ್ತಿರುವ ಪೂರ್ಣಚಂದ್ರನ ಕಾಂತಿಗಳಿಗಿಂತಲೂ, ಸುರಭೂಸುರರನ್ನು ರಕ್ಷಿಸುವ ಶ್ರೀಪತಿಯ ಕಾಂತಿಯ ಕಟಾಕ್ಷವೇ ಶ್ರೇಷ್ಠ ! ಇಂತಹ ಕಟಾಕ್ಷವೇ ನಮ್ಮನ್ನು ರಕ್ಷಿಸಲಿ

**ಅಂತ್ಯ ಶ್ಲೋಕ :**

ವ್ಯಾಸೇನ ವ್ಯೃಪ್ತ ಬೀಜ ಃ ಶ್ರುತಿ ಭುವಿ
ಭಗವತ್ಪಾದಲಬ್ಧಾಂಕುರ ಶ್ರೀ
ಪ್ರತ್ಯೈರೀಷತ್ಪ್ರಭಿನೋಽಜನಿ
ಜಯಮುನಿನಾಸಮ್ಯಗುದ್ಭಿನ್ನ ಶಾಖಃ !
ವತಾನೀಶ ವ್ಯಾಸರಾಜಾದುದಿತಕಿಸಲಯ
ಪುಷ್ಟಿತೋ ಯಂ ಜಯೀಂದ್ರಾತ್ ಅದ್ಯ
ಶ್ರೀ ರಾಘವೇಂದ್ರಾ ದ್ವಿಲಸತ್ ಫಲಿತೋ ಮಧ್ವ ಸಿದ್ಧಾಂತ ಶಾಖೀ ॥

**ಅರ್ಥ :** ವೇದವೆಂಬ ಭೂಮಿಯಲ್ಲಿ ಶ್ರೀ ವೇದವ್ಯಾಸರಿಂದ ಬಿತ್ತಲ್ಪಟ್ಟ ಶ್ರೀ ಹರಿ ಸರ್ವೋತ್ತಮವೆಂಬ ಬೀಜವುಳ್ಳ, ಆ ಬೀಜವನ್ನು ಶ್ರೀಮದಾನಂದತೀರ್ಥ ಭಗವತ್ಪಾದರು ಅಂಕುರ (ಚಿಗುರಿಸಿದರು). ನಂತರ ಶ್ರೀ ಪದ್ಮನಾಭ ತೀರ್ಥರು ಶ್ರೀನರಹರಿತೀರ್ಥರು, ಶ್ರೀಮಾಧವತೀರ್ಥರು ಭಗವತ್ಪಾದರು ಅಂಕುರ (ಚಿಗುರಿಸಿದರು) ನಂತರ ಶ್ರೀಪದ್ಮನಾಭ ತೀರ್ಥರು, ಶ್ರೀನರಹರಿತೀರ್ಥರು, ಶ್ರೀಮಾಧವತೀರ್ಥರು, ಶ್ರೀಅಕ್ಷೋಭ್ಯತೀರ್ಥರು ಹೀಗೆ ಪ್ರಾಚೀನರಿಂದ ಚಿಗುರಿದ ಬೀಜವು ವೇದಭೂಮಿಯಲ್ಲಿ ಮೊಳಕೆಯೊಡೆ ಯಿತು. ನಂತರ ಶ್ರೀಜಯತೀರ್ಥರಿಂದ ಹೂವುಗಳು ಬೆಳೆದು ಬಂದವು. ಹೀಗೆ ಶ್ರೀಮಧ್ವ ಸಿದ್ಧಾಂತ

ವೆಂಬ ಕಲ್ಪವೃಕ್ಷವು ಈಗ ಶ್ರೀರಾಘವೇಂದ್ರ ತೀರ್ಥರಿಂದ ಫಲಭರಿತವಾಗಿ ಈ ಭೂಲೋಕದಲ್ಲಿ ಸಜ್ಜನರಿಗೆ ಆಶ್ರಯವಾಗಿ ಬೆಳೆದು ನಿಂತಿದೆ. ಈ ಶ್ಲೋಕದಲ್ಲಿ ಶ್ರೀವೇದವ್ಯಾಸರಿಂದ ಬಿತ್ತಲ್ಪಟ್ಟ ಮಧ್ವ ಮತವೆಂಬ ಬೀಜವು ಬೆಳೆದು ಕಲ್ಪವೃಕ್ಷದಂತೆ ನಿಂತು ಶ್ರೀರಾಯರಿಂದ ಫಲಭರಿತವಾಗಿ ಶೋಭಿಸುತ್ತಾ ಇದೆ ಎಂದು ಶ್ರೀವಾದೀಂದ್ರರು ಶ್ರೀರಾಯರ ಹಿಂದಿನ ಗುರುಗಳನ್ನೆಲ್ಲಾ ಸುಂದರವಾಗಿ ಚಿತ್ರಿಸಿ ವರ್ಣಿಸಿದ್ದಾರೆ.

ಇಂತಹ ಪರಮ ಶ್ರೇಷ್ಠ ಕೃತಿ ಶ್ರೀವಾದೀಂದ್ರರು ಶ್ರೀರಾಯರಿಗೆ ಅರ್ಪಿಸಿ ಬೇರೆ ಯಾವುದನ್ನೂ ಕೇಳದೆ ಶ್ರೀರಾಯರ ಕೃಪಾಕಟಾಕ್ಷಕ್ಕೆ ಪಾತ್ರರಾಗಿದ್ದಾರೆ.

ಗುರುಗುಣಸ್ತವನದ 35+2=37 ಶ್ಲೋಕಗಳು ವಿಶೇಷ ಹಾಗೂ ವಿಶೇಷಣಗಳಿಂದ ನಯನಮನೋಹರ ಹಾಗೂ ಓದುಗರ ಚಿತ್ತಾಪಹಾರವಾಗಿ (ಜ್ಞಾನ ಭಕ್ತಿ ವೈರಾಗ್ಯಗಳು) ತನಗೆ ತಾನಾಗಿಯೇ ಉಮ್ಮಳಿಸುತ್ತವೆ. ಮೂಲ ಗುರುಗಳಾದ ವೇದವ್ಯಾಸರಿಂದ ಪ್ರಾರಂಭಿಸಿ ಶ್ರೀರಾಯರ ಗ್ರಂಥರಚನೆ ಹೇಗೆ ಮಾಡುತ್ತಿದ್ದರು! ಹಾಗೂ ಜ್ಞಾನಾನಂದಾದಿ ಗುಣಗಳು, ಸರ್ವಜ್ಞತ್ವ, ಪ್ರತಿಭಾ, ಲೋಕಕೃಪಾ, ಶೌಚ, ಸಂಪತ್ತು, ತೇಜಸ್ಸು, ಧೈರ್ಯವಾದ ಕೌಶಲ, ಪ್ರೌಢಿಮೆ, ಚಾತುರ್ಯ, ಕಲಾ ನೈಪುಣ್ಯ ಪದಗಳ ಮಾಧುರ್ಯ ವಾಕ್‌ಪಟುತ್ವ, ಕಾಂತಿ ಹೆಚ್ಚಾಗಿ ಭಕ್ತರಲ್ಲಿ ಪ್ರೀತಿ ಅನುಗ್ರಹ ಇವೇ ಮೊದಲಾದ ಗುಣಗಳನ್ನು ಕಾಣುತ್ತೇನೆ. ಶ್ರೀರಾಯರ ಗ್ರಂಥಗಳನ್ನು ಒಂದೊಂದಾಗಿ ಶ್ರೀವಾದೀಂದ್ರರು ವಿವರಿಸಿದ್ದಾರೆ. ಶ್ರೀವಾದೀಂದ್ರರು ತಮ್ಮ ಪರಮ ಗುರುಗಳಾದ ಶ್ರೀಸುಮತೀಂದ್ರ ತೀರ್ಥರ ಅಪಾರ ಜ್ಞಾನ ಹಾಗೂ ಪ್ರತಿಭೆಗಳನ್ನು ಹಾಗೂ ತಮ್ಮ ಗುರು ಗಳಾದ ಶ್ರೀಉಪೇಂದ್ರತೀರ್ಥರ ಹರಿಭಕ್ತಿ, ಗುರುಭಕ್ತಿ ಗುರು ಶುಶ್ರೂಷಾದಿ ಗುಣಗಳನ್ನು ಸಹ ವರ್ಣಿಸಿದ್ದಾರೆ. ಈ ಗುರುಗುಣಸ್ತವನಂ ಶ್ರೀ ವಾದೀಂದ್ರರು ಶ್ರೀರಾಯರಿಗೆ ಭಕ್ತಿಯಿಂದ ಧೀರ ಶ್ರೀರಾಘವೇಂದ್ರ ವ್ರತಿ ವರ ಎಂದು ಸಂಬೋಧಿಸಿ ತಮ್ಮ ಭಕ್ತಿಯ ಆಳವನ್ನು ಓದುಗರಿಗೆ ತೋರಿಸಿ ಕೊಡುತ್ತಾರೆ. ಶ್ರೀವಾದೀಂದ್ರರ ಭಕ್ತಿಯ ಆಳವನ್ನು ಅಳೆಯಲಾಗದು, ಆದರೂ ವಿಪರೀತಿ ಆಳವೆಂದು ಹೇಳಬಹುದು.

**ಗುರುಗುಣಸ್ತವನಕ್ಕೆ ವ್ಯಾಖ್ಯಾನಕಾರರು :** ಶ್ರೀಶ್ರೀ ವಾದೀಂದ್ರತೀರ್ಥರ ರಸಭರಿತ ಖಂಡಕಾವ್ಯ ಗುರುಗುಣಸ್ತವನಕ್ಕೆ ಸಂಸ್ಕೃತದ ಎರಡು ವ್ಯಾಖ್ಯಾನಗಳು. ಒಬ್ಬರು ಸನ್ಯಾಸಿಗಳೂ ಆದ ಶ್ರೀ ಶ್ರೀವಸುಧೇಂದ್ರತೀರ್ಥರು. ಇನ್ನೊಬ್ಬರು ಶ್ರೀವಾದೀಂದ್ರರ ಪೂರ್ವಾಶ್ರಮದ ಮಗ ಶ್ರೀಜಯರಾಮಾಚಾರ್ಯರು ಗೃಹಸ್ಥಾಶ್ರಮಿಗಳೂ ಆದರೂ ಇವರಿಬ್ಬರೂ ಶ್ರೀವಾದೀಂದ್ರ ತೀರ್ಥರಿಂದಲೇ ರಸಸ್ವಾದನ ಮಾಡಿದವರು.

ವ್ಯಾಖ್ಯಾನ ಮಾಡಿದ ಫಲವೋ ಎಂಬಂತೆ ಶ್ರೀಜಯರಾಮಾಚಾರ್ಯರೇ ಶ್ರೀಧೀರೇಂದ್ರತೀರ್ಥರಾಗಿ ಅವತಾರ ಮಾಡಿ ಅಧ್ಯಾಪಿ ಹೊಸ ರೀತಿಯಲ್ಲಿ ಬೃಂದಾವನಸ್ಥರಾಗಿ ತಪಗೈಯ್ಯುತ್ತಿದ್ದಾರೆ. ಶ್ರೀವಸುಧೇಂದ್ರರು ಅವತಾರ ಪರಿಸಮಾಪ್ತಿ ಮಾಡಿ ತುಂಗಭದ್ರಾ ತೀರದಲ್ಲಿರುವ **"ಕೆಂಚನ ಗುಡ್ಡ"** ಸ್ಥಳದಲ್ಲಿ ಬೃಂದಾವನಸ್ಥರಾಗಿದ್ದಾರೆ. ಈಗಲೂ ಮಂತ್ರಾಲಯ, ಕೆಂಚನಗುಡ್ಡ, ಹೊಸರಿತ್ತಿಗಳೆಲ್ಲವೂ ಜಾಗೃತ ಸ್ಥಳಗಳಾಗಿರುತ್ತವೆ.

**"ಗುರು"**ಗುಣಸ್ತವನದ ಅರ್ಥ : **"ಗುರು"** ಎಂಬ ಶಬ್ದಕ್ಕೆ ಸುಲಭವಾಗಿ ಹೇಳುವುದಾದರೆ ಗುರಿಯನ್ನು ಮುಟ್ಟಿಸುವನೂ ಗುರು ಎಂದಾಗಿರುತ್ತದೆ. ಶ್ರೀ ಶ್ರೀಧೀರೇಂದ್ರ ತೀರ್ಥರು ಗುರು ಶಬ್ದಕ್ಕೆ ಗುರು ಲಕ್ಷಣ ತಿಳಿಸುತ್ತಾ **"ಗುರುತ್ವಂ ಚಾ ನೇಕದಾ ಸಂಪ್ರದಾಯ ಪ್ರವರ್ತ ಕತ್ವೇನ, ಉಪದೇಶಕತ್ವೇನ,ಅನುಗ್ರಹಕತ್ವೇನೇತಿ"** ಎಂದು ಶ್ರೀರಾಘವೇಂದ್ರ ಸ್ತೋತ್ರ ವ್ಯಾಖ್ಯಾನಕ್ಕೆ ಅರ್ಥ ಹೇಳುತ್ತ ಶಾಸ್ತ್ರ ಪ್ರಭಾವತ್ವ, ಸಂಪ್ರದಾಯ ಪ್ರವರ್ತಕತ್ವ ಉಪದೇಶಿಕತ್ವ ಮತ್ತು ಅನುಗ್ರಹಾಕತ್ವ ಈ 4 ಧರ್ಮಗಳಲ್ಲಿ ಒಂದೊಂದರಿಂದ ಯುಕ್ತನಾದವನೇ ಗುರು ಎಂದಿದ್ದಾರೆ.

ಈ ನಾಲ್ಕರಲ್ಲಿ ಶಾಸ್ತ್ರಪ್ರಭುತ್ವವು ಹೆಚ್ಚು ಮಹತ್ವ ಉಳ್ಳದ್ದಾಗಿರುತ್ತದೆ. ಗುರು, ಪರಮ ಗುರು, ಆದಿಗುರು, ಮೂಲಗುರುಗಳು, ದೇವತಾ ಮತ್ತು ಇಷ್ಟ ದೈವ ಇವರೆಲ್ಲರೂ ಗುರುಗಳಾಗಿದ್ದಾರೆ. ಗುರು ನಮಸ್ಕಾರದಲ್ಲಿ ಈ ದ್ವಾದಶ ಗುರುಗಳ ನಮನವನ್ನು ಹೀಗೂ ಹೇಳಬಹುದು.

1. ಶ್ರೀ ಗುರುಭ್ಯೋನಮಃ 2. ಶ್ರೀಪರಮ ಗುರುಭ್ಯೋನಮಃ! 3. ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ಗುರುಭ್ಯೋನಮಃ! 4. ಶ್ರೀವೇದವ್ಯಾಸಾಯ ನಮಃ 5. ಶ್ರೀ ಭಾರತ್ಯೈನಮಃ 6. ಶ್ರೀ ಸರಸ್ವತ್ಯೈ ನಮಃ 7. ಶ್ರೀ ವಾಯುವೇ ನಮಃ 8. ಶ್ರೀ ಬ್ರಹ್ಮಣೇ ನಮಃ 9. ಶ್ರೀ ಮಹಾಲಕ್ಷ್ಮ್ಯೈನಮಃ 10. ಶ್ರೀ ನಾರಾಯಣಾಯ ನಮಃ 11. ಕುಲದೇವತಾತ್ಮಕ ಶ್ರೀ ರಾಮಚಂದ್ರಾಯ ನಮಃ। 12. ಮುಕ್ತಿಪ್ರದ ವಾಸುದೇವಾಯ ನಮಃ॥

**ಗುಣ :-** ಗುಣ ಶಬ್ದಕ್ಕೆ ಕನ್ನಡದಲ್ಲಾಗಲೀ, ಸಂಸ್ಕೃತದಲ್ಲಾಗಲೀ ಅರ್ಥ ಹುಡುಕಲು ಹೊರಟರೆ ನೂರಾರು ಅರ್ಥಗಳಿವೆ. ಆದರೆ ಅವುಗಳನ್ನೆಲ್ಲಾ ಬರೆಯದೆ ಜ್ಞಾನಕ್ಕೆ ಅಸಾಧಾರಣ ಕಾರಣವೇ ಗುಣ ಎಂದು ಮೇಲ್ನೋಟಕ್ಕ ಅರ್ಥೈಸೋಣ. ಮನುಸ್ಮೃತಿ, ಸಾಹಿತ್ಯ ದರ್ಪಣ, ಶ್ರೀ ಹರಿವಾಯು ಸ್ತುತಿಯ ವ್ಯಾಖ್ಯಾನ, ಮೇದಿನೀಕೋಶ, ಹೇಮಚಂದ್ರ, ಗೌತಮ ಮುನಿಗಳು ಹಾಗೂ ಡಿ.ವಿ.ಗುಂಡಪ್ಪ ಇವರ ಗ್ರಂಥಗಳನ್ನೆಲ್ಲಾ ಅವಲೋಕನ ಮಾಡಿದರೆ ಗುಣ ಶಬ್ದದ ಅರ್ಥವೇ ಸಮುದ್ರವಾಗಿ ಬಿಡುತ್ತವೆ. ಒಟ್ಟಿನಲ್ಲಿ ಗುಣಶಬ್ದದ ಅರ್ಥ ಜ್ಞಾನಕ್ಕೆ ಅಸಾಧಾರಣ ಕಾರಣವೇ **'ಗುಣ'** ಎಂದು ಹೇಳೋಣ.

**ಸ್ತವನ:** ಸ್ತವನ ಎಂದರೆ ಸ್ತುತಿ ಪ್ರಶಂಸೆ ಎಂದರ್ಥ. ಗುರುಗುಣ ಸ್ತವನ ಎಂದರೆ ಜ್ಞಾನ ಭಕ್ತಿ, ವೈರಾಗ್ಯಗಳ ಸಮೂಹವೇ ಗುರುಗುಣಸ್ತವನ ಎಂದು ಹೇಳಬಹುದು. ಒಟ್ಟಿನಲ್ಲಿ ಶ್ರೀರಾಯರ ನಂತರ 5 ನೆ ಯವರಾದ ಅಂದರೆ ಶ್ರೀರಾಯರ ನಂತರ (ಶ್ರೀಯೋಗೀಂದ್ರರು, ಶ್ರೀಸೂರೀಂದ್ರರು, ಶ್ರೀಸುಮತೀಂದ್ರರು, ಶ್ರೀಉಪೇಂದ್ರರು, ಶ್ರೀವಾದೀಂದ್ರರು) ಶ್ರೀವಾದೀಂದ್ರರ ಪರಮ ಅದ್ಭುತ ಸಂಸ್ಕೃತದ ಖಂಡ ಕಾವ್ಯವೇ ಗುರುಗುಣಸ್ತವನಮ್.



ಧಾರಾವಾಹಿ

# ಶ್ರೀ ವೆಂಕಟಾಚಲ ಮಹಾತ್ಮ್ಯ

ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್
ಅನುವಾದ – ಶ್ರೀಮತಿ. ಎನ್. ಪಾರ್ವತಿ

**ಕಳೆದ ಸಂಚಿಕೆಯಿಂದ**

**ತೃತೀಯ ಅಧ್ಯಾಯ ಆರಂಭ**
**ಚಕ್ರರಾಜನ ದಿಗ್ವಿಜಯ**

ಸೂತಮಹಾಮುನಿ! ವೆಂಕಟಾದ್ರಿಯನ್ನು ಎಲ್ಲಾ ಕಡೆ ಅತಿಕ್ರಮಿಸಿದ್ದ ಕಳ್ಳರನ್ನು ವಿಷ್ಣುವಿನ ಪಂಚಾಯುಧಗಳಲ್ಲಿ ಒಂದಾದ ಸುದರ್ಶನಾಯುಧವು ಸಂಹರಿಸಿತೆಂದು ಲೋಗಡ ಹೇಳುತ್ತಾರೆ. ಆ ಸ್ವಾಮಿಯ ವೀರಾವೇಶವನ್ನು ಕೇಳ ಬೇಕೆಂಬುದು ನಮ್ಮ ಆಸೆ. ತಾವು ಅನುಗ್ರಹಿಸಬೇಕೆಂದು ಕೇಳಿದರು. ಆಗ ಸೂತನು ಸಂತಸದಿಂದ,

"ಮುನಿವರ್ಯರೇ ಮಹಾವಿಷ್ಣುವಿನ ಪಂಚಾಯುಧಗಳಲ್ಲಿ ಸುದರ್ಶನಾಯುಧಕ್ಕೆ ಸರಿಸಾಟಿಯಾದುದು ಯಾವುದೂ ಇಲ್ಲ. ಆ ಸುದರ್ಶನ ಚಕ್ರವಿಹಾರವನ್ನು ವರ್ಣಿಸುವ ಶಕ್ತಿ ನನಗಿಲ್ಲ. ಆದಾಗ್ಯೂ ನೀವು ಕೇಳಿದ್ದೀರಿ. ಹಾಗಾಗಿ ನನಗೆ ತಿಳಿದಿದ್ದನ್ನು ಹೇಳುತ್ತೇನೆ."

ಸ್ಥಿತಿಕಾರಕನಾದ ಶ್ರೀವಿಷ್ಣುವೇ ಸಾಮಾನ್ಯ ಮುನಿಜನರನ್ನು ಬಾಧಿಸುವ ಲೋಕಕಂಟಕರ ಸಂಹಾರ ಮಾಡುವಂತೆ ಸುದರ್ಶನನಿಗೆ ಆಜ್ಞಾಪಿಸಿದನು. ಸ್ವಾಮಿ ಅಣತಿಗೆ ತಲೆಬಾಗಿ ರಾಜವೇಷ ಧರಿಸಿ ಸುದರ್ಶನನು ತೆರಳಿದನು. ಸಹಸ್ರ ಭುಜಗಳನ್ನು ಧರಿಸಿದನು. ರತ್ನ ಭೂಷಣಾದಿ ಆಭರಣಗಳನ್ನು ತೊಟ್ಟನು. ಕೆಂಪು ಬಟ್ಟೆಯನ್ನು ಧರಿಸಿದನು. ಪ್ರಳಯಕಾಲದಲ್ಲಿ ಬರುವ ಅಗ್ನಿಯಂತೆ ಭಯಂಕರನಾದನು. ಕುಮುದ ಮತ್ತು ಜ್ವಾಲಾಮುಖರು ಚತುರಂಗ ಬಲದೊಂದಿಗೆ ಶಸ್ತ್ರಸಜ್ಜಿತರಾಗಿ ಸೈನ್ಯದೊಂದಿಗೆ ತನನ್ನು ಹಿಂಬಾಲಿಸಿದರು. ಸುದರ್ಶನನು ರಥವನ್ನೇರಿ ಶೇಷಾಚಲವನ್ನು ಪ್ರಧಾನ ಕೇಂದ್ರವಾಗಿ ಮಾಡಿಕೊಂಡು ಪೂಜ್ಯರಿಗೆ ಕಿರುಕುಳ ನೀಡುತ್ತಿದ್ದ ಕಳ್ಳರನ್ನು ಶೋಧಿಸಿ ಶತ್ರುಶೇಷ ಇರದಂತೆ ಮಾಡಿದನು. ಆ ಭಾಗದಲ್ಲಿ ಜನರಿಗೆ ಕಳ್ಳರ ಬಾಧೆಯನ್ನು ನೀಗಿಸಿದನು. ತಮ್ಮ ಪ್ರದೇಶದಲ್ಲಿ ದರೋಡೆಕೋರರ ಪರಾಕ್ರಮವನ್ನು ಹತ್ತಿಕ್ಕಿದ್ದರಿಂದ ಸ್ಥಳೀಯ ಜನರು ಸುದರ್ಶನನ್ನು ಭೇಟಿ ಮಾಡಿದರು.

ಓ ಮಹಾರಾಜ ! ಯಾರು ಕೇಳುವವರೇ ಇಲ್ಲವೆಂದು ಕಳ್ಳರು ಈ ಭಾಗದಲ್ಲಿ ನೆಲೆಸಿದ್ದರು. ಅಮಾಯಕ ಅಸಹಾಯಕ ಸಂತರಿಗೆ ಕಿರುಕುಳ ನೀಡುತ್ತಿದ್ದರು. ನಿಮ್ಮ ಆಗಮನ ಮತ್ತು ನಿಮ್ಮ ರಣವ್ಯೂಹಕ್ಕೆ ಹೆದರಿ ಪಲಾಯನ ಮಾಡಿದ್ದಾರೆ. ಕೊನೆಗೆ ಅವರ ಪೀಡೆಯಿಂದ ಮುಕ್ತರಾಗಿದ್ದೇವೆ.

ಆದರೆ ಮಹಾರಾಜ! ನೀವು ಯಾರೆಂದು ನಮಗೆ ಗೊತ್ತಿಲ್ಲ. ನಿಮ್ಮ ಮೂಲ ನಿವಾಸವೂ ತಿಳಿದಿಲ್ಲ. ಎಲ್ಲಿಂದಲೋ ಬಂದು ನಮ್ಮ ಪ್ರಾಣ ಕಾಪಾಡಿದ್ದೀರಿ. ಕೇಳದೆಯೇ ನಮ್ಮ ಕೋರಿಕೆಯನ್ನು ನೆರವೇರಿಸಿದ ಮಹಾತ್ಮರು ನೀವು. ನೀವೂ ಇಲ್ಲಿಯೇ ನೆಲೆಸಿರಿ. ಇದು ನಮ್ಮ ಕೋರಿಕೆ ಎಂದು ಕೈ ಜೋಡಿಸಿ ಪ್ರಾರ್ಥಿಸಿದರು. ಸುದರ್ಶನರಾಜು ಶಾಂತರಾಗಿ ಜನ ಸಾಮಾನ್ಯರ ಸಂತರ ಪ್ರಾರ್ಥನೆಯನ್ನು ಆಲಿಸಿ "ನಾನು ಇಲ್ಲಿ ಉಳಿಯಲು ಸಾಧ್ಯವಿಲ್ಲ, ಆದರೆ ನಾನು ಇಲ್ಲಿನ ಜನರಲ್ಲಿ ಒಬ್ಬನನ್ನು ರಾಜನನ್ನಾಗಿ ಮಾಡುತ್ತೇನೆ, ಆ ವ್ಯಕ್ತಿ ನಿಮ್ಮನ್ನು ರಕ್ಷಿಸುತ್ತಾನೆ. ಅವನು ಈ ಪ್ರದೇಶದ ರಕ್ಷಕನಾಗಿರುತ್ತಾನೆ ಎಂದು ಆಶ್ವಾಸನೆಯನ್ನು ನೀಡಿ ಅದರಂತೆ ಒಬ್ಬರನ್ನು ಅಧಿಕಾರಿಯನ್ನಾಗಿ ಮಾಡಿ ಅವರ ಕರ್ತವ್ಯಗಳನ್ನು ಮನದಟ್ಟು ಮಾಡಿ ಮುಂದೆ ಸಾಗಿದನು.



ವಿವಿಧೆಡೆಯಿಂದ ತಿರುಮಲೆ ವೆಂಕಟಾದ್ರಿಗೆ ಸೇರುವ ರಸ್ತೆಗಳಲ್ಲಿ ಪ್ರಜೆಗಳ ಸುರಕ್ಷತೆಗಾಗಿ ಸೂಕ್ತ ವ್ಯಕ್ತಿಗಳಿಗೆ ಅಧಿಕಾರವನ್ನು ನೀಡಿ ಕರ್ತವ್ಯಗಳನ್ನು ನಿಯೋಜಿಸಿದನು. ಜಯಭೇರಿ ಮೊಳಗಿಸಿ ಅಲ್ಲಿದ್ದ ಕಳ್ಳರನ್ನು ನಡುಗಿಸಿದನು. ತರುವಾಯ ಆಗ್ನೇಯ ದಿಕ್ಕಿಗೆ ತೆರಳಿದನು. ಅಲ್ಲಿಯೂ ದುಷ್ಟರು, ಕಳ್ಳರು, ಕೊಲೆಗಡುಕರು, ವಿಪ್ರರನ್ನು ಬಾಧಿಸುವ ಮೂರ್ಖರು ಪಾಪಾತ್ಮರನ್ನು ಗುರುತಿಸಿ ಅವರನ್ನು ಶಿಕ್ಷಿಸಿದನು. ಸೇನಾಬಲದಿಂದ ಅವರನ್ನು ಸಂಹರಿಸಿ, ಆ ಶವಗಳ ಮೇಲೆ ಸಾಗುತ್ತಾ ತನ್ನೊಡನೆ ಬಂದ ವಿದ್ಯಾಧರಗಣಸಹಿತ ಯುದ್ಧವನ್ನು ಮುಂದುವರೆಸಿದನು. ಆದರೂ ಸಮರ ನಿಲ್ಲಲಿಲ್ಲ. ಕೊನೆಗೆ ಸುದರ್ಶನ ಮಹಾರಾಜನ ಬಲವನ್ನು ಎದುರಿಸಲಾಗದ ವೀರರು ತಮ್ಮ ದೊರೆಗಳ ಬಳಿಗೆ ಹೋಗಿ ಎಲ್ಲವನ್ನೂ ವಿವರಿಸಿದರು. ಅವರ ಆವೇಶ, ಆಕ್ರೋಶವನ್ನು ಅರಿತ  ದೊರೆಗಳು ತಾವೇ ರಣರಂಗಕ್ಕೆ ಇಳಿದು ಗಂಧರ್ವ ಗಣಗಳನ್ನು ಸೋಲಿಸಿದರು. ಕೇಳರಿಯದ ರೀತಿಯಲ್ಲಿ ಸಮರವು ಸಾಗಿತು. ಆನೆಗಳ ಘರ್ಜನೆ, ಕುದುರೆಗಳ ಓಡಾಟ ಮತ್ತು ರಥಗಳ ಓಟದೊಂದಿಗೆ ಸಮರವು ಪ್ರತಿಧ್ವನಿಸಿತು. ಆಗ ಜ್ವಾಲಾಮುಖನು ಪ್ರತಿವೀರರ ಆರ್ಭಟವನ್ನು ಸುದರ್ಶನ ರಾಜನಿಗೆ ತಿಳಿಸಿದನು. ಆಗ ತಾನೇ ಸ್ವತಃ ಯುದ್ಧಕ್ಕೆ ನಿಂತು ಸಹಸ್ರ ಬಾಹುವುಳ್ಳವನಾಗಿ ಶತ್ರುಗಳನ್ನು ಎದುರಿಸಿದನು. ಸುದರ್ಶನರಾಜನ ವ್ಯೂಹ ನೈಪುಣ್ಯಕ್ಕೆ ಎದುರಾಳಿಗಳೂ ಏನೂ ಮಾಡಲು ಸಾಧ್ಯವಾಗದೇ ಎದೆಗುಂದಿದರು. ಶುತ್ರಗಳು ಭಯ ಭೀತರಾಗಿ ತಮ್ಮವರ ಸುರಕ್ಷತೆಯು ಬಗ್ಗೆಯೂ ಯೋಚಿಸದೇ ಓಡಿಹೋದರು.

ಸುದರ್ಶನನು ಆಗ್ನೇಯಾಸ್ತ್ರವನ್ನು ಪ್ರಯೋಗಿಸಿದುದರಿಂದ ಶತ್ರುಸೇನೆಯು ಬೆಂಕಿಗೆ ಆಹುತಿಯಾಯಿತು. ಇದರ ಅಸ್ತ್ರದ  ಪ್ರಭಾವದಿಂದ ಭೂಮಿ ಬಿಸಿಯಾಯಿತು. ಆ ಅಸ್ತ್ರದ ಪ್ರಭಾವದಿಂದ ಅವನ ಸೈನ್ಯವೂ ನರಳುತ್ತಿರುವಾಗ ಸುದರ್ಶನು ಕೂಡಲೇ ವರುಣಾಸ್ತ್ರವನ್ನು ಪ್ರಯೋಗಿಸಿ ತಂಪಾಗಿಸಿದನು. ಸೈನಿಕರು ಬದುಕಿದೆವೆಂದು ನಿರಾಶೆಪಟ್ಟರು. ಕೊನೆಗೆ ಸುದರ್ಶನರಾಜನು ಅಲ್ಲಿಯವರಲ್ಲಿ ಒಬ್ಬನನ್ನು ಧರ್ಮಾಧ್ಯಕ್ಷನನ್ನು ಆಯ್ದು ಪ್ರಜೆಗಳ ರಾಜನನ್ನಾಗಿ ಮಾಡಿ ಕರ್ತವ್ಯಗಳನ್ನು ಉಪದೇಶಿಸಿ, ಮುಂದಕ್ಕೆ ಸಾಗಿದನು. ನಂತರ ದಕ್ಷಿಣಕ್ಕೆ ತೆರಳಲು ತನ್ನ ಸೈನ್ಯಕ್ಕೆ ಆದೇಶಿಸಿದನು. ಅಲ್ಲಿನ ಕಾಡುಗಳ್ಳರನ್ನು ನಾಶಪಡಿಸಿದನು. ಕಾಡಿನಲ್ಲಿ ಅಡಗಿ ಕೊಂಡಿದ್ದವರನ್ನು ಭೇಟೆಯಾಡಿ  ಸಂಹರಿಸಿದನು.

ದಕ್ಷಿಣ ದಿಕ್ಕಿನಲ್ಲಿ ಪುಲಿಂದರದ್ದೇ ಸರ್ವಾಧಿಪತ್ಯ. ಅವರಲ್ಲಿ ಬಿಡಾಲರು ಮತ್ತು ಚಾಲುಕರು ಪ್ರಬಲರಾಗಿದ್ದರು. ಇಬ್ಬರೂ ಸೇರಿ ಒಟ್ಟಿಗೆ ಚಕ್ರರಾಜನ ಮೇಲೆ ದಾಳಿ ಮಾಡಿದರು. ಚಕ್ರರಾಜನ ಸೈನ್ಯವು ಕ್ಷೀಣಿಸುತ್ತಿತ್ತು.

ನಮ್ಮನ್ನು ಕೀಳಾಗಿ ನೋಡುತ್ತಾ, ನಮ್ಮನ್ನು ಸಂಹರಿಸಲು ಬಂದಿದ್ದಾನಾ! ಬರಲಿ, ನಮ್ಮ ಮುಂದೆ ನಿಲ್ಲುವವರನನ್ನು ಅಂತ್ಯ ಮಾಡುತ್ತೇವೆ” ಎಂದು ಒಬ್ಬನು ಹೇಳಿದನು. “ಗಜಬಲವೋ! ಅಶ್ವಬಲವೋ ಎರಡನ್ನೂ ನೆಲಸಮ ಮಾಡುತ್ತೇವೆ” ಎಂದು ಮತ್ತೊಬ್ಬನು ಹೇಳಿದನು.

ಕಾಲ್ಬಲವೇ ! ನನಗೇನು ಲೆಕ್ಕವೇ ಎಂದು ಮತ್ತೊಬ್ಬನೆಂದನು. ನನ್ನ ರಥದ ಮುಂದೆ ಬರುವವನ ರಥ ಮುರಿದು ಸಂಹರಿಸುತ್ತೇನೆ ಎಂದು ಮತ್ತೊಬ್ಬನೆಂದನು. ಇನ್ನೊಬ್ಬನು, “ನನ್ನನ್ನು ಸಾಮಾನ್ಯ ವೀರನೆಂದು ಎಣಿಸಬೇಡಿ, ನಾನೊಬ್ಬನೇ ಆತನ ಚತುರಂಗಬಲವನ್ನು ಹೇಳ ಹೆಸರಿಲ್ಲದೆ ನಾಶ ಮಾಡುತ್ತೇನೆ” ಎಂದನು. ಸೈನಿಕರಿಂದ ಎಲ್ಲವನ್ನೂ ತಿಳಿದುಕೊಂಡ ಸುದರ್ಶನರಾಜ ಮತ್ತು  ಪ್ರಧಾನರು ಎಲ್ಲಾ ರೀತಿಯ ಪ್ರತಿಕ್ರಿಯೆಗಳಿಗೆ  ಸಜ್ಜುಗೊಂಡರು.

ಜ್ವಾಲಾಕೇಶ, ಕಾಲಾಂತಕ ಮತ್ತು ರಣಪ್ಷರು ಎದುರಾಳಿಗಳನ್ನು ಎದುರಿಸಿದರು.

ಪಾಪಿಗಳೇ  ತಡೆಯಿರಿ, ತಡೆಯಿರಿ, ನೀವು ಸಾಮಾನ್ಯರಲ್ಲ, ನೀವು ರಾಕ್ಷಸ ಪ್ರವೃತ್ತಿಯವರು. ಬ್ರಾಹ್ಮಣರಿಗೆ ಹಾನಿ ಮಾಡಿದ್ದೀರಿ. ನೀವು ಅವರ ಆಚರಣೆಗಳನ್ನು ಪರಿಹಾಸ್ಯ ಮಾಡಿದ್ದೀರಿ, ಅವರ ಯಜ್ಞಗಳನ್ನು ಅಡ್ಡಿಪಡಿಸಿದ್ದೀರೀ.

ಅಧರ್ಮ ಪರರಾದ ನಿಮ್ಮನ್ನು ಹಾಗೆಯೇ ಬಿಡುವುದು ಮಹಾಪಾಪ. ನಿಮ್ಮನ್ನು ತುಂಡರಿಸಿ ಭೂತಗಳಿಗೆ ಉಣಿಸುವೆವು. ಭೂಸುರರರನ್ನು ರಕ್ಷಿಸುತ್ತೇವೆ. ಧೈರ್ಯವಿದ್ದರೆ ನಮ್ಮೊಡನೆ ಯುದ್ಧಮಾಡಿ ಎಂದರು. ಎಲ್ಲರನ್ನೂ ಒಂದೇ ಬಾರಿಗೆ ಸ್ಫುಲಿಂಗಕ್ಕೇ ನೇತು ಹಾಕಿದರು. ಆಗ ಅವನು ‘ಅಂಕುಂಡಿ’ಯಾಗಿ ಮಾರ್ಪಟ್ಟನು. ಬಲಾಧ್ಯಕ್ಷನು ವಂಕುಂಡನನ್ನು ಕೊಂದನು. ಜ್ವಾಲಾಕೇಶನು ದಕ್ಷಿಣದಲ್ಲಿಯೇ ಬಲವಂತನಾದ ಪುಲಿಂದನನ್ನು ಸಂಹರಿಸಿದನು.

ಅವರ ನಾಯಕ ಕೊಲ್ಲಲ್ಪಟ್ಟಿದ್ದರಿಂದ ಪುಲಿಂದನ ಸೈನಿಕರು ಅಡವಿಗಳಲ್ಲಿ ಅಡಗಿಕೊಂಡರು. ಅಡವಿಗಳಲ್ಲಿ ಅಡಗಿದ್ದ ಸೈನ್ಯದ ಮೇಲೆ ಸುದರ್ಶನರಾಜನು ಬಾಣಗಳ ಮಳೆಗರೆ ದನು. ಕೊನೆಗೆ ಸುದರ್ಶನ ಮಹಾರಾಜನನ ಅಣತಿಯೊಂದಿಗೆ ಪಾಯಶಿರನು ಅವರನ್ನು ವ್ಯೂಹದಿಂದ ಎದುರಿಸಿ ಸಂಹರಿಸಿದನು. ರಾಜ ಸುದರ್ಶನನ ಪರಾಕ್ರಮದಿಂದ ಶತ್ರುಸೇನ ನಿಶ್ಶೇಶವಾಯಿತು. ದಕ್ಷಿಣ ಪ್ರಾಂತವು ನೆಮ್ಮದಿಯ ನಿಟ್ಟುಸಿರು ಬಿಟ್ಟಿತು.



**- ಮುಂದುವರೆಯುತ್ತದೆ.**

ಕರ್ನಾಟಕ ವೈಷ್ಣವ ದೇವಾಲಯಗಳು

52

# ದೇವಲಾಪುರ ಲಕ್ಷ್ಮೀಕಾಂತ ದೇವಾಲಯ ಮತ್ತು ಲಕ್ಷ್ಮೀನರಸಿಂಹ ದೇವಾಲಯ

– ಕೆಂಗೇರಿ ಚಕ್ರಪಾಣಿ
94483 86886

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ದೇವಲಾಪುರವು ತಾಲೂಕು ಕೇಂದ್ರದಿಂದ ಪೂರ್ವಕ್ಕೆ 14 ಕಿ.ಮೀ. ದೂರದಲ್ಲಿರುವ ಹೋಬಳಿ ಕೇಂದ್ರ. ದೇವಲಾಪುರದಲ್ಲಿ ಊರ ನಡುವೆ ಲಕ್ಷ್ಮೀಕಾಂತ ದೇವಾಲಯ, ಲಕ್ಷ್ಮೀನರಸಿಂಹ ದೇವಾಲಯ ಹಾಗೂ ಹೊರವಲಯದಲ್ಲಿ ಮಾರುತಿ ದೇವಾಲಯಗಳಿವೆ.

ದೇವಲಾಪುರದ ಲಕ್ಷ್ಮೀಕಾಂತ ದೇವಾಲಯವು ಪ್ರವೇಶ ಮಂಟಪ, ನವರಂಗ, ಅಂತರಾಳ ಹಾಗೂ ಗರ್ಭಗೃಹಗಳನ್ನೊಳಗೊಂಡಿರುವ ರಚನೆಯಾಗಿದೆ.

ಗರ್ಭಗೃಹದಲ್ಲಿ ಪೀಠವೂ ಸೇರಿ ಏಳು ಅಡಿಗಳಷ್ಟು ಎತ್ತರದ ಅತೀ ಸೂಕ್ಷ್ಮ ಕೆತ್ತನಗಳಿಂದ ಕೂಡಿದ ಲಕ್ಷ್ಮೀಕಾಂತ ಸ್ವಾಮಿಯ ಮೂರ್ತಿಯಿದೆ. ತನ್ನ ಪತ್ನಿಯನ್ನು ಎಡ ತೊಡೆಯ ಮೇಲೆ ಕುಳ್ಳಿರಿಸಿಕೊಂಡಿರುವ ದೇವನ ಮೂರ್ತಿಯು ಸುಮಾರು 13ನೇ ಶತಮಾನದ ಹೊಯ್ಸಳರ ಕಾಲದ ಸುಂದರ ಕಲಾಕೃತಿ. ದೇವನು ಮೇಲಿನ ಬಲಗೈಯಲ್ಲಿ ಪದ್ಮ ಹಾಗೂ ಎಡಗೈಯಲ್ಲಿ ಗದೆಯನ್ನು ಧರಿಸಿದ್ದು, ದೇವಿಯನ್ನು ಬಳಸಿರುವ ಕೆಳ ಎಡಗೈಯಲ್ಲಿ ಚಕ್ರ ಮತ್ತು ಕೆಳ ಬಲಗೈಯಲ್ಲಿ ಶಂಖವನ್ನು ಹಿಡಿದಿರುವನು. ಅಮೃತ ಕಳಸವನ್ನು ಹಿಡಿದಿರುವ ಲಕ್ಷ್ಮೀದೇವಿಯ ನೋಟವು ತನ್ನ ಕಾಂತ ನೆಡೆಗಿದೆ. ದೇವನ ನೀಳನಾಸಿಕ, ತೀಡಿದ ಹುಬ್ಬು, ಕಿವಿಗೆ ಧರಿಸಿರುವ ಕುಂಡಲಗಳು, ಸೂಕ್ಷ್ಮಕೆತ್ತನೆಗಳ ಕಿರೀಟ, ಅದರ ಬುಡದಲ್ಲಿ ಮಣಿಹಾರಗಳ ಮಾಲೆ, ಇಕ್ಕೆಲಗಳಲ್ಲಿ ಇಳೆ ಬಿಟ್ಟಿರುವ ಕುಚ್ಚು ಬಹಳ ನೈಜವಾಗಿ ಆಕರ್ಷಕವಾಗಿ ಮೂಡಿ ಬಂದಿದೆ.

ಲಕ್ಷ್ಮೀಕಾಂತಸ್ವಾಮಿಯ ಶಿರದ ಹಿಂದೆ ಪ್ರಭಾಚಕ್ರವಿದ್ದು ಅಲಂಕೃತ ಪ್ರಭಾವಳಿಯಿದೆ. ಪ್ರಭಾವಳಿಯ ಮೇಲ್ಭಾಗದಲ್ಲಿ ಮತ್ಸ್ಯ, ಕೂರ್ಮಾದಿಯಾಗಿ ಮಹಾವಿಷ್ಣುವಿನ ದಶಾವತಾರದ ಶಿಲ್ಪಗಳಿವೆ. ಒಟ್ಟಿನಲ್ಲಿ ದೇವಲಾಪುರದ ಲಕ್ಷ್ಮೀಕಾಂತ ದೇವನು ನೋಡಲು ಬಹಳ ಆಕರ್ಷಕವಾಗಿರುವನು. ನವರಂಗದಲ್ಲಿ ದುಂಡಾಕಾರದ ನಾಲ್ಕು ಕಂಬಗಳಿವೆ. ದೇವಾಲಯವು ಮೂಲತಃ ಹೊಯ್ಸಳರ ಕಾಲಕ್ಕೆ ಸೇರಿದ್ದು ನಂತರ ಜೀರ್ಣೋದ್ಧಾರಗೊಂಡರೂ ಮೂಲ ಸ್ವರೂಪದಲ್ಲಿಯೇ ಉಳಿದು ಬಂದಿದೆ.

## ಲಕ್ಷ್ಮೀನರಸಿಂಹ ದೇವಾಲಯ

ಲಕ್ಷ್ಮೀಕಾಂತ ದೇವಾಲಯಕ್ಕೆ ಹೊಂದಿಕೊಂಡಂತೆ ಬಲ ಬದಿಯಲ್ಲಿ ಲಕ್ಷ್ಮೀನರಸಿಂಹನ ಪ್ರತ್ಯೇಕ ಗುಡಿಯಿದೆ. ಗರ್ಭಗೃಹ, ಅಂತರಾಳ, ನವರಂಗಗಳನ್ನು ಹೊಂದಿರುವ ಈ ದೇವಾಲಯದಲ್ಲಿ ಗರುಡ ಪೀಠದ ಮೇಲೆ ಆಸೀನನಾಗಿರುವ ಲಕ್ಷ್ಮೀನರಸಿಂಹಸ್ವಾಮಿಯ ಅಂದದ ಮೂರ್ತಿಯಿದೆ.

ಕಿರೀಟ ಮುಕುಟವನ್ನು ಧರಿಸಿರುವ ಸ್ವಾಮಿಯು ಪತ್ನಿಯನ್ನು ತನ್ನ ವಾಮ ಭಾಗದಲ್ಲಿ ಕುಳ್ಳಿರಿಸಿಕೊಂಡಿದ್ದು ಚತುರ್ಭುಜವನ್ನು ಹೊಂದಿರುವನು.





ದೇವನ ಮೇಲಿನ ಕೈಗಳಲ್ಲಿ ಚಕ್ರ, ಶಂಖಗಳನ್ನು ಧರಿಸಿದ್ದು, ಕೆಳಬಲಗೈ ಅಭಯ ಹಸ್ತದಲ್ಲಿದೆ ಹಾಗೂ ಕೆಳಎಡಗೈ ದೇವಿಯನ್ನು ಬಳಸಿದೆ. ಇಲ್ಲಿಯೂ ಕೂಡ ಲಕ್ಷ್ಮೀದೇವಿಯು ನರಸಿಂಹಸ್ವಾಮಿ ಕಡೆಗೆ ತಿರುಗಿರುವುದು ಗಮನಿಸಬೇಕಾದ ಅಂಶವಾಗಿರುವುದು.

ದೇವಲಾಪುರದ ಲಕ್ಷ್ಮೀಕಾಂತ ದೇವರಿಗೆ ವೈಕುಂಠ ಏಕಾದಶಿಯು ಬಹಳ ವಿಶೇಷವಾದ ದಿನ ಆ ದಿನ ಸಹಸ್ರಾರು ಭಕ್ತರು ಆಗಮಿಸಿ ದೇವನ ಕೃಪಗೆ ಪಾತ್ರರಾಗುವರು. ಶ್ರಾವಣ ಮಾಸದ ಶನಿವಾರಗಳು ಹಾಗೂ ಲಕ್ಷ್ಮೀನರಸಿಂಹ ಜಯಂತಿಯ ಸಂದರ್ಭಗಳಲ್ಲಿ ಪಾಂಗಿತವಾಗಿ ಸ್ವಾಮಿಯ ಕೈಂಕರ್ಯಗಳು ಜರುಗುವುದು.

ಈ ದೇವಾಲಯದ ಮುಂದಿರುವ ದೀಪ ಮಾಲೆ ಕಂಬವನ್ನು ಹಾಗೂ ಬಾಗಿಲು ವಾಡವನ್ನು ಕಠಾರಿ ಸಾಳುವ ನರಸಿಂಹನ ಹಳಿಕಾರ ಲಜ್ಜನಾಯಕನ ಮಗ ಅಲ್ಲಪ್ಪ ನಾಯಕನು ಮಾಡಿಸಿಕೊಟ್ಟಿರುವುದಕ್ಕೆ ಶಾಸನಾಧಾರವಿದೆ.

ಕ್ರಿ.ಶ. 1473 ಅಮೃತೂರಿನ ಸುಂಕದ ಮುರುದಾನ ಸೆಟ್ಟಿಯು ತನಗೆ ಬಂದ ಮಗ್ಗದೆರೆ (ಮಗ್ಗದ ಮೇಲಿನ ಸುಂಕವನ್ನು) ಲಕ್ಷ್ಮೀಕಾಂತ ಸ್ವಾಮಿಯ ವಸ್ತ್ರಗಳ ಖರೀದಿಗೆ ದಾನ ಬಿಟ್ಟಿರುವನು.

ಕ್ರಿ.ಶ. 1483 ರಲ್ಲಿ ಬಿಂಡಿಗಿನವಿಲೆಯ ತಿಮ್ಮರಸನ ಮಗ ಕೋನೇರಿ ದೇವನು ದೇವಲಾಪುರದಲ್ಲಿ ದೊರೆಯುವ ಮಗ್ಗದ ಮೇಲಿನ ಸುಂಕವನ್ನು **"ಲಕ್ಷ್ಮೀಕಾಂತ ದೇವರ ವೈಭೋಗಕ್ಕೆ"** ಬಿಟ್ಟಿರುವ ಸಂಗತಿಗಳು, ಈ ದೇವಾಲಯದಲ್ಲಿ ದೊರೆತಿರುವ ಶಾಸನಗಳಲ್ಲಿ ದಾಖಲಾಗಿವೆ.

### ಮಾರುತಿ ದೇವಾಲಯ

ಲಕ್ಷ್ಮೀಕಾಂತ ಸ್ವಾಮಿಯ ದೇವಾಲಯಕ್ಕೆ ನೇರವಾಗಿ ಕೆರೆಯ ಸಮೀಪ ಮಾರುತಿಯ ದೇವಾಲಯವಿದೆ. ಸುಮಾರು 12 ಅಡಿಗಳು ಎತ್ತರವಿರುವ ಮಾರುತಿಯು ಉಬ್ಬು ಶಿಲ್ಪವಾಗಿ ಸುಂದರವಾಗಿ ಮೂಡಿ ಬಂದಿದೆ. ವೀರಗಚ್ಚೆಯನ್ನು ಹಾಕಿ ನಿಂತಿರುವ ಮಾರುತಿಯು ಎತ್ತಿದ ಬಲಗೈ ಅಭಯಹಸ್ತದಲ್ಲಿ ಮತ್ತು ಎಡಗೈ ಸೊಂಟದ ಮೇಲಿದ್ದು ಮಾವಿನ ಗೊಂಚಲನ್ನು ಕೈಯಲ್ಲಿ ಹಿಡಿದಿರುವನು. ಪಾರ್ಶ್ವಕ್ಕೆ ತಿರುಗಿರುವ ಮಾರುತಿಯ ಇಕ್ಕೆಲಗಳಲ್ಲಿ ಚಕ್ರ, ಶಂಖಗಳಿವೆ ಮಾರುತಿಯ ಬಾಲವು ದೇಹವನ್ನು ಸುತ್ತುವರಿದಿದೆ.

ದೇವಲಾಪುರ ಮಾರುತಿಯ ಮೂರ್ತಿಯು ತನ್ನ ಬೃಹದಾಕಾರದಿಂದಲೂ, ಭವ್ಯತೆಯಿಂದಲೂ ನೋಡುವ ಭಕ್ತರನ್ನು ಧನ್ಯತೆಯ ಭಾವಕ್ಕೆ ಸೆಳೆಯುತ್ತದೆ. ದೇವಲಾಪುರದ ಕೆರೆಯ ಅಚಿನ ಭಾಗದಲ್ಲಿ ಕೋಡಿ ತಿರುಮಲೆ ದೇವರ ಗುಡಿಯಿದೆ.

### ಹೀಗೆ ಬನ್ನಿ :

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ದೇವಲಾಪುರವು ನಾಗಮಂಗಲದಿಂದ 14 ಕಿ.ಮೀ. ದೂರದಲ್ಲಿ ನಾಗಮಂಗಲ-ಕೌಡ್ಲೆ ರಸ್ತೆಯಲ್ಲಿದೆ. ಜಿಲ್ಲಾ ಕೇಂದ್ರ ಮಂಡ್ಯದಿಂದಲೂ ಅದೇ ರಸ್ತೆಯ ಮೂಲಕ ದೇವಲಾಪುರವನ್ನು ಸೇರಬಹುದು. ಒಟ್ಟು ದೂರ 42 ಕಿ.ಮೀ. ಈ ದೇವಾಲಯಗಳನ್ನು ದರ್ಶಿಸಿ ಇಲ್ಲಿಗೆ ಮೂರು ಕಿ.ಮೀ. ದೂರದಲ್ಲಿರುವ ದೇವರಹಳ್ಳಿಯ ತಪಸೀರಾಯ ಸ್ವಾಮಿಯ ದೇವಾಲಯವನ್ನು ದರ್ಶಿಸಬಹುದು.



# ಗೋವಿಂದ ಒಡೆಯರ್

– ಡಾ॥ ಎನ್.ಕೆ. ರಾಮಶೇಷನ್
82771 46110

ನವವೃಂದಾವನದ ಸಂತರಲ್ಲಿ-ಹರಿದಾಸ ಮಠಾಧೀಶರಲ್ಲಿ ಶ್ರೀಗೋವಿಂದ ಒಡೆಯರ್ ಕೂಡ ಒಬ್ಬರು. ಇವರ ವೃಂದಾವನವು ತುಂಗಭದ್ರಾ ನದಿ ನಡುಗಡ್ಡೆ ನವವೃಂದಾವನಗಳಲ್ಲಿ ಒಂದಾಗಿ ಇದೆ. ಗೋವಿಂದ ಒಡೆಯರದು ಮೊದಲಿಗೆ ಅದ್ವೈತ ಮಠ ಪರಂಪರೆ. ಅನಂತರ ವಾದ ವಾಗ್ವಾದದಲ್ಲಿ ಶ್ರೀ ವ್ಯಾಸ ತೀರ್ಥರಿಂದ ಪರಾಜಿತರಾಗಿ, ದ್ವೈತ ಸಿದ್ಧಾಂತ ಧರ್ಮ-ದ್ವೈತ ಪಂಥಕ್ಕೆ ಅನುಗಾಮಿ ಆದದ್ದು ಒಂದು ಇತಿಹಾಸವೇ ಆಗಿದೆ. (ಧರ್ಮಾಂತರ ಮತಾಂತರಗೊಂಡು, ಹರಿ ಪಾರಮ್ಯ ಪ್ರತಿಪಾದನ ಮಾಡಿದ್ದು ಇತಿಹಾಸವೇ).

ಗೋವಿಂದ ಒಡೆಯರ್ ಅವರಲ್ಲಿ ಒಡೆಯರ್ ಹೇಗೆ ಮಿಳಿತ ವಾಯಿತು. ಒಡೆಯರ್ ಎಂದಾಗ ರಾಜ ಪ್ರಭು ಎಂದಾಗುತ್ತದೆ. ಅಲ್ಲವೇ? ಆ ನಿಟ್ಟಿನಲ್ಲಿ ಗೋವಿಂದ ಒಡೆಯರ್ ಎಂದು ಹೆಸರಾದದ್ದು. ವೈಷ್ಣವಧರ್ಮ ದೀಕ್ಷೆ ಸ್ವೀಕರಿಸಿದ ನಂತರ ಹರಿದಾಸ ದೀಕ್ಷೆ ಕೈಕೊಂಡು ಮುದ್ದುಕೃಷ್ಣ ಅಂಕಿತದಲ್ಲಿ ಸುಳಾದಿಗಳನ್ನು ರಚಿಸಿ, ಅನೇಕ ಹರಿದಾಸ ಮಹನೀಯರೊಂದಿಗೆ ದಾಸ ಪರಂಪರೆಯ ಪಂಥಾನುಗಾಮಿ ಆದರೂ ಗೋವಿಂದ ಒಡೆಯರವರು.ಇವರು ಕ್ರಿಸ್ತಶಕ. 1534 ಫಾಲ್ಗುಣ ಕೃಷ್ಣ ಪಂಚಮಿಯಂದು ನವವೃಂದಾವನ ಪರಿಸರ ಶ್ರೀವ್ಯಾಸರಾಯ ಸ್ವಾಮಿ ಗಳಿಗೆ 5 ವರ್ಷ ಮೊದಲು ವೃಂದಾವನ ಪ್ರವೇಶಿಸಿದರು. ವ್ಯಾಸ ರಾಯರು 1442, 1539 ರಲ್ಲಿದ್ದರೆ ಶಿಷ್ಯ ಗೋವಿಂದ ಒಡೆಯರ್ 1534 ರಲ್ಲಿ ಅಂದರೆ ಗುರುಗಳಿಗೆ ಐದು ವರ್ಷ ಮುಂಚೆ ವೃಂದಾ ವನಸ್ಥರಾದರು.

ಪ್ರಸ್ತುತ ಪರಿಸರ ಈಗಲೂ ನವವೃಂದಾವನ, ತುಂಗಭದ್ರಾ ನದಿ ಪರಿಸರದಲ್ಲಿರುವ ಒಂದು ದ್ವೀಪ(ನಡುಗಡ್ಡೆ ಆನೆಗೊಂದಿಯ ಮಾಧ್ವ ಮಠಗಳಲ್ಲಿ ಪುರೋಹಿತರು/ಆಚಾರ್ಯರು ತಂಗುತ್ತಾರೆ. ಪ್ರತಿನಿತ್ಯ ಬೆಳಗಿನ ವೇಳೆ ಏಳು ಗಂಟೆಗೆ ಆನೆಗೊಂದಿ ದೋಣಿಯ ಮೂಲಕ ನವ ವೃಂದಾವನಕ್ಕೆ ಅರ್ಚಕರು ವೃಂದಾವನಕ್ಕೆ ಅಭಿಷೇಕ ಮಾಡುತ್ತಾರೆ. ಮತ್ತು ಮಧ್ಯಾಹ್ನದ ಮೊದಲು ಹಿಂತಿರುಗುತ್ತಾರೆ. ಇದು ನಡೆದು ಬಂದಿ ರುವ ಕ್ರಮ. ಸಾರಿಗೆ ವ್ಯವಸ್ಥೆ ನವವೃಂದಾವನಕ್ಕೆ ತೆರಳಲು ಆನೆ ಗೊಂದಿ ಯಿಂದ ದೋಣಿ ಪಡೆಯಬೇಕು. ಮಾರ್ಗ ಬೆಂಗಳೂರು ಇಂದ ರೈಲು, ಬಸ್ಸು ಅನಂತರ ನವವೃಂದಾವನಕ್ಕೆ ಹತ್ತು ಹದಿನೈದು ನಿಮಿಷ ದೋಣಿ ಮೂಲಕ ಪ್ರಯಾಣ. 9 ದಾರ್ಶನಿಕರ ವೃಂದಾವನ ದರ್ಶನ ಯತಿ ವರ್ಯರುಗಳ ಪಟ್ಟಿ ಹೀಗೆ ನೀಡಿದೆ : -

ಪದ್ಮನಾಭತೀರ್ಥರು (1324 ಕ್ರಿ.ಶ.) ಮೊದಲಲ್ಲಿ ಶೋಭನ ಭಟ್ಟರು. ಕವೀಂದ್ರತೀರ್ಥರು (1399 ಕ್ರಿ.ಶ. ) ವಾಗೀಶತೀರ್ಥರು (1404 ಕ್ರಿ.ಶ.) ವ್ಯಾಸರಾಯರು (1539 ಕ್ರಿ.ಶ.)

ಶ್ರೀನಿವಾಸರಾಯರ ಮಠದ ಮುಖ್ಯಸ್ಥರು ರಾಮತೀರ್ಥರು ರಘು ವರಿಯರು ಹೀಗೆ ಅವರ ಮಠದ ಉತ್ತರಾದಿ ಮಠದ ರಘುವರಿಯು 1551 ಕ್ರಿ.ಶ. ಶ್ರೀರಾಘವೇಂದ್ರ ತೀರ್ಥರ ಗುರು ಶ್ರೀಸುಧೀಂದ್ರ ತೀರ್ಥರು 1623 ಕ್ರಿ.ಶ. ಒಂಬತ್ತನೆಯವರು ಶ್ರೀಗೋವಿಂದ ಒಡೆ ಯರ್ ಯಾವುದೇ ಮಠಾಧೀಶರಾಗಿರದಿದ್ದರೂ ಶ್ರೀವ್ಯಾಸರಾಯರ ನಿಷ್ಠಾವಂತ ಶಿಷ್ಯರೆಂದೇ ಪ್ರಸಿದ್ಧ.

ಗೋವಿಂದ ಒಡೆಯರ ಕುರಿತ ಶ್ಲೋಕ ಹೀಗಿದೆ, ತುಂಗಭದ್ರಾ ತಟಸ್ಥಿತೇ ಚಿರಂತಂ ದುಶ್ಚರಂ ತಪಂ ತಮ್ ವಂದೇ ಗೋವಿಂದ ತೀರ್ಥಾ ಖ್ಯೆಮ್ ಜ್ಞಾನ ಸಮೃದ್ಧಯೇ (ಫಾಲ್ಗುಣ ಕೃಷ್ಣ ಪಂಚಮಿ ಅಹೋತ್ತೇ ಆರಾಧನ) ಗೋವಿಂದ ಒಡೆಯರ್ ಅವರು ಹೀಗೆ ನುಡಿದಿದ್ದಾರೆ. ನಾನು ಈ ವರೆಗೆ ವೇದವ್ಯಾಸರ ಸಿದ್ಧಾಂತದ ವಿರುದ್ಧದ ತತ್ವ ಮಾಯಾ ವಾದ ದಲ್ಲಿ ಇದ್ದೆ. ಮಧ್ವಸಿದ್ಧಾಂತ ವೈಷ್ಣವ ಧರ್ಮ ಪೂಜ್ಯ ಶ್ರೀವ್ಯಾಸರಾಯರು ಈ ಎಲ್ಲವೂ ನನಗೆ ಬಹು ಪ್ರೀತಿಕರವಾಯಿತು. ಶ್ರೀವ್ಯಾಸರಾಯರಿಗೆ ಶರಣಾದೆ. ಈ ಮಾಯಾವಾದದಿಂದ ನಾನು ಹೊರಬಂದು ಪೂಜ್ಯ ಶ್ರೀ ವ್ಯಾಸರಾಯರಿಗೆ ನಮಿಸಿ ಶಿಷ್ಯತ್ವ ಸ್ವೀಕರಿಸಲು ಅನುಮತಿಸಿ ಎಂದು ಪ್ರಾರ್ಥಿಸಿದೆ. ಶ್ರೀವ್ಯಾಸರಾಯರು ಸಂತೋಷದಿಂದ ಸಮ್ಮತಿಸಿದರು ಹಾಗೂ ದಂಡ ಪಲ್ಲಟ ಸನ್ಯಾಸ ದೀಕ್ಷೆ ನೀಡಿದರು ತಪ್ತಾಂಕನ ಮಂತ್ರೋ ಪದೇಶವಾಯಿತು. ಶ್ರೀಗೋವಿಂದ ತೀರ್ಥರು ಎಂದು ಹೆಸರಾದೆ.

ನವವೃಂದಾವನ ಅಂದರೆ ಗೋವಿಂದ ಒಡೆಯರ ವೃಂದಾವನವೂ ಸೇರಿದಂತೆ ಆ ಎಲ್ಲ ಚಿತ್ರಗಳು ಲಭ್ಯವಿವೆ. ಇವರ ಕೀರ್ತನ ಸಾಮಾಗ್ರಿ ಲಭ್ಯ ಆಗಬೇಕಾಗಿದೆ. ದಾಸಸಾಹಿತ್ಯದ ಅಧ್ಯಯನದ ವಿಸ್ತಾರವು ಆದಂತಾಗುತ್ತದೆ. ಕೀರ್ತನ ಸಂಪದ ಮೌಲ್ಯ ವಿಚಾರ ಎಲ್ಲ ಪುನ ರ್ಚಿಂತನ ಮಾಡಬಹುದು. ಅನುಕೂಲವಾದಲ್ಲಿ ಪುಸ್ತಕ ಒಂದನ್ನು ಕೂಡ ತರಬಹುದು ಎಂದೆನಿಸುತ್ತದೆ. ಗೋವಿಂದ ಒಡೆಯರ್ ಅವರು ಆಗ ಶಾಶ್ವತವಾಗಿ ಇನ್ನೂ ದಾಸಸಾಹಿತ್ಯ ಪ್ರಿಯರಲ್ಲಿ ಉಳಿಯುತ್ತಾರೆ.

# ಪಯೋವ್ರತ

- ಶ್ರೀಮತಿ ಮಾಧುರಿ ದೇಶಪಾಂಡೆ

ಫಾಲ್ಗುಣ ಮಾಸದ ಪಾಡ್ಯದಿಂದ ಆರಂಭಿಸಿ ದ್ವಾದಶಿಯವರೆಗೂ ಈ ವ್ರತವನ್ನು ಆಚರಿಸಲಾಗುತ್ತದೆ. ಪಯೋವ್ರತದ ಬಗೆಗೆ ಭಾಗವತ ಪುರಾಣದಲ್ಲಿ ಉಲ್ಲೇಖವಿದೆ. ಪಯೋವ್ರತವನ್ನು ಆಚರಿಸುವುದರಿಂದ ಭಗವಂತನ ಸಂತೃಪ್ತಿ ಹೊಂದಿ ಸಂಪತ್ತು, ಪುತ್ರ ಭಾಗ್ಯ ಮೊದಲಾದ ಅನುಗ್ರಹವನ್ನು ಮಾಡುವನು. ಈ ವ್ರತವನ್ನು ಬ್ರಹ್ಮದೇವರು ಕಶ್ಯಪರಿಗೆ ಉಪದೇಶಿಸಿದ್ದರು ಅದನ್ನೆ ಕಶ್ಯಪರು ಅದಿತಿ ದೇವಿಗೆ ಉಪದೇಶ ಮಾಡಿದರು.

ಹಿಂದೆ ಕಶ್ಯಪರು ಅದಿತಿ ದೇವಿ ಬಳಿ ಬಂದಾಗ ಅವಳು ಬಹಳ ಉದಾಸವಾಗಿರುವುದು ಅಳುತ್ತಿರುವುದು ಕಂಡು ಬಂದಿತು ಏಕೆಂದರೆ ಅವಳ ಪುತ್ರರಾದ ದೇವತೆಗಳನ್ನು ದೈತ್ಯರು ಸ್ವರ್ಗದಿಂದ ವಂಚಿತರನ್ನಾಗಿ ಮಾಡಿದಾಗ ಅವರುಗಳು ಅಲ್ಲಲ್ಲಿ ಅಲೆಯುತ್ತಿದ್ದರು. ಮಕ್ಕಳು ಹತ್ತಿರ ಇಲ್ಲದಿರುವುದಕ್ಕೆ ದುಃಖಭರಿತಳಾದ ಹೆಂಡತಿಯು ಕಶ್ಯಪರು ಸಮಾ ಧಾನ ಪಡಿಸಿದರು. ಆಗ ಕಶ್ಯಪರು ಅದಿತಿ ದೇವಿಗೆ ಬ್ರಹ್ಮದೇವರು ಹೇಳಿದ ಪಯೋವ್ರತದ ಬಗೆಗೆ ಹೇಳುತ್ತಾರೆ. ಫಾಲ್ಗುಣ ಮಾಸದ ಪಾಡ್ಯದಿಂದ ಹಿಡಿದು ದ್ವಾದಶಿಯವರೆಗೂ ಕೇವಲ ಹಾಲನ್ನು ಮಾತ್ರ ಸೇವಿಸಬೇಕು ಭಕ್ತಿಯಿಂದ ಪರಮಾತ್ಮನ ಪೂಜೆಯನ್ನು ಮಾಡಬೇಕು. ಅಮಾವಾಸ್ಯೆಯ ದಿನ ಚಂದ್ರನ ಸ್ಪರ್ಶ ಇರುವ ದಿನ ಕಾಡು ಹಂದಿಯು ತೋಡಿಟ್ಟ ಮಣ್ಣನ್ನು ಎತ್ತಿಟ್ಟುಕೊಂಡು ಶೌಚ ಹಾಗೂ ಸ್ನಾನಕ್ಕೆ ಅದನ್ನು ಬಳಸಬೇಕು. ಪುಣ್ಯನದೀ ತೀರಗಳಲ್ಲಿ ಶ್ರೇಷ್ಠ ಇರದೇ ಹೋದರೆ ಬಾವಿಯ ನೀರಿನಲ್ಲಿ ಸ್ನಾನ ಮಾಡಬೇಕು ಮಾನಸಿಕ ಹಾಗೂ ಬಾಹ್ಯ ಶುದ್ಧಿಯೊಂದಿಗೆ ಸಂಪೂರ್ಣ ಭಕ್ತಿ ಪೂರ್ವಕವಾಗಿ ವ್ರತವನ್ನು ಆಚರಿಸಬೇಕು. ಮೊದಲಿಗೆ ದೈನಂದಿನ ಎಲ್ಲ ಕರ್ಮಗಳನ್ನು ಮಾಡಿ ಪರಮಾತ್ಮನ ಬಲಿಪೀಠ, ಸೂರ್ಯ, ನೀರು, ಬೆಂಕಿ ಮತ್ತು ಆಧ್ಯಾತ್ಮಿಕ ಗುರುಗಳ ಪೂಜೆಯನ್ನು ಮಾಡಬೇಕು.

ಈ ಹನ್ನೆರಡು ದಿನಗಳಲ್ಲಿ ತ್ರಿಕಾಲ ಸ್ನಾನ-ಸಂಧ್ಯಾವಂದನೆ ಬ್ರಹ್ಮಚರ್ಯಪಾಲನೆ, ಅನವಶ್ಯಕವಾದ ಮಾತನಾಡದಿರುವುದು, ಭಗವಂತನ ಉಪಾಸನೆ, ಬ್ರಾಹ್ಮಣ ಸಂತರ್ಪಣೆ ಜೊತೆಗೆ ದಾನವನ್ನು ತಪ್ಪದೇ ಮಾಡಬೇಕು. ನೂರೆಂಟು ಬಾರಿ ದ್ವಾದಶ ಅಷ್ಟಾಕ್ಷರ ಮಂತ್ರ ಜಪ, ಪ್ರದಕ್ಷಿಣೆ ನಮಸ್ಕಾರ, ದಿನವೂ ಪಾಯಸ ನೈವೇದ್ಯ, ನಿತ್ಯವೂ ಶ್ರೀಹರಿಗೆ ಹಾಲಿನ ಅಭಿಷೇಕ, ನಾರಾಯಣ ಅಷ್ಟಾಕ್ಷರ ಮಂತ್ರದೊಂದಿಗೆ ಪಾಯಸವನ್ನು ಅಗ್ನಿಗೆ ಹಾಕುತ್ತಾ ಹೋಮವನ್ನು ಮಾಡಬೇಕು.

ಕೊನೆಯ ದಿನ ತ್ರಯೋದಶಿಯಂದು ತುಪ್ಪ ಬೆಲ್ಲ ಸಹಿತವಾದ ಭಕ್ಷ್ಯವನ್ನು ಮಾಡಿ ನೈವೇದ್ಯ ಮಾಡಬೇಕು. ಪೂಜೆ, ಹೋಮ ಮತ್ತು ವಸ್ತ್ರ, ಧನ ಆದಿಗಳ ದಾನವನ್ನು ಮಾಡಿ ಬ್ರಾಹ್ಮಣರನ್ನು ಸಂತೋಷ ಪಡಿಸಬೇಕು ಎಂದು ಹೇಳುತ್ತಾರೆ.

ಪತಿಯ ಉಪದೇಶವನ್ನು ಕೇಳಿ ಅವರ ಆದೇಶದಂತೆ ಪಯೋವ್ರತವನ್ನು ಅದಿತಿ ದೇವಿಯು ಮಾಡಿ ಪರಮಾತ್ಮನನ್ನೇ ಪುತ್ರನ ರೂಪದಲ್ಲಿ ಪಡೆಯುತ್ತಾಳೆ.

ಪಯೋವ್ರತವನ್ನು ಸರ್ವಯಜ್ಞ ಎಂದು ಕರೆಯುತ್ತಾರೆ. ಒಬ್ಬ ಮನುಷ್ಯನು ಜೀವನದಲ್ಲಿ ಮಾಡಬಹುದಾದ ಎಲ್ಲ ಯಜ್ಞಗಳಲ್ಲೂ ಮಾಡುವ ಅನುಶಾಸನ ಮತ್ತು ವ್ರತನೇ ಮಾದಿಗಳನ್ನು ಈ ಒಂದು ವ್ರತದಲ್ಲಿ ಮಾಡಬಹುದು. ಇದು ಒಂದು ರೀತಿಯ ತಪಸ್ಸಾಗಿದೆ ಎಂದು ಕಶ್ಯಪ ಋಷಿಗಳು ಅದಿತಿ ದೇವಿಗೆ ಉಪದೇಶಿಸಿ ವ್ರತವನ್ನು ಮಾಡಿಸುತ್ತಾರೆ. ಹೀಗೆ ಕಶ್ಯಪರು ಉಪದೇಶಿಸಿದ ಪಯೋವ್ರತವನ್ನು ಆಚರಿಸಿ ಭಗವಂತನ ಅನುಗ್ರಹಕ್ಕೆ ಪಾತ್ರಗಳಾದ ಅದಿತಿ ದೇವಿಯು ಸ್ವತಃ ಪರಮಾತ್ಮನೇ ಅವಳ ಮಗನಾಗಿ ಜನಿಸಿಬೇಕೆಂದು ಕೇಳಿದ ಕಾರಣ ವಾಮನ ಅವತಾರವನ್ನು ಧರಿಸಿ ಕಶ್ಯಪ ಅದಿತಿಯರ ಮಗನಾಗಿ ಉದ್ಭವಿಸಿ ಅವರನ್ನು ಉದ್ಧರಿಸಿದ ಕಾರಣ ಇಂದಿಗೂ ಜನರು ಸತ್ ಸಂತಾನಕ ಹಾಗೂ ಸಂಪತ್ತು ಸಮೃದ್ಧಿ ಹಾಗೂ ಪರಮಾತ್ಮನ ಅನುಗ್ರಹ ಪಡೆಯಲು ಪಯೋವ್ರತವನ್ನು ಆಚರಿಸುತ್ತಾರೆ.

ಕೇವಲ ಹಾಲನ್ನು ಮಾತ್ರ ಸೇವಿಸುತ್ತಾರೆ. ಕಾರಣ ಹಾಲು ಪವಿತ್ರವಾದ ಗೋವಿನಿಂದ ಉತ್ಪತ್ತಿಯಾದುದು ಮತ್ತು ಪರಿಶುದ್ಧವಾದ ಆಹಾರವಾಗಿದೆ. ವ್ರತನೇಮಾದಿಗಳನ್ನು ಮಾಡುವ ಸಮಯದಲ್ಲಿ ದೈಹಿಕ ಶುದ್ಧಿಯಷ್ಟೇ ಮಹತ್ವವು ಮಾನಸಿಕ ಶುದ್ಧತೆಗೂ ಇರುವುದರಿಂದ ಪ್ರಚೋದಕ ಆಹಾರವನ್ನು ಸೇವಿಸಿದೇ ಸಾತ್ವಿಕ ಆಹಾರವನ್ನು ಸೇವಿಸಿ ಒಳ್ಳೆಯ ಮನಸ್ಸಿನಿಂದ ವ್ರತಾಚರಣೆಯನ್ನು ಬ್ರಹ್ಮಚರ್ಯ ಸತ್ಯನಿಷ್ಠೆ ಯಾವುದೇ ಲೌಕಿಕ ಜಂಜಾಟಗಳಲ್ಲಿ ಮುಳುಗದೇ ಭಕ್ತಿಯಿಂದ ಕೇವಲ ಭಗವಂತನ ಧ್ಯಾನ ಉಪಾಸನೆಯನ್ನು ಮಾಡಿದಾಗ ಅವನನ್ನು ಪೂಜಿಸಿದಾಗ ಉತ್ತಮವಾದ ಫಲ ದೊರೆಯುವುದು.

ಹೀಗೆ ಪಯೋವ್ರತ ಮಾಡಿ ಅದಿತಿ ದೇವಿ ವಾಮನನ್ನು ಪಡೆದಂತೆ ಶ್ರೀಮದಾಚಾರ್ಯರ ತಾಯಿ ವೇದವತಿಯು ಕೂಡ ಪಯೋವ್ರತ ಆಚರಿಸಿ ವಾಸುದೇವನನ್ನು ಪಡೆದರು ಅವರೇ ಮುಂದೇ ಪೂರ್ಣಪ್ರಜ್ಞರಾಗಿ ಮಧ್ವಮತ ಪ್ರಚಾರ ಮಾಡಿದರು.

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

– ಮೂಲ : ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ
– ಅನುವಾದ : ಶ್ರೀಮತಿ

**ಕಳೆದ ಸಂಚಿಕೆಯಿಂದ**

"ಗಿರಿ ಪ್ರದಕ್ಷಿಣಂ ಸಮ್ಯಕ್ಕುರ್ರ್ವಂತಸ್ತೆ ಶನೈಃ ಶನೈಃ
ಭಕ್ತ್ಯಾವನತಕೋಟೀರೈಃ ಸರ್ವಾವಸರಕಾಂಕ್ಷಿಭಿಃ
ಸೇವ್ಯತೇಽ ಹರ್ನಿಶಂ ದೇವೈಃ ಮಹಾಗಿರಿವರೋಽ ಸ್ವಹಮ್"

(ಮಲ್ಲ ಮೆಲ್ಲಗೆ ಗಿರಿಪ್ರದಕ್ಷಿಣೆ ಮಾಡುವವರನ್ನು, ಭಕ್ತಿಯಿಂದ ಕಿರೀಟವನ್ನು ಧರಿಸಿದವರನ್ನು, ಎಲ್ಲಾ ಸೇವಾವಕಾಶವನ್ನು ಕೋರುವವರನ್ನು ಮತ್ತು ಸಮಸ್ತ ದೇವತೆಗಳನ್ನು ಈ ಪರ್ವತವು ಹಗಲೂ ರಾತ್ರಿ ಸೇವಿಸಲ್ಪಡುತ್ತದೆ.)

ಎಂದು,

ಯ ಏನಂ ಸೇವತೇ ನಿತ್ಯಂ ಶ್ರದ್ಧಾಭಕ್ತಿ ಸಮನ್ವಿತಃ
ವೇಂಕಟಾದ್ರೇರ್ವಿಶೇಷೇಣ ದರ್ಶನಂ ಯತ್ರ ವರ್ತತೇ॥
ಗಿರಿಪ್ರದಕ್ಷಿಣಂ ಸಮ್ಯಕ್ಕುರ್ರ್ವಂತಸ್ತೇ ಶನೈಶ್ಶನೈಃ
ಪುರುಷಾರ್ಥಶ್ಚ ಸಿದ್ಧ್ಯಂತಿ

(ಶ್ರದ್ಧಾಭಕ್ತಿಯಿಂದ ಕೂಡಿ ಯಾರು ಈ ಒಬ್ಬವನ್ನಾರಾಧಿಸುತ್ತಾರೋ,ವೇಂಕಟಾದ್ರಿ ದರ್ಶನವು ವಿಶೇಷವಾಗಿ ಎಲ್ಲಿದೆಯೋ, ಅವರು ಮೆಲ್ಲಮೆಲ್ಲಗೆ ಉತ್ತಮ ರೀತಿಯಲ್ಲಿ ಗಿರಿಪ್ರದ ಕ್ಷಿಣೆ ಮಾಡುವವರಾಗಿ ಪುರುಷಾರ್ಥಗಳು ಸಿದ್ಧಿಸುತ್ತವೆ)

ಎಂದು ಹೇಳಿದ ರೀತಿಯಲ್ಲಿ ನಿತ್ಯಮುಕ್ತರು ನಿತ್ಯಸಂಸಾರಿಗಳನ್ನು ಸಹಾ ಯಾವುದೇ ಭೇದವಿಲ್ಲದೇ ಎಲ್ಲರನ್ನು ಆ ಆದಿಶೇಷನು (ತದ್ರೂಪವಾಗಿರುವ ಬೆಟ್ಟ ) ಭಕ್ತಿ ದರ್ಶನ-ಪ್ರದಕ್ಷಿಣೆ-ಪ್ರಣಾಮಗಳ ಮೂಲಕ ಆರಾಧಿಸಲ್ಪಡುವನು. ಸರ್ವಾರಿಷ್ಟ ನಿವೃತ್ತಿ ಪೂರ್ವಕವಾಗಿ ಸಕಲಫಲಪ್ರದವಾದ ವರಾಹ ಮೊದಲಾದ ಪುರಾಣಗಳಲ್ಲಿ ಸುಪ್ರಸಿದ್ಧವಾದ ಮಾತುಗಳಿವೆ.

ಶುಕಾದ್ಯಾ ಮುನಯಃ ಕೇಚಿತ್ ಭೃಗ್ವಾದ್ಯಾಶ್ಚ ತಪೋಧನಾಃ
ಪ್ರಹ್ಲಾದ ಪ್ರಮುಖಾಃ ಪುಣ್ಯ ಅಂಬರೀಷಾದಯಾ ನೃಪಾ ಃ
ವಿಷ್ಣೋರೇವಾಽಪರಂ ದೇಹಂ ಮನ್ವಾನಾಸ್ತಂ ನಗೋತ್ತಮಮ್
ಪದ್ಭ್ಯಾಮಾಕ್ರಮಿತುಂ ಭೀತಾಃ ಪರ್ಯಂತೇಷ್ವೇವ ವರ್ತಿನಃ
ತನ್ನಿರ್ಗತ ನದೀಷ್ವೈವ ಕುರ್ವಾಣಾಃ ಸ್ನಾನತರ್ಪಣೇ
ತಪಃ ಕುರ್ವಂತಿ ಛಾಂಧಿತಃ ಸಾಕ್ಷಾತ್ಕರ್ತುಂ ಜನಾರ್ದನಮ್

(ಶುಕರೇ ಮೊದಲಾದ ಮುನಿಗಳು, ಭೃಗುಪ್ರಭೃತ ಮೊದಲಾದ ತಪೋಧನರು ಪ್ರಹ್ಲಾದ ಮೊದಲಾದ ಪುಣ್ಯಾತ್ಮರು ಅಂಬರೀಷ ಮೊದಲಾದ ರಾಜರುಗಳು, ಈ ಪರ್ವತ ರಾಜನನ್ನು ಶ್ರೀವಿಷ್ಣುದೇವನ ಮೂರ್ತಿಯೇ ಎಂದು ಸ್ಮರಿಸುವ



## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡುತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ  ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾತೋರಣ. ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾಮಂಡಪ.

### ಶ್ರೀವೆಂಕಟೇಶ್ವರ ಧ್ಯಾನಮಂದಿರ(ಎಸ್.ವಿ.ಮ್ಯೂಜಿಯಂ) :

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.

ವರಾಗಿ ಪಾದದಿಂದ ಈ ಭೂಮಿಯನ್ನು ಮೆಟ್ಟಲು ಭಯಪಟ್ಟವರಾಗಲು, ಪ್ರಾಂತ್ಯದ ಗಡಿಯಲ್ಲೇ ವಾಸವಾಗಿ ಆ ಬೆಟ್ಟದಿಂದ ಪ್ರವಹಿಸುವ ನದಿಗಳಲ್ಲಿ ಸ್ನಾನತರ್ಪಣಗಳನ್ನು ಆಚರಿಸುವವರಾಗಿ ಶ್ರೀಮನ್ನಾರಾಯಣನನ್ನು ಸಾಕ್ಷಾತ್ಕರಿಸಿಕೊಳ್ಳಲು ತಪವನ್ನಾಚರಿಸುವವರಾದರು).

ಹೇಳಿದ ರೀತಿಯಲ್ಲಿ ಪರಾಪರತತ್ವ ಯಥಾರ್ಥ ಸ್ವರೂಪಜ್ಞರಾದ ಶುಕಾದಿ ಪರಮಯೋಗಿಗಳನ್ನು, ಪ್ರಹ್ಲಾದಾಂಬರೀಷಾದಿ ಮಹಾಭಾಗವತರನ್ನು ಈ ತಿರುಮಲೆ ಬೆಟ್ಟವನ್ನು ಭಗವಂತನ ದೇಹವೆಂದೇ ತಿಳಿದು ಪಾದಸ್ಪರ್ಶಕ್ಕೆ ಆಗದ ಭೂಮಿಯೆಂದು ತಿರುಮಲೆಯ ತಪ್ಪಲಲ್ಲೇ ವಾಸಿಸುತ್ತಾ ಭಗವದನುಭವವಾಗುವ ದಿನ ನೇಮದಂತೆ ಸ್ಕಂದ, ವಾಮನಾದಿ ಪುರಾಣಗಳಲ್ಲಿ ವ್ಯಕ್ತವಾಗುವಂತೆ ಕಾಣಿಸುವ ಮಯರ್ವ್ವರ ಮದಿನಲಮರುಳಪ್ಪೆತ್ತ (ಅಜ್ಞಾನ ಗಂಧವಲೇಯಿಲ್ಲದ ಜ್ಞಾನಭಕ್ತರನ್ನು ಅನುಗ್ರಹಿಸುವುದಕ್ಕಾಗಿಯೇ) ಎಂದು ಹೇಳಿದ ಭಗವದನುಗ್ರಹಕ್ಕೆ ಪಾತ್ರರಾದ ಆಳ್ವಾರರು ಸಹಾ **'ವೇಂಗಡತ್ತೈಪ್ಪೇಶು'** ಎಂಬ ಭಗವಂತನನ್ನು ಶೇಷಾದ್ರಿಗೆ ಅಭೇದ್ಯವಾಗಿ ಅನುಸಂಧಾನ ಮಾಡಿ ವಾನವರ್ ವಾನವರ್ ಕೋನೋಡುಂ ಶುಮುದು ಮಾಮಲರ್ ನೀರ್ಶುಡರ್ದೂಪಂ ಕೊಂಡು ನವನ್ನೇಳುಂ ದಿರುವೇಂಗಡಮ್ **'ವಿಣ್ಣಾರ್ತೋಳುವದಮ್'** (ನಿತ್ಯಮುಕ್ತರು,ಸೇನಾಪತಿಯೊಂದಿಗೆ) ಒಳ್ಳೆಯ ಪುಷ್ಪಗಳು, ತೀರ್ಥ, ದೀಪ, ಧೂಪವನ್ನು ತಂದು ಸೇವಿಸಿ (ಶ್ರೀವೇಂಕಟಾದ್ರಿ) ದೇವತೆಗಳನ್ನು ಸಹಾ ಆರಾಧಿಸಿ ಇತ್ಯಾದಿಗಳ ಮೂಲಕ ನಿತ್ಯದೇವತೆ ಸಂಕ್ಷೇವ್ಯನೆಂದೂ, 'ಆನ್ಯೆವೆರುಲಿ ಅರವಾಡುಜ್ಗುಂವೆರ್ರ್ಬ (ಆನೆಗಳು ಭಯಗೊಂಡು ನಿಲ್ಲಲು, ಹಾವುಗಳು ಸುತ್ತಿಕೊಂಡ ಬೆಟ್ಟ) 'ಇಳೈಪ್ಪನ್ ತಿರುಕ್ಕುಡಲ್ ಕೂಡತ್ತಾಮಿರುಂದ ತಿರುಮಲ್ಯೆ (ಭಗವಂತನನ್ನು ಕೂಡಲು ಕೂಡಲ್ ವೆಳೈಪ್ಪು ಪ್ರಶಸ್ತವೆನಿಸಿಕೊಂಡ ವೇಂಕಟಾದ್ರಿ) ಎಂದೂ ಶೇಜ್ಗುಯಲ್ ತಿಳೈಕ್ಕುಮೇಶುನ್ಯೆ ತಿರುವೇಂಗಡಮ್ (ಮೇಲಾಗಿ ಸಾಗರದಲ್ಲಿ ಮೀನು ವಿಹರಿಸುವಂತೆ ಶ್ರೀವೇಂಕಟಾದ್ರಿಯಲ್ಲಿ ಓ ಮನಸೇ ನೀ ಆಶ್ರಯಗೊಳ್ಳುವೆ) ಎಂದು ಒಂದು ಬಾರಿ ಹೇಳಿದರೆ 9 ಬಾರಿ ಅವರೇ ಭಗವದ್ವಾಕ್ಯವೆಂದು ತಮ್ಮ ಶ್ರೀಹೃದಯವನ್ನುದ್ದೇಶಿಸಿ ಉಪದೇಶ ಮಾಡಲು, ಪರನ್ಶನ್ಮು ಶೇರ್ ತಿರುವೇಂಗಡಾಮಾಲ್ಯೆ ಬನ್ನಮೇತಾಳನಮ್ ವಿನ್ಯೆ ಜಯವೇ (ಪರಮಾತ್ಮ ಬಂದು ಸೇರಿದ ಶ್ರೀವೇಂಕಟಾಚಲವೆಂಬ ಶ್ರೇಷ್ಠವಾದ ಬೆಟ್ಟವನ್ನೇರಿ ಸೇವೆ ಮಾಡುವ ನಮ್ಮ ಪಾಪಗಳೆಲ್ಲವೂ ತೀರಿ ಹೋಗುವುವು).

- ಮುಂದುವರೆಯುತ್ತದೆ.

# ಹೋಳಿ ವರ್ಣಮಯ ಉತ್ಸವ ಸರಣಿ



**– ಶ್ರೀಮತಿ ಕೆ.ವಿ. ಪದ್ಮಾವತಿ**
**97437 22327**

ಹೋಳಿ ಎಂದರೆ ಬಣ್ಣದೋಕುಳಿ-ಸಡಗರ-ಸರಸ-ಚೆಲ್ಲಾಟಗಳ ದೃಶ್ಯ ಕಣ್ಮುಂದೆ ಬರುತ್ತದೆ. ಹೌದು, ಇದು ಸರಸ -ಸಂತೋಷಗಳ ಬಣ್ಣವನ್ನು ಹೆಚ್ಚಿಸಲೆಂದೇ ಬರುವ ಹಬ್ಬ. ಭಾರತದ ಅತಿ ಪ್ರಾಚೀನ ಹಬ್ಬಗಳೆಲ್ಲ ಸರಸ ವಿನೋದಗಳಿಂದ ಕೂಡಿರುವಂತಹವು. ಇಲ್ಲಿ ದೇವರ ಧ್ಯಾನ,ಪೂಜೆ, ದಾನಧರ್ಮಗಳು ಎಷ್ಟು ಮುಖ್ಯವೋ ಸಂತಸ-ಸಂಭ್ರಮಗಳೂ ಕೂಡ ಅಷ್ಟೇ ಮುಖ್ಯ.

ವಸಂತೋತ್ಸವವು ಫಾಲ್ಗುಣ-ಚೈತ್ರಮಾಸಗಳುದ್ದಕ್ಕೂ ಜರುಗುವ ವೈವಿಧ್ಯಮಯ-ವರ್ಣಮಯ ಉತ್ಸವಸರಣಿ. ಇದು ರಾಜ-ಪೋಷಣೆಯಲ್ಲಿ ಭಾರೀ ಪ್ರಮಾಣದ ನಾಡಹಬ್ಬವಾಗಿ ನಡೆಯುತ್ತಿತ್ತು. ಊರ ಜನರಿಗೆ ಹಾಗೂ ಪ್ರವಾಸಿಗರೆಲ್ಲ ಭಾರಿ ವೆಚ್ಚದಲ್ಲಿ ರಸಮಯ ಔತಣಗಳನ್ನು, ವಸತಿ ಸೌಕರ್ಯಗಳನ್ನೂ, ಹಲವು ಬಗೆಯ ಮನೋರಂಜನೆ ಹಾಗೂ ಧಾರ್ಮಿಕ ಕಲಾಪಗಳನ್ನು ಆಯೋಜಿಸಲಾಗುತ್ತಿತ್ತು. ಈ ವಾರ್ಷಿಕ ಉತ್ಸವಗಳಿಗಾಗಿಯೇ ದೇಗುಲಗಳಲ್ಲಿ, ಪ್ರಮುಖ ಬೀದಿಗಳಲ್ಲಿ ಅರಮನೆಯ ಅಂಗಳದಲ್ಲಿ ವಸಂತಮಂಟಪ,ವಸಂತಭವನ,ಸರಸ್ವತೀ-ಭವನಾದಿಗಳನ್ನು ಕಟ್ಟಿಸಿಡಲಾಗುತ್ತಿತ್ತು! ನಮ್ಮ ಪ್ರಾಚೀನ ದೇಗುಲಗಳಲ್ಲಿನ ವಿಶಾಲ ಅಂಗಳಗಳು, ವಸಂತ ಮಂಟಪಗಳು, ಓಕುಳಿಯಾಡಲು ಬಳಸಲಾಗುತ್ತಿದ್ದ ಕಲ್ಲಿನ ಕೊಳಗಳು, ಬಗೆಬಗೆಯ ವಾದ್ಯಗಳು, ಸಂಪ್ರದಾಯದ ಗೀತ ನೃತ್ಯಗಳು, ಕಥೆಗಳೂ ಮುಂತಾದವೂ ಇದನ್ನೇ ಸಾರುತ್ತದೆ.

ಬಣ್ಣಗಳು ಕೇವಲ ಕಣ್ಣಿಗೆ ಹಿತ ನೀಡುವ ವಸ್ತುಗಳಾಗದೇ ನಮ್ಮ ಸುಪ್ತ ಆಕಾಂಕ್ಷೆಗಳನ್ನು ಪ್ರಕಟಿಸುವ ವೈವಿಧ್ಯಮಯ ಸಂಕೇತಗಳಾಗುತ್ತವೆ. ಅರ್ಥ ಪೂರ್ಣ ರೂಪಕಗಳಾಗುತ್ತವೆ. ಇಲ್ಲದ ದೇವರನ್ನು ಕಾಣಲು, ವಿಕಾರಗೊಳ್ಳುವ ಮಾನವ ಹಣೇಬರಹವನ್ನು ಬದಲಿಸಲು, ಬದುಕಿನ ಬೇಗೆಯಿಂದ ತಪ್ತಗೊಂಡ ಮನಸ್ಸನ್ನು ತಣಿಸಲು, ಪ್ರೇಮಕಾಮಗಳನ್ನು ಸಾಧಿಸಲು, ಮಕ್ಕಳಿಗೆ ಉಣಿಸಲು, ಬೆಚ್ಚಗಿನ ತಾಯ ಮಮತೆಯನ್ನು ಅರಿಯಲು, ಹಿತವಾದುದನ್ನು ಹಂಚಿಕೊಳ್ಳಲು, ಸುಪ್ತಭಾವೆಗಳನ್ನು ಅಭಿವ್ಯಕ್ತಿಸಲು ಅಷ್ಟೇ ಏಕೆಮೋಕ್ಷ ಸಾಧನೆಗೂ ಕೂಡ ಈ ಬಣ್ಣಗಳು ಸೋಪಾನಗಳಾಗಿವೆ ಎಂದರೆ ಅತಿಶಯೋಕ್ತಿಯಲ್ಲ.

ಹೋಳಿ ಆಚರಣೆಯು ಒಂದು ನವಾನೇಷ್ಟಿಯಜ್ಞ ಉತ್ತರ ಭಾರತದ ಹೋಳಿ ಆಚರಣೆಗೆ ಪೌರಾಣಿಕೆ ಕತೆಯೊಂದರ ಸ್ಫೂರ್ತಿ ಕಾರಣ. ದಕ್ಷಿಣ ಭಾರತದಲ್ಲಿ ಆಚರಿಸುವ ಹೋಳಿಗೂ ಪುರಾಣದ ಕತೆಯಾದ ಮನ್ಮಥನ ಕತೆ ಆಸರೆಯಾಗಿದೆ. ಉತ್ತರ ಭಾರತದ್ದು ಪ್ರಹ್ಲಾದನ ಕತೆ. ಪ್ರಹ್ಲಾದನಿಗೆ ಒಬ್ಬ ಚಿಕ್ಕಮ್ಮ, ಅವಳ ಅಣ್ಣ ಹಿರಣ್ಯಕಶಿಪು ತನ್ನ ಮಗ ಪ್ರಹ್ಲಾದನನ್ನು ಅವಳ ತೊಡೆಯ ಮೇಲೆ ಕೂರಿಸಿ ಅವನಿಗೆ ಬೆಂಕಿಯಿಡುತ್ತಾನೆ. ಪ್ರಹ್ಲಾದ ಪರಮ ಹರಿಭಕ್ತ. ಪ್ರಹ್ಲಾದನ ಹರಿಭಕ್ತಿಯಿಂದಾಗಿ ಹೋಲಿಕಾ ಆ ಅಗ್ನಿಯಲ್ಲಿ ಸುಟ್ಟು ಭಸ್ಮವಾಗುತ್ತಾಳೆ. ಪ್ರಹ್ಲಾದ ಉಳಿದುಕೊಳ್ಳುತ್ತಾನೆ. ಈ ಘಟನೆ ಘಟಿಸಿದ್ದೂ ಇಂದು ಹೋಳಿ ನಡೆಯುವ ದಿನವೇ. ಹಿರಣ್ಯಕಶಿಪು ಮರಣವಾದದ್ದು ಇದೇ ದಿನ. ಇದು ದುಷ್ಟ ನಿಗ್ರಹ, ದುರ್ಗುಣದ ದಿನವಾಗಿತ್ತು. ಹೋಲಿಕಾ ಸತ್ತ ದಿನವಾದ್ದರಿಂದ ಹೋಳಿಗೆ ಆ ಹೆಸರು ಬಂತು.

ಹೋಳಿಯ ಸಮಯ ಚಳಿ ಕಡಿಮೆಯಾಗಿ ಗಿಡ ಮರ ಬಳ್ಳಿಗಳು ಚಿಗುರುವ ಕಾಲ. ವಸಂತಾಗಮನದ ಶುಭಾರಂಭ. ಉತ್ತರ ಭಾರತದಲ್ಲಿ ಗೋಧಿ ಕಡಲೇ ಕೊಯ್ಲಿಗೆ ಬಂದಿರುತ್ತದೆ. ಮಾನವನ ಉಪಯೋಗಕ್ಕೆಂತಲೇ ಬೆಳೆದು ನಿಂತ ಈ ಬೆಳೆಗೆ ಭಗವಂತನ ಕೃಪೆಯೇ ಕಾರಣವೆಂಬ ಭಾವನೆ. ಆದ್ದರಿಂದ ಮೊದಲ ನೈವೇದ್ಯ ಅವನಿಗೆ. ಇನ್ನೊಂದು ದುಷ್ಟನಿಗ್ರಹದ ದಿನ. ದೈತ್ಯ ಶಕ್ತಿಯ ದಮನ. ಈ ಎರಡೂ ಭಗವಂತನ

ದೊಡ್ಡ ಗುಣದಿಂದಾದ್ದು. ಈ ದಿನ ಹಸುವಿನ ನಾಲ್ಕೂ ಗೊರಸುಗಳ ಅಡಿಯ ಧೂಳು ತೆಗೆದು ಅದರೊಂದಿಗೆ ಧಾನ್ಯಗಳ ಹಾಲು ತೆನೆ ಬೆರಸಿ ಸುಡುವುದರ ಮೂಲಕ ಆಹುತಿ ಕೊಡುತ್ತಾರೆ. ಇದರಿಂದ ಭೂಮಿ ಫಲವತ್ತಾಗುತ್ತದೆಂಬ ನಂಬಿಕೆ. ಇದು ಹೋಳಿ ಹಬ್ಬಕ್ಕೆ ಮುನ್ನಾದಿನ ನಡೆಯುವ ಕಾರ್ಯ ರೂಪ. ಈ ಮಂಗಲೋತ್ಸವ ದಿನ ಜನ್ಮಜನ್ಮಾಂತರದಿಂದಲೂ ಇದ್ದ ವೈರ ವೈಮನಸ್ಸು ಸಾಯುತ್ತದಂತೆ. ಪ್ರೀತಿ, ಅನುರಾಗ ವಾತ್ಸಲ್ಯದ ಮಹಾಪರ್ವ ಹೋಳಿ ಮಹೋತ್ಸವ, ಹೋಳಿ ಒಂದು ಯಜ್ಞವೆಂದು ಕರೆದ ಹಿರಿಯರು ಈ ರೀತಿ ನಡೆದುಕೊಂಡು ಭಸ್ಮ ವಂದನೆ ಮಾಡುತ್ತಾರೆ. ಭಗವಂತನಿಗೆ ಅಭಿಷೇಕವಾಗುತ್ತದೆ. ಆದರೀಗ ಇದರ ಅಂತರಾರ್ಥ ಅರಿಯದೇ ಬಡಾ ಹೋಳಿಯೆಂದು ಹೋಳಿ ಹೈ ಎಂದು ಕೂಗುತ್ತಾ ಬಣ್ಣ ಎರುಚುತ್ತಾರೆ. ಪುಂಡಾಟಿಕೆಯ ಪರ್ವವಾಗಿ ಮಾರ್ಪಟ್ಟಿದೆ. ಏನೇ ಆದರೂ ಹೋಳಿ ಹಬ್ಬ ಸೌಹಾರ್ದತೆಗೆ ನಾಂದಿ ಹಾಡುತ್ತಿರುವುದಂತೂ ಸುಳ್ಳಲ್ಲ.

ಹೋಳಿ ಹಬ್ಬವೆಂದರೆ ರಂಗಿನಾಟ, ಬಣ್ಣದ ಓಕುಳಿಯೊಡನೆ ಆಡುವ ಚೆಲ್ಲಾಟ ಬಣ್ಣದೊಡನಾಟ ಮನಸ್ಸಿಗೆ ಮುದಕೊಟ್ಟರೆ, ಆಯ್ಕೆ ಮಾಡಿಕೊಳ್ಳುವ ಬಣ್ಣ ಮನೋಭಾವನೆಯ ಪ್ರತೀಕವಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿ ತನ್ನದೇ ಆದ ವ್ಯಕ್ತಿತ್ವ ಹೊಂದಿರುತ್ತಾನೆ. ಅವನ ಅರಿವಿಗೆ ಬಾರದಂತೆ ಅವನ ಸುತ್ತ ಪ್ರಭಾವಲಯ (ದಿವ್ಯಪ್ರಭೆ ಅಥವಾ ಔರ) ಹರಡಿಕೊಂಡಿರುತ್ತದೆ. ಈ ದಿವ್ಯ ಪ್ರಭೆಯನ್ನು ಆಧರಿಸಿಯೇ ವ್ಯಕ್ತಿಯ ವ್ಯಕ್ತಿತ್ವ ಅಥವಾ ಆಧ್ಯಾತ್ಮಿಕ ಸಾಧನೆಯಲ್ಲಿ ಆತನೆಷ್ಟು ಮುಂದೆ ಸಾಗಿದ್ದಾನೆ. ಆತನ ಚಿಂತನೆಗಳು ಉದಾತ್ತವಾಗಿವೆಯೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಬಹುದು. ಉದಾಹರಣೆಗೆ, ನೀವು ಆಧ್ಯಾತ್ಮ ಸಾಧನೆಯಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿರುವ ವ್ಯಕ್ತಿಯೊಬ್ಬನನ್ನು ನೋಡುತ್ತೀರಿ.

ಆತ ತೀರಾ ಸಾಮಾನ್ಯ ಮನುಷ್ಯನಂತೆ ಕಂಡರೂ, ಸರಳ ಉಡುಗೆಗಳನ್ನು ತೊಟ್ಟಿದ್ದರೂ ನಿಮ್ಮ ಗಮನ ಸೆಳೆಯುತ್ತಾಳೆ. ಕಾರಣ, ಆತನ ಸುತ್ತಲಿರುವ ದಿವ್ಯ ಪ್ರತಿಭೆಯ ಹೊಳಹು. ಆ ಬೆಳದಿಂಗಳ ಬೆಳಗು, ಅದೇ ಮತ್ತೊಬ್ಬ ವ್ಯಕ್ತಿ ಅದೆಷ್ಟೇ ಸುರದ್ರೂಪಿಯಾಗಿದ್ದರೂ ಗಮನ ಸೆಳೆಯುವುದಿಲ್ಲ. ಕಾರಣ ಆತನ ಸುತ್ತಲಿರುವ ದಿವ್ಯಪ್ರಭೆ ಮಂಕಾಗಿರುತ್ತದೆ.

ಹೋಳಿ, ಫಲವಂತಿಕೆಯನ್ನು ವೃದ್ಧಿಸುವ ಹಾಗೂ ವರ್ಷವನ್ನು ಪುನಃ ಶ್ಚೇತನಗೊಳಿಸುವ ಹಬ್ಬ. ಹೋಳಿ ಹುಣ್ಣಿಮೆ ದಿವಸ ಕಾಮನ ಸುಂದರ ಪ್ರತಿಮೆ ಮಾಡಿಸಿ ಶೃಂಗರಿಸಿ, ಊರಿನಲ್ಲಿರುವ ಕಾಮನ ಕಟ್ಟೆಯ ಮೇಲೆ ಹಂದರ ಕಟ್ಟಿ ಇಟ್ಟಿರುತ್ತಾರೆ. ಎಡಗಡೆ ಚೆಲುವೆಯಾದ ಆಕರ್ಷಕ ಮೈಕಟ್ಟಿನ ರತಿದೇವಿಯ ಮೋಹಕ ಪ್ರತಿಮೆಯನ್ನು ಕೆಲವು ಕಡೆ ಇಡುವುದುಂಟು. ಕೆಲ ಊರುಗಳಲ್ಲಿ ಸರಕಾರಿ ಕಾಮಣ್ಣ, ದೈವದ ಕಾಮಣ್ಣ, ಓಣಿಯ ಕಾಮಣ್ಣ ಎಂದು ಮೂರು ಕಾಮಣ್ಣರನ್ನು ಪೂಜಿಸುತ್ತಾರೆ. ಸರಕಾರಿ ಕಾಮಣ್ಣನಿಗೆ ಊರ ದೈವದವರಿಂದ, ಓಣಿಯ ಕಾಮಣ್ಣನಿಗೆ ಓಣಿಯ ಭಕ್ತರಿಂದ ಮಾನ ಮನ್ನಣೆ ದೊರೆಯುತ್ತದೆ.

'ಕಾಮನ ಮಾನ ' ಗಳೆಂಬ ಭೂಮಿ ಉಂಬಳಿಯಾಗಿ ನೀಡಿದ ದಾಖಲೆಗಳಿವೆ. ಹೋಳಿ ಹಬ್ಬಕ್ಕೆ ದೊಡ್ಡ ಪರಂಪರೆ ಇದೆ ಕಾಮನ ವಿಚಾರವಾಗಿ ಋಗ್ವೇದ ಅಥವಾ ವೇದಗಳಲ್ಲಿಯೂ ಉಲ್ಲೇಖವಿದೆ. ಸ್ಕಂದ ಪುರಾಣ ಮತ್ತು ಶಿವ ಪುರಾಣದಲ್ಲಿ ಕಾಮನ ಉಲ್ಲೇಖ ಬರುತ್ತದೆ. ಪ್ರಸಿದ್ಧ ಸಂಸ್ಕೃತ ನಾಟಕಕಾರ ಕಾಳಿದಾಸನೂ ತನ್ನ ಕಾವ್ಯದಲ್ಲಿ ಹೋಳಿಯನ್ನು ಉಲ್ಲೇಖಿಸಿದ್ದಾನೆ. ಹೋಳಿಗೆ ತಿನ್ನುವ ಹೋಳಿಗೆ ಹೇಳುತ್ತಿದ್ದಂತೆ ನ್ನನ್ನು ಹಾಲು ತುಪ್ಪದಲ್ಲಿ ಮುಳುಗಿಸಿದರೆ ನೀವು ತೇಲುತ್ತೀರಿ' ನನ್ನನ್ನು ತೇಲಿಸದಿದ್ದರೆ ನೀವು ಮುಳುಗುತ್ತೀರಿ ಎನ್ನುತ್ತದಂದೆ ಇದರ ಅರ್ಥ, ಬರಿ ಹೋಳಿಗೆ ತಿನ್ನುವುದು ಸರಿಯಲ್ಲ. ಹೋಳಿಗೆಯ ಜೊತೆಗೆ ಹಾಲು ತುಪ್ಪ ತಿನ್ನಬೇಕು ಎನ್ನುತ್ತಾರೆ ಹಿರಿಯರು.



ಹೋಳಿ ಹುಣ್ಣಿಮೆಗೂ ಹೋಳಿಗೆ ಊಟಕ್ಕೂ ಅದೇನೋ ಅವಿನಾಭಾವ ಸಂಬಂಧವಿದೆ. ಹೋಳಿ ಹುಣ್ಣಿಮೆಯ ಕಾಮನನ್ನು ಸುಟ್ಟು ಬಿಸಿ ಹೋಳಿಗೆ ತಿನ್ನುತ್ತಾ ಬಾಯಿ ಬಡಿದುಕೊಳ್ಳುವ ಪದ್ದೆ ಹೈದರಿಗೇನು ಕಡಿಮೆ ಇಲ್ಲ. ಹೋಳಿ ಹುಣ್ಣಿಮೆಗೂ ಹೋಳಿಗೆಗೂ ಶತಶತಮಾನಗಳ ಇತಿಹಾಸವಿದೆ.

ಯಾವುದೇ ಹಬ್ಬ ಹರಿದಿನಗಳಿರಲಿ ಬಗೆ ಬಗೆಯ ಸಿಹಿ ಊಟ ಮಾಮೂಲು. ಅದರಲ್ಲೂ ಯುಗಾದಿ ಹಾಗೂ ಹೋಳಿ ಹುಣ್ಣಿಮೆಯ ಹಬ್ಬದಲ್ಲಿ ಹೂರಣದ ಹೋಳಿಗೆಗೆ ಹೆಚ್ಚಿನ ಪ್ರಾಶಸ್ತ್ಯ.ಅದರಲ್ಲೂ ನಮ್ಮ ಜಿಲ್ಲೆಯಲ್ಲಂತೂ ಹೋಳಿಗೆ ಊಟಕ್ಕೆ ತನ್ನದೇ ಆದ ಮಹತ್ವವಿದೆ. ಹೋಳಿಗೆ ಊಟ ಸಿಹಿ ಊಟದಲ್ಲಿಯೇ ಆಗ್ರಸ್ಥಾನ ಪಡೆದಿದೆ.

ಬಣ್ಣದೋಕುಳಿ ಕೇವಲ ಮನರಂಜನೆಗಲ್ಲ! ಮಾತ್ರವಲ್ಲದೆ ವೈಜ್ಞಾನಿಕ ತಳಹದಿಯ ಪ್ರತಿಬಿಂಬದಂತಿರುವ ಹೋಳಿ ಹಬ್ಬ ಶಾಂತಿ, ಸೌಹಾರ್ದತೆ ಹಾಗೂ ಸಮೃದ್ಧಿ ಸಂಕೇತದ ಬಣ್ಣಗಳ ಬಳಕೆ ಸಮಾಜಕ್ಕೊಂದು ವಿಶಿಷ್ಟ ಸಂದೇಶ ಸಾರುವ ವೈವಿಧ್ಯತೆಯ ಪ್ರತೀಕ ಎನ್ನಲಾಗುತ್ತಿದೆ. ಒಟ್ಟಿನಲ್ಲಿ ಹಳೆಯದೆಲ್ಲವ ಮರೆತು ಹೊಸ ಚಿಗುರಿನೊಡನೆ ಬೆರೆತು ಗತವೈಭವ ಸ್ಮರಿಸುವ ರಂಗು ರಂಗಿನ ಬಣ್ಣ ದೋಕುಳಿ ಭವಿಷ್ಯದ ಯುವಪೀಳಿಕೆಯ ಭವಿತವ್ಯಕ್ಕೆ ಸಮೃದ್ಧಿಯ ಬುತ್ತಿಯಾಗಲಿ ಎನ್ನುವ ಆಶಯಕ್ಕೆ ಇಂಬು ನೀಡಲಿ ಎನ್ನುವುದು ಸರ್ವ ಜನಾಂಗಗಳ ಆಶಾಭಾವ.

108 ದಿವ್ಯ ದೇಶಗಳು

# ತಿರುಚ್ಚೆಂಪ್ಪೊನ್ ಶೆಯ್ ಕೋಯಿಲ್


## (ಶೆಂಪಾನ್ ಅರಂಗರ್ ದೇವಾಲಯ)


ಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್
ಅನುವಾದ : ಶ್ರೀಮತಿ. ಸೂರ್ಯವಂಶಿ


ಈ ದಿವ್ಯದೇಶವು ತಿರುನಾಂಗೂರ್ ದಿವ್ಯದೇಶಗಳಲ್ಲಿ ನಾಲ್ಕನೆಯದೆಂದು ಪರಿಗಣಿಸಲ್ಪಡುತ್ತಿದೆ. ಶೀರ್ಕಾಳಿಯಿಂದ 10 ಕಿ.ಮೀ. ದೂರದಲ್ಲಿ ಪೂರ್ವದಿಕ್ಕಿನಲ್ಲಿ ಅದ್ಭುತವಾದ ರಮಣೀಯವಾದ ಪ್ರಕೃತಿಯ ನಡುವೆ, ಮಹಾಮಂಟಪದೊಂದಿಗೆ, ಅರ್ಥಮಂಟಪದೊಂದಿಗೆ ಶೋಭಾಯಮಾನವಾಗಿದೆ. ಶ್ರೀರಂಗ, ತಿರುಮಲೆ, ಕಾಂಚಿ ಎಂಬ ಮೂರು ದಿವ್ಯದೇಶಗಳಲ್ಲಿ ನೆಲೆಸಿರುವ ಭಗವಂತನನ್ನು ಸೇವಿಸಿದರೆ ಎಷ್ಟು ಪುಣ್ಯ ಲಭ್ಯವಾಗುತ್ತದೋ ಈ ದಿವ್ಯ ದೇಶದಲ್ಲಿ ನೆಲೆಸಿರುವ ಸ್ವಾಮಿಯನ್ನು ಸೇವಿಸಿದರೆ ಅಷ್ಟೇ ಪುಣ್ಯವು ದೊರೆಯುತ್ತದೆ ಎಂದೂ ಹಾಗೇ ದಾರಿದ್ರ್ಯ, ಸಮಸ್ತ ದೋಷಗಳೂ ಪರಿಹಾರವಾಗುವುವು ಎಂದು ಪ್ರತೀತಿ. ಇಲ್ಲಿ ವಿರಾಜಮಾನನಾಗಿರುವ ಮೂಲಮೂರ್ತಿ ದಾಮೋದರ, ಪೇರರುಳಾಳನ್ ಎಂಬ ನಾಮಧೇಯದೊಂದಿಗೆ ಪೂರ್ವದಿಕ್ಕನ್ನು ವೀಕ್ಷಿಸುತ್ತಿರುವ ಭಂಗಿಯಲ್ಲಿ ನಿಂತಿದ್ದು, ಬಲಗೈಯಲ್ಲಿ ಅಭಯಮುದ್ರೆ,ಎಡಗೈನಲ್ಲಿ ಗದೆಯನ್ನು ಹಿಡಿದು, ಶಂಖ,ಚಕ್ರ,ಪದ್ಮ ಮೊದಲಾದ ಆಯುಧಗಳನ್ನು ಹಿಡಿದು 12 ಹಸ್ತಗಳೊಂದಿಗೆ ದರ್ಶನವನ್ನು ನೀಡುತ್ತಿದ್ದಾನೆ. ಉತ್ಸವಮೂರ್ತಿ ಹೇಮರಂಗನ್, ಶೆಂಪ್ಪೊನ್ ಅರಂಗರ್ ಎಂಬ ತಿರುನಾಮಗಳೊಂದಿಗೆ ಶ್ರೀದೇವಿ ಭೂದೇವಿ ಸಹಿತನಾಗಿ ನೆಲೆಸಿದ್ದು ಅರಸಿಬಂದ ಭಕ್ತರಿಗೆ ದರ್ಶನ ನೀಡಿ ಅನುಗ್ರಹಿಸುತ್ತಿದ್ದಾನೆ. ಅಮ್ಮನವರು 'ಅಲ್ಲಿಮಾಮಲರ್ ನಾಚ್ಚಿಯಾರ್' ಎಂಬ ತಿರುನಾಮದೊಂದಿಗೆ ಪ್ರತ್ಯೇಕ ಸನ್ನಿಧಿಯಲ್ಲಿ ನೆಲೆಸಿದ್ದು ಅನುಗ್ರಹಿಸುತ್ತಿದ್ದಾರೆ. ಈ ಸ್ಥಳದ ತೀರ್ಥವನ್ನು ನಿತ್ಯಪುಷ್ಕರಣಿ ಕನಕತೀರ್ಥವೆಂದು ಹಾಗೇ ವಿಮಾನ-ವೇದವಿಮಾನ, ಕನಕ ವಿಮಾನವೆಂದೂ ಕರೆಯುತ್ತಾರೆ. ಪ್ರತ್ಯಕ್ಷ ರುದ್ರದೇವನಿಗೆ, ಮತ್ತು ದೃಢನೇತ್ರ ಮಹರ್ಷಿಗೆ ಹಾಗೂ ಒಬ್ಬ ಬ್ರಾಹ್ಮಣನಿಗೆ ಭಗವಂತನು ಪ್ರತ್ಯಕ್ಷ ದರ್ಶನವನ್ನು ನೀಡಿದನೆಂದು ಹೇಳುತ್ತಾರೆ.ತಿರುಮಂಗೈಆಳ್ವಾರರು ಮಂಗಳಾಶಾಸನವನ್ನು ರಚಿಸಿದ್ದಾರೆ. ಇಲ್ಲಿ ಭಗವಂತನು ಪಾಂಚರಾತ್ರಾಗಮದ ಮೂಲಕ ಪೂಜೆಗಳನ್ನು ಸ್ವೀಕರಿಸುತ್ತಿದ್ದಾನೆ.

### ಸ್ಥಳ ಪುರಾಣ-1

'ರಾಮರಾವಣಯೋಃ ಯುದ್ಧಂ ರಾಮರಾವಣಯೋರಿವ' ಎಂಬ ಸೂಕ್ತಿಯನ್ನು ಅನುಸರಿಸಿ ರಾವಣನೊಂದಿಗೆ ಯುದ್ಧ ಮಾಡಿದ ರಾಮನು ರಾವಣಾಸುರನನ್ನು ಸಂಹರಿಸಿ ವಿಜಯವನ್ನು ಪಡೆದ. ನಂತರ ಪಟ್ಟಾಭಿಷಿಕ್ತನಾದರೂ ಬ್ರಾಹ್ಮಣನಾದ ರಾವಣನನ್ನು ಸಂಹರಿಸಿದ್ದರಿಂದ ತನಗೆ ಬ್ರಹ್ಮಹತ್ಯಾ ದೋಷವು ಉಂಟಾಗುವುದೇನೋ ಎಂಬ ಭಯದಿಂದ ರಾಮ ಭದ್ರನು ಆ ದೋಷವನ್ನು ಬಗೆಹರಿಸಿಕೊಳ್ಳುವುದಕ್ಕಾಗಿ ತೀರ್ಥಯಾತ್ರೆಯನ್ನು ಪ್ರಾರಂಭಿಸಿದ. ಹಾಗೇ ತೀರ್ಥಕ್ಷೇತ್ರಗಳನ್ನು ಸಂದರ್ಶಿಸುತ್ತಾ ಉಭಯ ಕಾವೇರಿ ನದಿ ಮಧ್ಯದಲ್ಲಿ ನೆಲೆಸಿರುವ ತಮ್ಮ ಕುಲಧನನಾದ ಶ್ರೀರಂಗನಾಥನನ್ನು ಆರಾಧಿಸಿದ. ಆದರೂ ಅವನ ಮನಸ್ಸು ಸಂತೃಪ್ತಿ ಹೊಂದಲಿಲ್ಲ. ಪುನಃ ತೀರ್ಥಯಾತ್ರೆಯನ್ನು ಮುಂದುವರೆಸಿ, ಶೆಂಪ್ಪೊನ್ ಅರಂಗರ್ ಎಂಬ ಈ ದಿವ್ಯಧಾಮಕ್ಕೆ ಬಂದ ಅಲ್ಲಿ ಕೌಶಿಕಮಹ



ರ್ಷಿಯ ಮಗನಾದ ದೃಢನೇತ್ರನ ಬಳಿ ತನ್ನ ಮನಸ್ಸಿನ ಸ್ಥಿತಿ ಯನ್ನು ಹೇಳಿಕೊಂಡ. ಆಗ ಆ ಮಹರ್ಷಿಯ ಕುಮಾರನು ಈ ದಿವ್ಯದೇಶದಲ್ಲೇ ಅಶ್ವಮೇಧಯಾಗವನ್ನು ಮಾಡ ಬೇಕೆಂದು ತಿಳಿಸಿದ.

ನಂತರ ಬಂಗಾರದ ಒಂದು ಗೋವಿನ ಪ್ರತಿಮೆ ಯನ್ನು ತಯಾರು ಮಾಡಿಸಿ, ನಾಲ್ಕು ದಿನಗಳ ಕಾಲ ಆ ಗೋವಿನ ಒಳಗೆ ಕುಳಿತು ತಪಸ್ಸು ಮಾಡಿ ನಂತರ ಆ ಬಂಗಾ





ರದ ಗೋವನ್ನು ವೇದ ವೇದಾಂಗಗಳನ್ನು ಕರಗತ ಮಾಡಿ ಕೊಂಡಿರುವ ಒಬ್ಬ ಬ್ರಾಹ್ಮಣನಿಗೆ ದಾನ ಮಾಡಿದರೆ ಈ ಬ್ರಹ್ಮ ಹತ್ಯಾದೋಷವು ಪರಿಹಾರವಾಗುತ್ತದೆಂದು ಉಪದೇಶಿಸಿದ. ರಾಮಭದ್ರನು ಹಲವರು ಮಹರ್ಷಿಗಳೊಂದಿಗೆ, ಮುನಿಗ ಳೊಂದಿಗೆ ಸೇರಿ ಈ ಅಶ್ವಮೇಧಯಾಗವನ್ನು ಸಮಾಪ್ತಿ ಮಾಡಿದ. ದೃಢನೇತ್ರನು ಹೇಳಿದಂತೆ ತಪಸ್ಸು ಮಾಡಿ ಆ ಬಂಗಾರದ ಗೋವನ್ನು ಒಬ್ಬ ಬ್ರಾಹ್ಮಣನಿಗೆ ದಾನ ಮಾಡಿ ಬ್ರಹ್ಮ ಹತ್ಯಾದೋಷದಿಂದ ಮುಕ್ತಿ ಪಡೆದ.

ರಾಮಭದ್ರನಿಂದ ಆ ಬಂಗಾರದ ಗೋವನ್ನು ದಾನವ ನ್ನಾಗಿ ಪಡೆದ ಬ್ರಾಹ್ಮಣೋತ್ತಮನು ಅದರಿಂದ ಅರ್ಚಾ ಮೂರ್ತಿಯಾಗಿರುವ ದಾಮೋದರನಿಗೆ ಒಂದು ಆಲಯ ವನ್ನು ಕಟ್ಟಿಸಿದ. ನಂತರ ಆ ದಾಮೋದರ ಸ್ವಾಮಿಗೆ ಶೆಂಪೊನ್ ಅರಂಗರ್ ಎಂಬ ತಿರುನಾಮವು ಪ್ರಚಲಿತವಾ ಯಿತು. ಶೆಂಪೊನ್ ಎಂಬ ಶಬ್ದಕ್ಕೆ ಒಂದು ಅಂದವಾದ ಬಂಗಾರವೆಂಬ ಅರ್ಥವಿದೆ. ಆ ರೀತಿ ತಯಾರು ಮಾಡಿದ ಬಂಗಾರದ ಗೋವಿನಿಂದ ಶೆಂಪೊನ್ ಅರಂಗರ್ ಎಂಬ ಹೆಸರಿನೊಂದಿಗೆ ಸ್ವಾಮಿಯು ಬಂಗಾರದ ಮೂರ್ತಿಯಾಗಿ ಅಲ್ಲೇ ನೆಲೆಸಿದ್ದಾನೆ.

### ಸ್ಥಳ ಪುರಾಣ - 2

ಕಾಂಚೀಪುರದಲ್ಲಿ ಅತ್ಯಂತ ದರಿದ್ರನಾಗಿದ್ದ ಕಶ್ಯಪ ನೆಂಬ ಬ್ರಾಹ್ಮಣನು ಈ ದಿವ್ಯ ದೇಶಕ್ಕೆ ಬಂದು ಒಬ್ಬ ಮಹ ರ್ಷಿಯ ಆದೇಶದ ಮೇರೆಗೆ 32,000 ಸಾವಿರ ಬಾರಿ, 3 ದಿನಗಳ ಕಾಲ ಅಷ್ಟಾಕ್ಷರೀ ಮಹಾಮಂತ್ರವನ್ನು ಜಪಿಸಿ ಈ ಶೆಂಪೊನ್ ಅರಂಗನ್‌ಸ್ವಾಮಿಯ ಅನುಗ್ರಹದಿಂದ ಸುವರ್ಣ ವಸ್ತು, ಧನ, ಧಾನ್ಯ ಸಂಪತ್ತನ್ನು ಪಡೆದು ತನ್ನ ದಾರಿದ್ರ್ಯವನ್ನು ಕಳೆದುಕೊಂಡ. ಈ ರೀತಿ ಭಕ್ತರನ್ನು ವಾತ್ಸಲ್ಯದಿಂದ ಕಾಯುವ ಈ ಸ್ವಾಮಿ ಎಲ್ಲರಿಗೂ ಇಹಲೋಕದ ಸುಖವನ್ನು ಹಾಗೇ ಆಯುಸ್ಸು, ಆರೋಗ್ಯ, ಐಶ್ವರ್ಯವನ್ನು ಮತ್ತು ಪರಮ ಪುರುಷಾರ್ಥವಾದ ಮೋಕ್ಷವನ್ನು ಕರುಣಿಸುತ್ತಾನೆ. ಆದ್ದ ರಿಂದಲೇ ಈ ಸ್ವಾಮಿಗೆ ಶೆಂಪೊನ್ ಅರಂಗರ್ ಎಂಬ ನಾಮ ಧೇಯವು ಸಾರ್ಥಕವಾಗಿದೆ ಎಂದು ಸ್ಥಳ ಪುರಾಣವು ತಿಳಿ ಸುತ್ತಿದೆ. ಇಂತಹಾ ದೇವದೇವನನ್ನು ನಾವೂ ಸೇವಿಸಿ ಸಮಸ್ತ ಸಂಪತ್ತುಗಳನ್ನು ಪಡೆದುಕೊಳ್ಳೋಣ. ಸಮಸ್ತ ದೋಷ ಗಳನ್ನು ಕಳೆದುಕೊಂಡು ಆ ಸ್ವಾಮಿಯ ದಿವ್ಯ ಪಾದಾರವಿಂದ ಗಳನ್ನು ಆಶ್ರಯಿಸಿ ಧನ್ಯರಾಗೋಣ.

ಶೆಂಪೊನ್‌ಶೆಯ ನಗರೇತು ನಿತ್ಯ
ಸರಸೀ ಸ್ವರ್ಣಾಖ್ಯ ತೀರ್ಥಾಂಚಿತೇ !
ಶ್ರೀಮಾನ್ ಪೇರರುಳಾಳ ನಾಯಕ
ಇತಿ ಸ್ವರ್ಣಾಖ್ಯ ವೈಮಾನಗಃ॥
ಪ್ರಾಗಾಸ್ಯಸ್ಥಿತಿ ರಲ್ಲಿಮಾಮಲಲಿತಿ
ಪ್ರಾಪ್ನೋತಿ ಶೇತೇ ಶ್ರಿಯಂ।
ರುದ್ರಾವೇಶಿಕ ದಿವ್ಯಮಂಗಳತನುಃ
ಶ್ರೀಮತ್ಕಲಿಘ್ನಸ್ತುತಃ॥



# ಮಾರ್ಚ್ 2025 ತಿಂಗಳ ರಾಶಿ ಫಲಗಳು



### ಮೇಷ

ಈ ರಾಶಿಯವರಿಗೆ ಶುಕ್ರನು ಮಿಶ್ರ ಫಲಗಳನ್ನೀಯುವನು. ಹೊಸ ಲೇವಾದೇವಿ ವ್ಯವಹಾರಗಳಿಗೆ ಅವಕಾಶವುಂಟು. ಅಪಾಯಗಳಿಂದ ಜಯಗಳಿಸಿ ಹೊರಬರುವುದು. ಬಂಧು ವರ್ಗದವರಿಗೆ ದುಃಖ,ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ರಾಜಿ ಸಂಧಾನ ಒಳಿತು.

### ವೃಷಭ

ಸಾಲಗಳಿಂದ ವಿಮುಕ್ತಿ ಆರ್ಥಿಕ ಸ್ಥಿರತೆ ನೀವು ಅಂದುಕೊಂಡದ್ದನ್ನು ಅಂದುಕೊಂಡ ಹಾಗೆ ಸಾಧಿಸಿಕೊಳ್ಳುವಿರಿ. ಭೂಮಿ ಖರೀದಿ ಮಾಡುವ ಪ್ರಯತ್ನಕ್ಕೆ ಶ್ರೀಕಾರ ಹಾಡುವಿರಿ. ಮನೆ ಖರೀದಿಸುವ ಅವಕಾಶಗಳು ಹೆಚ್ಚಾಗಲಿವೆ.

### ಮಿಥುನ

ಹಣವನ್ನು ಹೆಚ್ಚಾಗಿ ಖರ್ಚು ಮಾಡುವಂತೆ ಆರೋಪಗಳು ತೊಂದರೆಗೀಡಾಗುವ ಅವಕಾಶಗಳಿವೆ. ಎದೆ, ಗಂಟಲು, ಅಂಗಾಲು, ಮೊಣಕಾಲು ಮತ್ತು ತೊಡೆಗೆ ಸಂಬಂಧಿಸಿದ ಹಲವು ಸಮಸ್ಯೆಗಳು ಕೂಡ ಇರುತ್ತವೆ.

### ಕರ್ಕಾಟಕ

ಈ ಕಾಲದಲ್ಲಿ ಉದ್ಯೋಗ,ವೃತ್ತಿ-ವ್ಯವಹಾರ ಲಾಭದಾಯಕವಾಗಿ ಇರುತ್ತವೆ. ಸಮಾಜದಲ್ಲಿ ನಿಮ್ಮ ಗೌರವಾದರಗಳು ವೃದ್ಧಿಸಲಿವೆ. ರಾಜಕೀಯದಲ್ಲಿ ಹಿರಿಮೆ, ಗುರುತಿಸಲ್ಪಡುವಿರಿ. ಕುಟುಂಬ ವಿಷಯಗಳು ತೃಪ್ತಿಕರವಾಗಿರುತ್ತವೆ.

### ಸಿಂಹ

ಶ್ರದ್ಧೆಯಿಂದ ಓದಿ ಪರೀಕ್ಷೆಯಲ್ಲಿ ವಿಜಯವನ್ನು ಸಾಧಿಸುವಿರಿ. ಸ್ವಯಂಕೃಷಿಯವರಿಗೆ ಅನೇಕ ಬಗೆಯ ಲಾಭಗಳು ಹಾಗೂ ಪ್ರೋತ್ಸಾಹಗಳು ದೊರಕುತ್ತವೆ. ನಿಮ್ಮ ಸ್ನೇಹಿತರು, ಸಲಹೆದಾರರು ಮತ್ತು ಹಿರಿಯರು ನಿಮಗೆ ಆಹ್ವಾನವಿತ್ತು ಒಳ್ಳೆಯ ರೀತಿಯಲ್ಲಿ ವ್ಯವಹರಿಸುವರು.

### ಕನ್ಯೆ

ಪ್ರಯಾಣದಲ್ಲಿ ಸಮಸ್ಯೆಗಳು, ಖರ್ಚುಗಳ ಹೆಚ್ಚಳ ಮತ್ತು ಪ್ರೇಮ ವಿಷಯದಲ್ಲಿ ಆನಂದ, ತೃಪ್ತಿಯುಂಟಾಗಲಿದೆ. ನೀವು ನಿಮ್ಮ ಜೀವನ ಸಂಗಾತಿ ಹಾಗೂ ಮಕ್ಕಳೊಂದಿಗೆ ಸಮಯವೊದಗಿಸಿಕೊಂಡು ಉಚಿತವಾದ ಸಂಭಾಷಣೆಯನ್ನು ಏರ್ಪಾಟು ಮಾಡಿಕೊಳ್ಳಬೇಕು.

### ತುಲಾ

ಆದಾಯ ಸೌಕರ್ಯಗಳು ಹೆಚ್ಚಾಗಲಿವೆ. ಹೊರ ದೇಶಗಳಿಗೆ ಹೋಗುವ ಪ್ರಯತ್ನಗಳು ಒದಗಿಬರಲಿವೆ. ಮಕ್ಕಳ ಓದಿನ ವಿಷಯಗಳಲ್ಲಿಯೂ ಉತ್ಸಾಹಕರವಾದ ವಾತಾವರಣ ವಿರಲಿದೆ. ಉದ್ಯೋಗದಲ್ಲಿ ಬಡ್ತಿ ಬರಲಿದೆ.

### ವೃಶ್ಚಿಕ

ತಾತ್ಕಲಿಕವಾಗಿ ಕಡಿಮೆ ಸಮಯದಲ್ಲಿ ಅಧಿಕ ಲಾಭವನ್ನು ತರುವ ವ್ಯಾಪಾರಗಳನ್ನು ಮಾಡುವಿರಿ ಸ್ಟಾಕ್ ಮಾರ್ಕೆಟ್, ಷೇರು ವ್ಯವಹಾರ ಅನುಕೂಲಕರವಾಗಿರುವುದಿಲ್ಲ. ವ್ಯರ್ಥವಾಗಿ ಅಧಿಕ ವೆಚ್ಚಗಳನ್ನು ಭರಿಸುವ ಸಂಭವಗಳು ಬರಲಿವೆ.

### ಧನಸ್ಸು

ಮೀನರಾಶಿಯಲ್ಲಿ ಶುಕ್ರನ ಸಂಚಾರ ವಕ್ರವಾಗಿರುವುದರಿಂದ ವಿದ್ಯೆಯ ವಿಷಯಗಳಲ್ಲಿ ಶ್ರದ್ಧೆ ಅವಶ್ಯಕ. ಓದಿನಲ್ಲಿ ಕ್ರಮೇಣ ಪ್ರಕಾಶಿಸುವಿರಿ. ಶೋಭಯಮಾನವಾಗಿ ವಾಕ್ ತತ್ಪರತೆಯಿಂದ ಆಧುನಿಕ ಸಮಾಚಾರ, ಆಧುನಿಕ ವಿಜ್ಞಾನ ವಿಷಯಗಳಿಂದ ಎಲ್ಲರನ್ನು ಆಕರ್ಷಿಸುವಿರಿ

### ಮಕರ


ಗೃಹದಲ್ಲಿ ಸಂತಾನ ವಿಷಯವಾಗಿ ಶುಭವಾರ್ತೆ ಕೇಳುವಿರಿ ಜೀವನ ಆನಂದಮಯವಾಗಿರುತ್ತದೆ. ದೂರ ಪ್ರಯಾಣ ಮಾಡಬೇಕಾಗಿ ಬರುವುದು. ವಿದೇಶಿ ಪ್ರಯಾಣಗಳು ಒದಗಿ ಬರಲಿವೆ. ಸ್ನೇಹಿತರ ಒಡನಾಟವಿರುತ್ತದೆ.

### ಕುಂಭ

ಗೃಹೋಪಕರಣಗಳು, ಅಲಂಕಾರ ವಸ್ತುಗಳು, ರತ್ನಗಳು ಮತ್ತು ಆಭರಣಗಳ ಖರೀದಿ ಸಲುವಾಗಿ ನಿಮ್ಮ ಹಣವನ್ನು ಖರ್ಚು ಮಾಡಬೇಕಾಗಿ ಬರುವ ಸಂಭವವಿದೆ. ಸಂಗೀತದೆಡೆಗೆ ನಿಮ್ಮ ಅಭಿರುಚಿ - ಆಸಕ್ತಿ ಬೆಳಸಿಕೊಳ್ಳುವಿರಿ.

### ಮೀನ

ಇತರರೊಂದಿಗೆ ಸತ್ಸಂಬಂಧಗಳನ್ನು ಹಂಚಿಕೊಳ್ಳುವಿರಿ. ಮದುವೆ - ಪ್ರೇಮ ವಿಚಾರಗಳಲ್ಲಿ ಭಾವೋದ್ವೇಗಕ್ಕೆ ಗುರಿಯಾಗುವ ಸಾಧ್ಯತೆಯಿದೆ. ಈ ರಾಶಿಯ ವಿದ್ಯಾರ್ಥಿಗಳು ಫಾರ್ಮಸಿ ವೈದ್ಯಕೀಯ ವಿದ್ಯೆಗೆ ಸಂಬಂಧಿಸಿದ ಓದುಗಳಲ್ಲಿ ಪ್ರಾವೀಣ್ಯತೆ ಪಡೆಯುವರು.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ|| ಅನಸೂಯ ಎಸ್. ರಾಜೀವ್

## 1. ನಾಮಕರಣ ಮಾಡುವಾಗ ಐದು ಹೆಸರನ್ನು ಇಡುವ ವಾಡಿಕೆ ಇದೆ ಅದರ ವಿಶೇಷವೇನು?

**ಉತ್ತರ :** ನಾಮಕರಣದ ಸಂದರ್ಭದಲ್ಲಿ ಶಿಶುವಿಗೆ ಮಾಸ ನಾಮ, ನಕ್ಷತ್ರನಾಮ, ವ್ಯವಹಾರನಾಮ, ದೇವತಾನಾಮ, ಗುಪ್ತನಾಮ ಎಂದು ಐದು ಹೆಸರುಗಳನ್ನು ಇಡುತ್ತಾರೆ. ಮಾಸ ನಾಮ ಎಂದರೆ ಮಗುವು ಯಾವ ಮಾಸದಲ್ಲಿ ಹುಟ್ಟಿದೆಯೋ ಅದನ್ನು ನೆನಪಿಸುವಂತಹ ಹೆಸರು. ಅದು ನೇರವಾದ ಮಾಸದ ಹೆಸರೇ ಆಗಿರಬಹುದು, ಅಥವಾ ಮಾಸದ ಅಧಿ ಪತಿಗಳ ಹೆಸರಾಗಿಬಹುದು. ಮಾಸನಾಮದ ಬಳಕೆಯಿಂದ ಮಗುವು ಯಾವ ಮಾಸದಲ್ಲಿ ಹುಟ್ಟಿದೆ ಎಂಬುದನ್ನು ಸುಲಭ ವಾಗಿ ತಿಳಿಯಬಹುದು. ನಕ್ಷತ್ರ ನಾಮ ಅಂದರೆ ಮಗುವು ಯಾವ ನಕ್ಷತ್ರದಲ್ಲಿ ಹುಟ್ಟಿದೆಯೋ ಅದಕ್ಕೆ ಸಂಬಂಧಿಸಿದ ಹೆಸ ರನ್ನು ಇಡುವುದು. ವ್ಯವಹಾರನಾಮವೆಂದರೆ ವ್ಯಕ್ತಿಯ ಅಧಿ ಕೃತವಾದ ಹೆಸರಾಗಿ ಬಳಸಲಾಗುತ್ತದೆ. ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಬಲ್ಲ ಆಕರ್ಷಕವಾದ ಹೆಸರನ್ನು ಆಯ್ದು ಇಡ ಲಾಗುತ್ತದೆ. ವ್ಯವಹಾರ ನಾಮದ ಜೊತೆಗೆ ಅವರವರ ವರ್ಣ ಪದ್ಧತಿಯ ವರ್ಣಸೂಚಕಗಳನ್ನು ಸೇರಿಸಿ ಹೇಳುವ ಪದ್ಧತಿ ಯೂ ಇದೆ. ಬ್ರಾಹ್ಮಣರು ಶರ್ಮ, ಕ್ಷತ್ರಿಯರು ವರ್ಮ, ವೈಶ್ಯರು ಗುಪ್ತ, ಶೂದ್ರರು ದಾಸ. ದೇವತಾನಾಮವೆಂದರೆ ತನ್ನ ಕುಲ ದೇವತೆಯನ್ನು ಸಾಂಕೇತಿಸುವ ಹೆಸರಾಗಿ ಮಗುವಿಗೆ ದೇವ ತಾನಾಮವನ್ನು ಇಡಲಾಗುತ್ತದೆ. ಮನೆಯಲ್ಲಿ ಮಕ್ಕಳ ನೆವದಲ್ಲಿ ದೇವರ ಹೆಸರನ್ನು ಸದಾ ಉಚ್ಚರಿಸುವಂತಾಗಲಿ ಎಂಬುದು ಇದರ ಆಶಯ. ಗುಪ್ತನಾಮ ಎಂದರೆ ಮಗುವಿಗೆ ಯೋಗ್ಯ ವಾದ ಒಂದು ಹೆಸರನ್ನು ಆಯ್ಕೆ ಮಾಡಿ ಅದನ್ನು ಉಚ್ಚರಿಸ ದೆಯೇ ಆ ಮಗುವಿಗೆ ಉಪನಯನವಾಗುವ ತನಕ ಅದನ್ನೂ ಗುಪ್ತವಾಗಿಟ್ಟಿರುತ್ತಾರೆ. ಉಪನಯನವಾದವರಿಗೆ ದ್ವಿಜ ಎಂದು ಹೆಸರು. ಹಾಗೆ ಎರಡನೆಯ ಬಾರಿ ಹುಟ್ಟಿದವನಿಗೆ ಒಂದು ಹೊಸ ಹೆಸರು ಬೇಕಲ್ಲವೆ? ಆದ್ದರಿಂದ ನಾಮಕರಣ ಕಾಲ ದಲ್ಲೇ ಉಪನಯನ ಸಂದರ್ಭಕ್ಕಾಗಿ ಹೆಸರನ್ನು ಆಯ್ಕೆ ಮಾಡಿ ಅದನ್ನು ಗುಪ್ತವಾಗಿ ಇರಿಸಿದ್ದು ಉಪನಯನದ ದಿನದಿಂದ ಅದನ್ನು ಬಳಕೆಗೆ ತರಲಾಗುತ್ತದೆ. ಹೆಣ್ಣು ಮಕ್ಕಳಿಗೆ ವಿವಾಹದ ಸಮಯದಲ್ಲಿ ಗುಪ್ತನಾಮವನ್ನು ಉಚ್ಚರಿಸಿ ಕನ್ಯಾಧಾರೆ ಮಾಡ ಬೇಕೆಂಬ ನಿಯಮವಿದೆ. ನಾಮಕರಣವೂ ವ್ಯಕ್ತಿಗೆ ಸಮಾಜ ದಲ್ಲಿ ಅವನದೇ ಆದ ಗುರುತನ್ನು ನೀಡುವುದರೊಂದಿಗೆ ಆಯು ಸ್ಸನ್ನು ಕಾಂತಿಯನ್ನು ನೀಡುತ್ತದೆ.

## 2. ಚೂಡಾಕರ್ಮ ಸಂಸ್ಕಾರವೆಂದರೇನು?

**ಉತ್ತರ :** ಚೂಡಾಕರ್ಮ ಎಂದರೆ ಚೌಲ.ಜುಟ್ಟು ಬಿಡಿಸುವುದು ಎಂದರ್ಥ. ಮಗುವು ಮೂರನೇ ವರ್ಷಕ್ಕೆ ಕಾಲಿಟ್ಟಾಗ ಮಾಡುವ ಸಂಸ್ಕಾರವಿದು. ಮಗು ಜನಿಸಿದಾಗ ಅದರ ತಲೆ ಬುರುಡೆಯ ಮೂಳೆಗಳು ಕೂಡಿರುವುದಿಲ್ಲ. ನೆತ್ತಿಯಲ್ಲಿ ಒಂದು ರಂಧ್ರವಿದ್ದು ಚರ್ಮವು ಅದನ್ನು ಆವರಿಸಿರುತ್ತದೆ. ಈ ರಂಧ್ರಕ್ಕೆ ಬ್ರಹ್ಮರಂಧ್ರ ಎಂದು ಹೆಸರು. ಮಗುವಿಗೆ ಒಂದು ವರ್ಷ ತುಂಬುವ ಹೊತ್ತಿಗೆ ನೆತ್ತಿಯ ಮೂಳೆಗಳು ಕೂಡಿಕೊಳ್ಳುತ್ತವೆ. ಇದಕ್ಕೆ ನೆತ್ತಿ ಕೂಡುವುದು ಎನ್ನುತ್ತಾರೆ. ಆ ವೇಳೆಗೆ ಮಿದುಳು ಸಾಕಷ್ಟು ವಿಕಸನಗೊಂಡು ಪ್ರಾಣಿಗಳಿಗಿಂತಲೂ ಹೆಚ್ಚಿನ ಮಟ್ಟ ದಲ್ಲಿ ಜ್ಞಾನವನ್ನು ಚಿಂತನ ಶಕ್ತಿಯನ್ನೂ ಪಡೆಯಲು ಸಮರ್ಥ ವಾಗಿರುತ್ತದೆ. ಈ ಸಮಯದಲ್ಲಿ ಮೆದುಳಿಗೆ ಹೆಚ್ಚಿನ ಸಂಗ್ರಹ ಣಾಶಕ್ತಿ ಮತ್ತು ತೀಕ್ಷ್ಣತೆಯನ್ನು ನೀಡಲಾಗುತ್ತದೆ. ಮಾನವನ ಮಿದುಳು ಒಂದು ಅದ್ಭುತ ಕಂಪ್ಯೂಟರ್‌ನಂತಹ ಜೈವಿಕ ವಿದ್ಯು ನ್ಮಾನ ಅಂಗ. ಇಡೀ ದೇಹವನ್ನು ನಿಯಂತ್ರಿಸುವ ವಿದ್ಯುನ್ಮಾನ ಜಾಲ ತಲೆಬುರುಡೆಯೊಳಗೆ ಹರಡಿರುತ್ತದೆ. ಪುರಾತನ ಭಾರತೀಯರ ಸಂಶೋಧಕರು ಬ್ರಹ್ಮರಂಧ್ರಕ್ಕಿಂತ ಸ್ವಲ್ಪ ಹಿಂದಕ್ಕೆ ಕೂದಲಿನ ಸುಳಿ ಇರುವ ಜಾಗದಲ್ಲಿನ ಮಿದುಳಿನಲ್ಲಿ ವಿದ್ಯುನ್ಮಾನ ನರಗಳ ಜಾಲದ ಮುಖ್ಯ ಕೇಂದ್ರವಿದೆ ಎಂದು ಕಂಡು ಹಿಡಿದು ಆ ಭಾಗಕ್ಕೆ ಅಧಿಪತಿ ಎಂದು ಕರೆದು ಮಹತ್ವ ನೀಡಿದರು. ಆ ಭಾಗಕ್ಕೆ ಅತಿಯಾದ ಸೂರ್ಯತಾಪವಾಗಲೀ, ಬಲವಾದ ಹೊಡೆತಗಳಾಗಲೀ ಬೀಳದಂತೆ ರಕ್ಷಣೆಗಾಗಿ ಅಲ್ಲಿ ಕೂದಲು ಬೆಳೆಸಬೇಕೆಂದು ವಿಧಿಸಿದ್ದರು. ಹಾಗಾಗಿ ತಲೆ ಬುರುಡೆಯ ಅಧಿಪತಿ ಎಂಬ ನರಸಂಧಿಯ ಭಾಗದಲ್ಲಿ ನೀಳ ವಾದ ಕೂದಲನ್ನು ಉಳಿಸಿ ಉಳಿದ ಕೂದಲನ್ನು ತೆಗೆಯುವು ದರಿಂದ ಮಿದುಳು ಪ್ರಚೋದನೆಗೊಂಡು ಬುದ್ಧಿ ಚುರುಕಾಗು ತ್ತದೆ. ಪ್ರಭಾವಲಯವೆಂಬ ದೈಹಿಕ ವಿದ್ಯುದಾವರಣ ಬಲ ಗೊಳ್ಳುತ್ತದೆ. ಇದರಿಂದ ದೇಹ ಶಕ್ತಿ, ದೇಹಕಾಂತಿ, ಧೀಶಕ್ತಿ ಮುಂತಾದುವು ಗಣನೀಯವಾಗಿ ಊರ್ಜಿತಗೊಂಡು ಆಯುಸ್ಸು ಕೂಡ ಹೆಚ್ಚುತ್ತದೆ ಎಂಬ ರಹಸ್ಯವನ್ನು ಕಂಡು ಕೊಂಡ ಕಾರಣ, ತಲೆಯಲ್ಲಿ ಜುಟ್ಟನ್ನು ಉಳಿಸಿ ಬಾಕಿ ಕೂದ ಲನ್ನು ತೆಗೆದು ಹಾಕುವ ಪದ್ಧತಿ ಬಂದಿದೆ. ಇದನ್ನೇ ಜುಟ್ಟು ಬಿಡಿಸುವುದು ಎನ್ನುವುದು.




# ಅಮ್ಮನ ಮಾತಿಗೆ ಮೊದಲು ಗೌರವ

- ಎ.ಆರ್. ರಘುರಾಮ
99161 38436

ರಾಮಾಪುರವೆಂಬ ಗ್ರಾಮದಲ್ಲಿ ದೇವಮ್ಮ ಎಂಬ ಮಹಿಳೆ ಇದ್ದಳು. ಕೃಷಿ ಮಾಡುವುದು ಆಕೆಯ ವೃತ್ತಿ. ಎರಡು ಎಕರೆ ತೋಟವನ್ನು ಶ್ರಮವಹಿಸಿ ಬೆಳೆಸಿದ್ದಳು. ಅಲ್ಲಿ ಉತ್ತಮ ಫಸಲು ಬರುತ್ತಿತ್ತು. ಶ್ರಮಿಕ ಮಹಿಳೆ ದೇವಮ್ಮ ಎಂದರೆ ಗ್ರಾಮದ ಎಲ್ಲರಿಗೂ ಗೌರವಾದರ.

ಆಕೆಗೆ ಸೋಮ ಎಂಬ ಮಗ ಇದ್ದ. ಅವನಿಗೆ ತಕ್ಕ ಮಟ್ಟಿಗೆ ಶಿಕ್ಷಣವನ್ನೂ ಕೊಡಿಸಿ ಸಂಸ್ಕಾರವಂತನಾಗಿ ಬೆಳೆಸಿದಳು ದೇವಮ್ಮ. ಮಗ ದೊಡ್ಡವನಾದ. ಗದ್ದೆ, ತೋಟದ ಜವಾಬ್ದಾರಿ ತೆಗೆದುಕೊಂಡ. ದೇವಮ್ಮ ಆತನಿಗೆ ವಿವಾಹ ಮಾಡಿದಳು. ಒಂದು ಗಂಡು ಮಗವೂ ಆಯಿತು,ಸೊಸೆಯೂ ಮನೆಯ ಹೆಚ್ಚಿನ ಜವಾಬ್ದಾರಿ ನಿರ್ವಹಣೆ ಮಾಡಲಾರಂಭಿಸಿದಳು.

ದೇವಮ್ಮ ಆನಂತರ ದೇವರ ಪೂಜೆ, ಧ್ಯಾನ ಮತ್ತು ಮೊಮ್ಮಗನ ಪಾಲನೆಗಾಗಿ ಹೆಚ್ಚು ಸಮಯ ನೀಡಿದಳು. ಒಂದು ದಿನ ಮನೆಯ ಹಿಂಬದಿ ತೋಟದಲ್ಲಿ ಸೋಮ ಕೆಲಸ ಮಾಡುತ್ತ ಇದ್ದ. ಭಾರೀ ಗುಡುಗು, ಸಿಡಿಲುಗಳ ಆರ್ಭಟದೊಂದಿಗೆ ಗಾಳಿ ಬೀಸಲಾರಂಭಿಸಿತು. ಸೋಮ ಕೆಲಸ ಮಾಡುತ್ತಲೇ ಇದ್ದ.

ಅಮ್ಮ ಎರಡು-ಮೂರು ಬಾರಿ ಕರೆದಳು. ಜೋರಾಗಿ ಮಳೆ ಬರಲಿದೆ, ಒಳಗೆ ಬಾ. ನಾಳೆ ಕೆಲಸ ಮುಂದುವರಿಸುವೆಯಂತೆ ಎಂದಳು. ಅವನು ಕೇಳಲಿಲ್ಲ, ಮತ್ತೆ ಕರೆದಳು. ಮಳೆ ಹನಿ ದಪ್ಪ ದಪ್ಪನಾಗಿ ಸುರಿಯಲು ಆರಂಭಿಸಿತು. ಸೋಮ ಬರಲಿಲ್ಲ. ಹಠ ಮಾಡುತ್ತಿರುವ ಮಗನಿಗೆ ದೇವಮ್ಮ ಪಾಠ ಕಲಿಸಲು ಮುಂದಾದಳು. ಮೊಮ್ಮಗುವನ್ನು ಎತ್ತಿಕೊಂಡು ಮನೆ ಆಚೆ ಹೋಗಿ ಕೂರಿಸಿಬಿಟ್ಟಳು.

ಮಳೆಯಲ್ಲಿ ತೋಯಹತ್ತಿದ ಮಗು ಜೋರಾಗಿ ಕಿರುಚಿ ಅಳಲಾರಂಭಿಸಿತು. ಅದನ್ನು ನೋಡಿದ ಸೋಮ ತನ್ನ ಕೆಲಸ ಬಿಟ್ಟು ಭರನೆ ಧಾವಿಸಿದ. ಮಗನನ್ನು ಎತ್ತಿಕೊಂಡು ಒಳಗೆ ಓಡಿಬಂದ.

ನಿನಗೆ ಬುದ್ಧಿ ಇಲ್ಲವೇ? ಮಗುವನ್ನು ಮಳೆಯಲ್ಲಿ ಕೂರಿಸುವುದೇ ಎಂದು ಅಮ್ಮನಿಗೆ ರೇಗಾಡಿದ. ಆಗ ದೇವಮ್ಮ ಹೇಳಿದಳು, ಮಗುವೇ ನೀನು ಗಾಳಿ ಮಳೆಯಲ್ಲಿ ತೋಯುತ್ತಾ ಕೆಲಸ ಮಾಡುವಾಗಲೂ ನನಗೆ ಹೀಗೆ ಕರುಳು ಹಿಂಡಿತು.


ಅದಕ್ಕೆ ಬಾ... ಬಾ...ಎಂದು ನಾಲ್ಕು ಬಾರಿ ಕರೆದೆ. ಹೆತ್ತ ಜೀವ ಹೇಗೆ ಹೊಯ್ದಾಡುತ್ತದೆ ಎಂದು ನಿನಗೆ ಅರ್ಥವಾಗಲಿ ಎಂದೇ ಈ ಕೆಲಸ ಮಾಡಿದೆ ಎಂದಳು.

ಸೋಮನ ಹೃದಯ ಕರಗಿತು. ತಾಯಿಯ ಮಾತು ಸತ್ಯ ಎನಿಸಿತು. ಆಕೆಯ ಕರೆಯುವಿಕೆಯಲ್ಲಿ ಇದ್ದ ಹೃದಯವಂತಿಕೆ ಅರ್ಥವಾಯಿತು. ಅಮ್ಮನ ಮಾತು ತಕ್ಷಣವೇ ಕೇಳಬೇಕು ಎಂದು ವೇದ್ಯವಾಯಿತು. ಯಾವುದೇ ಒಂದು ಪ್ರಸಂಗ ಅದು ನಮ್ಮ ನೇರ ಅನುಭವಕ್ಕೆ ಬಂದರೆ ಮಾತ್ರ ಅದರ ಅಂತರಾಳ ಅರ್ಥವಾಗುತ್ತದೆ.


ಪ್ರೀತಿ-ಅಭಿಮಾನ ಮತ್ತು ಕಳಕಳಿಗಳ ಆಳ, ಅಗಲ ತಿಳಿಯುತ್ತದೆ. ಹಿರಿಯರು ಹೇಳುವ ಮಾತು,ಅದರಲ್ಲೂ ಅಮ್ಮನ ಪ್ರತಿಯೊಂದು ಧ್ವನಿಯಲ್ಲಿ ಅನುಭವದ ಅಮೃತ ಧಾರೆಯೇ ಇರುತ್ತದೆ ಎಂದು ಸೋಮನಿಗೆ ಅರ್ಥವಾಯಿತು.

ಜೀವನ ಎಂದರೆ ಅನುಭವಗಳ ಬಹುದೊಡ್ಡ ಪಾಠ ಶಾಲೆ. ಕೆಲವನ್ನು ಕೇಳಿಯೇ ತಿಳಿಯಬೇಕು. ಇಲ್ಲವಾದರೆ ಬದುಕು ಅನುಭವದ ಮೂಲಕ ನಮಗೆ ಪಾಠ ಕಲಿಸಲು ಅಣಿಯಾಗುತ್ತದೆ. ಅದಕ್ಕಾದರೂ ಗೌರವ ನೀಡುವ ಪರಿಪಾಠ ನಮ್ಮದಾದರೆ ಬಾಳು ಸುಂದರ. ಚೆಲುವ ಹಂದರ.






## ಪುಟಾಣಿ ಮಕ್ಕಳಿಗಾಗಿ



ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.....





ಬಣ್ಣವನ್ನು ತುಂಬಿರಿ.







1. ಲಕ್ಷ್ಮೀಜಯಂತಿ
2. ಹೋಲಿ
3. ಯುಗಾದಿ



ಮೇಲೆ ಹೇಳಿರುವ ಹಬ್ಬ ಹರಿದಿನಗಳಿಗೆ ಸಂಬಂಧಿಸಿದ ಚಿತ್ರದ ಹತ್ತಿರವಿರುವ ರೌಂಡ್‌ನಲ್ಲಿ ಆ ಸಂಖ್ಯೆಯನ್ನು ಹಾಕಿ




ಮಕ್ಕಳೇ, ಕೃಷ್ಣ ಯಾವ ಹಾದಿಯಲ್ಲಿ ಹೋದರೆ ರಾಧೆಯನ್ನು ಸೇರಬಹುದು ಕಂಡು ಹಿಡಿಯಿರಿ ನೋಡೋಣ!







### ಮಾರ್ಗ ಅನ್ವೇಷಣೆ



ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

### ಗಾದೆ

ದೇ ಆ ಗೇ ಚ ರೆ ಡಿ ಗೆ ಮ ಳ ದ ಮ ಚ

ಈ ಲ ರ ಕೆ ಗೆ ಜ್ಜಿ ಕು ದ ನಾ ಕೆ ಡು ಗ

ಉತ್ತರಗಳು:

ಈ ಚಲ ಮರದ ಕೆಳಗೆ ಮಜ್ಜಿಗೆ ಕುಡಿದರೆ ನಾಚಿಕೆಗೇಡು ಆಗದೇ?









తిరుమల తిరుపతి దేవస్థానగళు

# ಮಕ್ಕಳೇ ಇದು ನಿಮಗಾಗಿ

## ರಸ ಪ್ರಶ್ನೆಗಳು

01.ಯುಗಾದಿ ಹಬ್ಬದ ದಿನ ಏನನ್ನು ಸ್ವೀಕರಿಸುತ್ತಾರೆ? ....................................................................................

02.ಶ್ರೀವಾದಿರಾಜರು ಯಾವ ಗ್ರಂಥವನ್ನು ರಚಿಸಿದರು? ....................................................................................

03.ಜನಕಪುರಿಯಿಂದ ಕಠ್ಮಂಡು ಎಷ್ಟು ದೂರದಲ್ಲಿದೆ? ....................................................................................

04.ಅಂಬೆ ಮಹಾಭಾರತದ ಯಾವ ಪರ್ವದಲ್ಲಿ ಬರುವ ಪಾತ್ರ?..................................................... ..........................

05.ಪಂಚ ಎಂದರೆ ಏನು? ............ ....................................................................................

06.ಕುಂತೀದೇವಿ ಯಾರ ಸೋದರತ್ತೆ? .................... ....................................................................................

07.ರಾಯರ ಪರಮಭಕ್ತ ಯಾರು? .......... ....................................................................................

08. ದೇವಾಲಪುರದ ಲಕ್ಷ್ಮೀಕಾಂತ ದೇವರಿಗೆ ವಿಶೇಷವಾದ ದಿನ ಯಾವುದು ?....................................................

09. ಶ್ರೀನಿವಾಸರಾಯರ ಮಠದ ಮುಖ್ಯಸ್ಥರು ಯಾರು?.......................................................................... .......

10. ಶ್ರೀ ವ್ಯಾಸರಾಯರ ನಿಷ್ಠಾವಂತ ಶಿಷ್ಯ ಯಾರು? ....................................................................................

11. ಪ್ರಯೋವ್ರತವನ್ನು ಏನೆಂದು ಕರೆಯುತ್ತಾರೆ? ....................................................................................

12. ಪ್ರಹ್ಲಾದ ಯಾರ ಪರಮ ಭಕ್ತ? ....................................................................................

13. ಹೋಳಿ ಹಬ್ಬ ಎಂದರೆ ಏನು?........................................................... ..........................

14.ತಿರುನಾಂಗೂರ್ ದಿವ್ಯದೇಶಗಳಲ್ಲಿ ಎಷ್ಟೇನೆಯದೆಂದು ಪರಿಗಣಿಸಲಾಗಿದೆ?...............................................................

15. ರಾಮಾಪುರವೆಂಬ ಗ್ರಾಮದಲ್ಲಿ ಯಾವ ಮಹಿಳೆ ಇದ್ದಳು? ....................................................................................

33 ಕ್ವಿಜ್

## ಸೂಚನೆಗಳು


1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ನಿಮ್ಮ ಉತ್ತರಗಳನ್ನು ನಮಗೆ ಕಳುಹಿಸಬೇಕಾದ ಕೊನೆಯ ದಿನಾಂಕ ಇದೇ ತಿಂಗಳ 25 ರ ಒಳಗೆ ಕಳುಹಿಸಬೇಕು.
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
ತಿ.ತಿ.ದೇ. ಪ್ರೆಸ್,
2 ನೇ ಅಂತಸ್ತು
ಕೆ.ಟಿ. ರಸ್ತೆ,
ತಿರುಪತಿ : 517 507
ಆಂಧ್ರ ಪ್ರದೇಶ್

| | |
|---|---|
| ಹೆಸರು : | ವಿಳಾಸ : |
| ಚಂದಾ ಸಂಖ್ಯೆ : | |
| ತಂದೆಯ ಹೆಸರು : | |
| ತಾಯಿಯ ಹೆಸರು: | ದೂರವಾಣಿ ಸಂಖ್ಯೆ : |

ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ






1)ವಿಷ್ಣು 2) ವೀರಲಕ್ಷ್ಮೀ 3)ಗಜವಾಹನ 4) ಧನಲಕ್ಷ್ಮೀ 5)ಧಾನ್ಯ ಲಕ್ಷ್ಮೀ 6)ಸಂತಾನ ಲಕ್ಷ್ಮೀ
7)ವಿದ್ಯಾಲಕ್ಷ್ಮೀ 8)ಕಮಲ

ಮಕ್ಕಳೇ ಈ ಕಾಣುವ ಚಿತ್ರದಲ್ಲಿ ಚೆಂಡಿನಲ್ಲಿರುವ ಅಂಕೆಗಳನ್ನು ಕೂಡಿದರೆ ಹಾಗೂ ಕಳೆದರೆ ಸರಿಯಾದ ಉತ್ತರದೊಂದಿಗೆ ಯಾವ ಬ್ಯಾಟ್‌ಗೆ ಸರಿಹೊಂದುತ್ತದೆ ಎಂದು ಕಂಡು ಹಿಡಿಯಿರಿ ಮಕ್ಕಳೇ!




1) v 2) vi 3) iv 4) i 5) ii






ಈ ಚಿತ್ರವು ಯಾವ ಹಬ್ಬದ ಸಂಕೇತವನ್ನು ನೀಡುತ್ತಿದೆ.


ಯುಗಾದಿ

ಚಿತ್ರಕಥೆ

# ಅದಿವೋ... ಅಲ್ಲದಿವೋ...

ಕಥೆ: ತೆಲುಗು ಮೂಲ : ಡಿ.ಶ್ರೀನಿವಾಸ ದೀಕ್ಷಿತರು
ಅನುವಾದ : ಆರ್.ಕೆ.ವಿ.
ಚಿತ್ರಗಳು : ಕೆ.ದ್ವಾರಕನಾಥ್




ಬಹಳ ಹೊತ್ತು ಆದರೂ ದಾರಿ ಕಾಣಲಿಲ್ಲ.ತುಂಬಾ ಆಯಾಸವಾಗುತ್ತಿದೆ, ತಲೆಸುತ್ತುತ್ತಿದೆ,
ಮನದಲ್ಲಿಯೇ ವೆಂಕಟೇಶ್ವರ ಸ್ವಾಮಿಯನ್ನು ಪ್ರಾರ್ಥಿಸಿದ......
ಅಮ್ಮನವರನ್ನು, ಸ್ವಾಮಿಯವರನ್ನು ದಾರಿ ತೋರಿಸೆಂದು.....
ಕರುಣೆ ತೋರಿಸೆಂದು ಪ್ರಾರ್ಥಿಸಿದರು.
ಅಮ್ಮನವರು ಅನ್ನಮಯ್ಯನ ಮುಂದೆ ಸಾಕ್ಷಾತ್ಕರಿಸಿದರು......
ನೀನೇ ನನಗೆ ದಿಕ್ಕು
ತಾಯಿ!ಕರುಣಾಮೃತವಲ್ಲಿ!
ದೊಡ್ಡ ಮುತ್ತೈದೆಯ ರೂಪದಲ್ಲಿ ಅಲಮೇಲುಮಂಗಮ್ಮನವರು ಬಂದು
ಅನ್ನಮಯ್ಯನ ಮುಂದೆ ನಿಂತು.....
ಮಗು! ಈ ಪಾದರಕ್ಷೆಗಳನ್ನು ಹಾಕಿಕೊಂಡು
ಬೆಟ್ಟ ಹತ್ತುವುದು ತಪ್ಪು ಅಲ್ಲವೇ? ಈ ಬೆಟ್ಟವು
ಪವಿತ್ರ ಸಾಲಗ್ರಾಮಶಿಲೆಯಾಗಿದೆ!
ಅಮ್ಮನವರು ಕಣ್ಮರೆಯಾದರು.... ಎದುರಿಗೆ ದಾರಿ ಕಾಣಿಸಿತ್ತು....... ಭಕ್ತರು.....
ಸ್ವಾಮಿಯವರ ಆನಂದನಿಲಯವನ್ನು ಕಂಡ ಅನ್ನಮಯ್ಯನವರು ಸಂಕೀರ್ತನೆ
ಹಾಡಲು ಪ್ರಾರಂಭಿಸಿದರು.....ಅದಿವೋ...... ಅಲ್ಲದಿವೋ.....
ಬೇಗ ಬೇಗ ಬೆಟ್ಟವನ್ನು ಹತ್ತಿ..... ಪುಷ್ಕರಿಣಿಯಲ್ಲಿ
ಸ್ನಾನ ಮಾಡಿದರು. ನಂತರ ದೇವಾಲಯದೊಳಗೆ
ಹೋಗಿ ...... ತಿಮ್ಮಪ್ಪನನ್ನು ದರ್ಶಿಸಿದರು......
ಅನ್ನಮಯ್ಯನ ಮನಸ್ಸು ಪರವಶದಿಂದ, ಸಂತೋಷದಿಂದ ತುಂಬಿದೆ.
ಅವರ ಕಣ್ತುಂಬಾ ಆನಂದಬಾಷ್ಪಗಳು......
ಕೊಂಡಲಲೋ...
ನೆಲಕೊನ್ನ.....
ಓಂ ನಮೋ ವೆಂಕಟೇಶಾಯ!
ಭಕ್ತರು ಭಕ್ತಿಯಿಂದ ಕರೆದ ತಕ್ಷಣ ಅಮ್ಮನವರು ಅನುಗ್ರಹಿಸುತ್ತಾರೆ.
ಲೋಕಾಃ ಸಮಸ್ತಾಃ ಸುಖಿನೋ ಭವಂತು

## ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

1. **ಹೆಸರು ಮತ್ತು ವಿಳಾಸ :**
(ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

(ಸೆಲ್ ನಂಬರ್)

2. **ಬೇಕಾಗುವ ಭಾಷೆ :**
☐ ಕನ್ನಡ ☐ ತೆಲುಗು ☐ ತಮಿಳು
☐ ಹಿಂದೀ ☐ ಇಂಗ್ಲೀಷು ☐ ಸಂಸ್ಕೃತ

3. **ವಾರ್ಷಿಕ ಚಂದಾ :** ☐ ರೂ.240/-

4. **ಆಜೀವಚಂದಾ :** ☐ ರೂ.2,400/- ( 12 ವರ್ಷ),

5. **ವಿದೇಶಿ ವಾರ್ಷಿಕ ಚಂದಾ :** ☐ ರೂ.1030/-

6. **ಚಂದಾ ನವೀಕರಣ :**
(ಅ) ಚಂದಾ ನಂಬರು :
(ಆ) ಭಾಷೆ :

7. **ಸಲ್ಲಿಸಿದ ಹಣ :**
ಡಿ.ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ಅಟ್‌ಪರ್ ಚೆಕ್ಕು ಮಾತ್ರವೇ

ಸ್ಥಳ :

ದಿನಾಂಕ : ಚಂದಾದಾರರ ಸಹಿ

1. ಸಪ್ತಗಿರಿ ವಾರ್ಷಿಕ ಚಂದಾ ರೂ.240/-ಆಜೀವಚಂದಾ (12 ವರ್ಷ) ರೂ.2,400/-ಗಳು ಅನ್‌ಲೈನ್‌ಗಾಗಿ (https://ttdevasthanams.ap.gov. in), ಡಿ.ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ,ತಿ.ತಿ.ದೇ.ತಿರುಪತಿ.ಅವರ ಹೆಸರಿನಲ್ಲಿ ತೆಗೆಯಬೇಕು.
2. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿ-ಹಾಳೆಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.
3. ಎಂ.ಓ.ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.
4. ನಮ್ಮ ವಿಳಾಸ-ಪ್ರಧಾನಸಂಪಾಕರು,ಸಪ್ತಗಿರಿ ಕಾರ್ಯಾಲಯ,ತಿ.ತಿ.ದೇ., ಪ್ರೆಸ್. ಎರಡನೇ ಅಂತಸ್ತು, ಕೆ.ಟಿ.ರೋಡ್ಡು, ತಿರುಪತಿ -517507.
5. ಸಪ್ತಗಿರಿ ಚಂದಾ ವಿವರಣೆಗಾಗಿ ಫೋನ್‌ನಂಬರ್ : 0877-2264359, 0877-2264543

## ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಆಧ್ಯಾತ್ಮಿಕ ಮಾಸಪತ್ರಿಕೆ ಸಪ್ತಗಿರಿ

- 'ಸಪ್ತಗಿರಿ' ತಿ.ತಿ.ದೇ.,ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ಪ್ರಕಟಿಸಲಾಗಿದೆ.
- 'ಸಪ್ತಗಿರಿ' ಪತ್ರಿಕೆಯಲ್ಲಿ ಅನೇಕ ಆಧ್ಯಾತ್ಮಿಕ ವೈಶಿಷ್ಟ್ಯಗಳನ್ನು ಪ್ರಕಟಿಸುತ್ತಿದೆ.
- 'ಸಪ್ತಗಿರಿ' ಪತ್ರಿಕೆಯು ತೆಲುಗು,ತಮಿಳು,ಕನ್ನಡ,ಹಿಂದಿ,ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಟವಾಗಿದೆ.
- 'ಸಪ್ತಗಿರಿ' ಪತ್ರಿಕೆಯ ವಾರ್ಷಿಕ ಚಂದಾ ರೂ. 240/-
- 'ಸಪ್ತಗಿರಿ' ಪತ್ರಿಕೆಯ ಆಜೀವ ಚಂದಾ (12 ವರ್ಷಗಳು ಮಾತ್ರ) ರೂ.2400/-
- 'ಸಪ್ತಗಿರಿ' ವಿದೇಶಿ ವಾರ್ಷಿಕ ಚಂದಾ ರೂ. 1030/-
- 'ಸಪ್ತಗಿರಿ' ಪತ್ರಿಕೆಯ ಚಂದಾ ಓದುಗರು ಡಿ.ಡಿ./ಇ.ಎಂ.ಓ./ಐ.ಪಿ.ಓ./ Online (ttdevasthanams.ap.gov.in) ಮೂಲಕ ಮಾಡಬಹುದು.
- 'ಸಪ್ತಗಿರಿ' ಪತ್ರಿಕೆಯ ಚಂದಾದಾರರು ಯಾವುದೇ ರಾಷ್ಟ್ರೀಯ ಬ್ಯಾಂಕ್ ಮುಖಾಂತರ ಪ್ರಧಾನ ಸಂಪಾದಕರು,ಸಪ್ತಗಿರಿ ಮಾಸಪತ್ರಿಕೆ, ತಿ.ತಿ.ದೇ., ತಿರುಪತಿ. ನೀವು ಡಿ.ಡಿ.ಅಂಚೆ ಮೂಲಕ, ಪ್ರಧಾನ ಸಂಪಾದಕರು,ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ.,ಪ್ರೆಸ್ ಬಿಲ್ಡಿಂಗ್, ತಿರುಪತಿ - 517 507 ಎಂಬ ವಿಳಾಸಕ್ಕೆ ಕಳುಹಿಸಬಹುದು.
- ಚಂದಾದಾರರು ತಮ್ಮ ವಿಳಾಸ, ಪಿನ್‌ಕೋಡ್, ಸೆಲ್‌ಫೋನ್ ಸಂಖ್ಯೆ ಮತ್ತು ನಿಮಗೆ ಬೇಕಾದ ಪತ್ರಿಕೆಯ ಭಾಷೆಯನ್ನು ಸ್ಪಷ್ಟವಾಗಿ ಬರೆಯಬೇಕು.
- 'ಸಪ್ತಗಿರಿ' ಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪದಿದ್ದರೆ ಅಥವಾ ವಿಳಾಸ ಬದಲಾದರೆ ಈ, ಇ-ಮೇಲ್ (Chiefeditortpt@gmail.com) ಅನ್ನು ಸಂಪ್ರದಿಸ ಬೇಕು.
- ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0877-2264359, 0877-2264360
- ಹೆಚ್ಚಿನ ವಿವರಗಳಿಗೆ ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್,ತಿರುಪತಿ - 517 507 ಈ ವಿಳಾಸವನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.
- ನೇರವಾಗಿ ಸಂಪರ್ಕಿಸಲು ಬಯಸುವವರು ಪ್ರಧಾನ ಸಂಪಾದಕರ ಕಾರ್ಯಾಲಯದ ಕೆಲಸದ ವೇಳೆ ಬೆಳ್ಳಿಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯ ವರೆಗೆ) ಯಲ್ಲಿ ಸಂಪರ್ಕಿಸಬಹುದು.

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., P.G. Dip.in Ephigraphy, Dip.in Yoga on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507. Editor : Dr. V. G. Chokkalingam, M.A., Ph.D.



**19-01-2025** ರಂದು ತಿ.ತಿ.ದೇ., ವತಿಯಿಂದ ಅಯೋಧ್ಯ ಶ್ರೀ ರಾಮನಿಗೆ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಿ.ಆರ್. ನಾಯ್ಡುರವರು ಸತಿ ಸಮೇತವಾಗಿ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸುತ್ತಿರುವ ದೃಶ್ಯ. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಆಡಳಿತ ಮಂಡಳಿಯ ಸದಸ್ಯರು. ಶ್ರೀ ಜಿ. ಭಾನುಪ್ರಕಾಷ್ ರೆಡ್ಡಿಯವರು, ಹೆಚ್. ಡಿ.ಪಿ.ಪಿ. ಕಾರ್ಯದರ್ಶಿ ಶ್ರೀ ಶ್ರೀರಾಮ್ ರಘುನಾಥ್, ಸ್ವಾಮಿಯವರ ಆಲಯದ ಪ್ರಧಾನ ಅರ್ಚಕರು ಶ್ರೀ ವೇಣುಗೋಪಾಲ ದೀಕ್ಷಿತರು ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.




**15-01-2025** ರಂದು ತಿರುಪತಿಯಲ್ಲಿರುವ ತಿ.ತಿ.ದೇ., ಆಡಳಿತ ಭವನದ ಮೈದಾನದಲ್ಲಿ ನಡೆದ ಶ್ರೀಗೋದಾದೇವಿ ಕಲ್ಯಾಣಮಹೋತ್ಸವ ದೃಶ್ಯಮಾಲಿಕೆ



**19-01-2025** ರಂದು ತಿರುಪತಿಯಲ್ಲಿರುವ ಸ್ವಿಮ್ಸ್ ಆಸ್ಪತ್ರೆಯನ್ನು ಆಕಸ್ಮಿಕವಾಗಿ ತನಿಖೆ ಮಾಡುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ.ಜೆ. ಶ್ಯಾಮಲರಾವ್ ಐ.ಎ.ಎಸ್., ರವರು ಮತ್ತು ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ ಐ.ಎ.ಎಸ್., ರವರು



**27-01-2025** ರಂದು ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಆಲಯದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ತನಿಖೆ ನಿರ್ವಹಿಸಿ , ಟೌನ್ ಪ್ಲಾನಿಂಗ್ ಅಧಿಕಾರಿಗಳೊಂದಿಗೆ ಭಕ್ತರಿಗೆ ಎಲ್ಲಾ ಸೌಕರ್ಯಗಳನ್ನು ಕಲ್ಪಿಸಲು ಮಾಸ್ಟರ್ ಪ್ಲಾನ್ ಮಾಡಬೇಕೆಂದು ಅದಕ್ಕೆ ತಕ್ಕ ಸಲಹೆ ಸೂಚನೆಗಳನ್ನು ನೀಡುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಜೆ. ಶ್ಯಾಮಲರಾವ್ ಐ.ಎ.ಎಸ್., ರವರು ಮತ್ತು ಸಂಯುಕ್ತಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ ಐ.ಎ.ಎಸ್., ರವರು ಮತ್ತು ತಿ.ತಿ.ದೇ., ಪ್ರಧಾನ ಪಿ.ಆರ್.ಓ. ಶ್ರೀ ಟಿ. ರವಿ ಯವರು ಮತ್ತು ಇತರ ಉನ್ನತಾಧಿಕಾರಿಗಳು



**26-01-2025** ರಂದು ತಿರುಪತಿಯಲ್ಲಿರುವ ತಿ.ತಿ.ದೇ., ಆಡಳಿತ ಮಂಡಳಿಯ ಮೈದಾನದಲ್ಲಿ ನಡೆದ ಗಣತಂತ್ರದಿನೋತ್ಸವ ಸಂದರ್ಭದಲ್ಲಿ ತಿ.ತಿ.ದೇ, ಭದ್ರತಾ ಇಲಾಖೆಯವರಿಂದ ಕವಾತು ಗೌರವ ವಂದನೆಯನ್ನು ಸ್ವೀಕರಿಸುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಜೆ. ಶ್ಯಾಮಲರಾವ್ ಐ.ಎ.ಎಸ್., ರವರು



**02-02-2025** ರಂದು ತಿ.ತಿ.ದೇ., ಆಡಳಿತ ಮಂಡಳಿಯ ಎಕ್ಸ್ ಅಫಿಷಿಯಾ (ಪದನಿಮಿತ್ತ) ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದ ದೇವಾದಾಯ ಶಾಖೆಯ ಆಯುಕ್ತರು ಶ್ರೀ ಕೆ. ರಾಮಚಂದ್ರ ಮೋಹನ್ ರವರಿಗೆ ಸ್ವಾಮಿಯವರ ಪ್ರಸಾದವನ್ನು ನೀಡುತ್ತಿರುವ ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ.ಹೆಚ್. ವೆಂಕಯ್ಯಚೌದರಿ, ಐ.ಆರ್.ಎಸ್., ರವರು.

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-02–2025 and Posting at Tirupati RMS.Regd. with the Registrar of Newspapers for India under RNI. No. APKAN/2021/80589. Postal Regd.No.TRP/156/2024-2026
"Licenced toPost Without Prepayment No. PMGK/RNP/WPP-04(6)/ 2024-2026"
Posting on 5th of Every Month.



# ಶ್ರೀ ಲಕ್ಷ್ಮೀ ಜಯಂತಿ
# 14-03-2025